Gītagalŭ

1855

ದೇವರ ಸ್ತೋತ್ರಕ್ಕಾಗಿ

ದೇವಾಲಯಗಳಲ್ಲಿಯೂ ಮನೆಗಳಲ್ಲಿಯೂ

ಭಕ್ತರು ಹಾಡ ತಕ್ಕ

ಗೀತಗಳು.

ಕೀರ್ತನೆಗಳಿಂದಲೂ, ಗೀತಗಳಿಂದಲೂ, ಆತ್ಮಭಾವವಾದ ಹಾಡುಗಳಿಂದಲೂ,
ಒಬ್ಬರ ಸಂಗಡ ಒಬ್ಬರು ಮಾತಾಡಿ ಕೊಂಡು,
ನಿಮ್ಮ ಹೃದಯಗಳಲ್ಲಿ ಕರ್ತನಿಗೆ ಹಾಡಿ ಬಾರಿಸಿರಿ. ಎಫೆಸ್. ೫, ೧೯.

ನಾಲ್ಕನೇ ಛಾಪೆ.

ಮಂಗಳೂರಿನ ಮಿಶ್ಯನ್ ಪ್ರೇಸಿನಲ್ಲಿ ಛಾಪಿಸಿದ್ದು.
೧೮೫೫.

[Doxologie.]

ಸಮಸ್ತಜೀವರಾಶಿಯೇ,

ಸಮಸ್ತ ದೂತಸೈನ್ಯವೇ,

ಪಿತಾಪುತ್ರಾತ್ಮಕರಿಗೆ

ಅನಂತ ಸ್ತೋತ್ರ ಮಾಡಿರಿ!

ಗೀತಗಳು.

೧.

Mel. O du Liebe meiner Liebe.

೧. ಯೇಸು ಕ್ರಿಸ್ತಗೆನ್ನ ಪ್ರಾಣ — ವಶ ಮಾಡಿ ಕೊಟ್ಟಿದೆ; — ದೇಹ ಬಿಡುವ ಪ್ರಯಾಣ — ರಮ್ಯವಾದದ್ದೆನಗೆ. — ಈ ಪ್ರಪಂಚವಂ ಬಿಡೋಣ — ನನಗೆ ಸಂತೋಷವು; — ಕ್ರಿಸ್ತನ ಬಳಿಯಲಿರೋಣ — ನನ್ನ ಸುಖಪೂರ್ತಿಯು.

೨. ಇಹಪರದಲ್ಲಿ ಭೀತಿ — ನನಗನ್ನು ಬಾರದು; ನನ್ನ ರಕ್ಷಕನ ಪ್ರೀತಿ — ನನ್ನ ಹೊಂದ್ಯೆ ಗೀತವು. — ಆತ ನೋಡಿ ನನ್ನ ಶಾಪ, — ಚೆಲ್ಲಿ ತನ್ನ ರಕ್ತವ, — ರಕ್ತದಿಂದ ನನ್ನ ಪಾಪ — ಪರಿಹಾರ ಮಾಡಿದ.

೩. ತಪ್ಪಿ ಹೋದ ಕುರಿಯನ್ನು — ಯೇಸು ಹುಡುಕಿದನು. — ಬುದ್ಧಿ ಕೆಟ್ಟ ಶತ್ರುವನ್ನು — ಆತ ಸ್ನೇಹಿಸಿದನು. — ಆತ್ಮಾ! ಪೂರ್ಣ ಸ್ನೇಹದಿಂದ — ಯೇಸು

ವನ್ನು ಪುಡುಕು; — ನಿನ್ನ ಪೂರ್ಣ ಶಕ್ತಿಯಿಂದ — ಈಶನನ್ನು ಸೇವಿಸು!

೨.

Mel. Sicilian mariner's hymn.

೧. ಯೇಸು ಕ್ರಿಸ್ತನೇ, — ಮರಣಾರಿಯೇ, — ನಮ್ಮ ಜೀವಜೀವವೇ! — ನಿನ್ನ ಶ್ರಮೆ — ನಮ್ಮ ಕ್ಷಮೆ. — ಕಾಯಿ, ಕಾಯಿ ನಮ್ಮನ್ನು!

೨. ಕಳ್ಳನಂತೆಯೇ — ನಮ್ಮ ದಂಡನೆ — ಪೂರ್ಣೆಯಾಗಿ ತಾಳಿದೆ. — ನೀ ಪವಿತ್ರ — ದೈವಮಿತ್ರ, — ಕಾಯಿ, ಕಾಯಿ ನಮ್ಮನ್ನು!

೩. ದುಷ್ಟ ಪಾಪವೂ — ಮುಳ್ಳುಮಾಲೆಯೂ — ನಿನ್ನ ಘನವಾದವು. — ನಮ್ಮ ನಿಂದೆ — ನೀನು ತಿಂದೆ. — ಕಾಯಿ, ಕಾಯಿ ನಮ್ಮನ್ನು!

೪. ಬಡ ಪಾಪಿಗೆ — ನಿನ್ನ ಕ್ರೂಜೆಯೇ — ಜೀವವೃಕ್ಷವಾಗಿದೆ. — ನಿನ್ನ ದುಃಖ — ನಮ್ಮ ಸುಖ. — ಕಾಯಿ, ಕಾಯಿ ನಮ್ಮನ್ನು!

೫. ದಿವ್ಯ ಪ್ರೀತಿಯೇ, — ದೇವಪುತ್ರನೇ, — ಕನ್ಯಾಸ್ತ್ರೀಯ ಮಗುವೇ, — ಜೀವದಲ್ಲೂ — ಮೃತಿಯಲ್ಲೂ ಕಾಯಿ, ಕಾಯಿ ನಮ್ಮನ್ನು!

೩.

Mel. Lobe den Herren den mächtigen König.

೧. ಸ್ತೋತ್ರವನುತ್ತಮ ದೇವರಿಗರ್ಪಿಸ ಬನ್ನಿ!—ವೀಣೆಯ ಗಾಯನವೇ, ಸಮುದಾಯವ ಕರಿ!—ದೂತರಾಳು—ಯೇಳಲಿ ಕೀರ್ತನೆಯು;—ಸ್ತೋತ್ರಸುಗಂಧವ ತನ್ನಿ!

೨. ಭೂದಿವಲೋಕಗಳಾತನ ಸ್ವಾಮಿತ್ವ ರಾಜ್ಯ.—ಯಾವನು ಭೂದಿವರಾಜನ ಸಂಗಡ ವ್ಯಾಜ್ಯ—ಮಾಡುವನು?—ಆತನು ನುಡಿಯಲು—ಮರ್ತ್ಯರ ಗದ್ದಲ ತ್ಯಾಜ್ಯ.

೩. ಕ್ರಿಸ್ತನು ಕ್ರಯಕ್ಕೆ ಕೊಂಡ ಜನಾಂಗವಿದ್ಧೇವೆ:—ರಾಜನ ಚಿತ್ತಕ್ಕೆ ಒಪ್ಪಲಿ ದಾಸರ ಸೇವೆ!—ನಮ್ಮೊಳಗೆ ಕ್ರಿಸ್ತನು ವಾಸಿಸಲಿ,—ಹರ್ಷದಿ ಜೀವಿಸುತ್ತೇವೆ.

೪.

Mel. Valet will ich dir geben.

೧. ಜಗತ್ತು ನಿನ್ನ ಪ್ರೀತಿ—ನಿರೀಕ್ಷಿಸುವದು;—ನನ್ನಾತ್ಮ ನಿನ್ನ ನೀತಿ—ಅಪೇಕ್ಷಿಸುವದು.—ನನ್ನಲ್ಲಿ ನಿನ್ನ ಜ್ಞಾನ—ಪ್ರಕಾಶಿಸುತ್ತಲೆ,—ಸಂತೋಷದಿಂದ ಮಾನ—ಮಾಡೇನು ನಿನಗೆ.

೨. ನೀ ಪಾಪಬಂಧದಿಂದ—ನನ್ನನ್ನು ಬಿಡಿಸಿ, ಅಗಾಧ ಕೇಡಿನಿಂದ—ರಕ್ಷಣ್ಯ ಮಾಡಿದಿ.—ನಿರ್ದೋಷ ನೀತಿಯನ್ನು—ನಿನ್ನಿಂದ ಪಡೆದೆ;—ಅನಂತ ಜೀವವನ್ನು—ನಿನ್ನಿಂದ ಪೊಂದುವೆ.

೩. ಓ ಪಾಪಿ, ನಿನ್ನ ಪಾಪ—ಅಸಹ್ಯವಾದರೆ,—ಮನಸ್ಸಿನ ಸಂತಾಪ—ನಿನ್ನಲ್ಲಿ ಪುಟ್ಟಲ್ಕೆ,—ದಯಾಳ ಕರ್ತನನ್ನು—ಥಟ್ಟಾಗಿ ಪ್ರಾರ್ಥಿಸು!—ನಿನ್ನೆಲ್ಲಾ ಕಷ್ಟವನ್ನು—ಯೆಹೋವ ತೈವನು.

೫.

Mel. Salvation, oh the joyful sound.

೧. ಈ ಶುದ್ಧವಾದ ದಿನದಿ—ಸತ್ಯದ ಯೇಸುವು ಮಹತ್ತಿನಿಂದುಜ್ಜೀವಿಸಿ,—ಸಮಾಧಿ ಬಿಟ್ಟನು.—ಮಹಿಮೆ ಘನಂಗಳಲ್ಲಿ—ನಮ್ಮ ಕರ್ತನ ಸ್ವತಂತ್ರ;—ಯೇಸು ಕ್ರಿಸ್ತ ನಮ್ಮ ಜೀವ;—ಹಲ್ಲೆಲೂಯಾ ಹಾಡಿರಿ!

೨. ಈ ಶುಭವರ್ತಮಾನವು—ಸಮಸ್ತ ಲೋಕದಿ ಸಮಸ್ತ ಮಾನವರೊಳು—ಪ್ರಸಿದ್ಧಿಯಾಗಲಿ!—ಮಹಿಮೆ ಘನಂಗಳಲ್ಲಿ—ನಮ್ಮ ಕರ್ತನ ಸ್ವತಂತ್ರ;—ಯೇಸು ಕ್ರಿಸ್ತ ನಮ್ಮ ಜೀವ;—ಹಲ್ಲೆಲೂಯಾ ಹಾಡಿರಿ!

೩. ಮೃತ್ಯುಲಿ ಶ್ಯೇರಿದಾತನು—ಯೆಂದೆಂದೂ ಬಾಳಲಿ! ಆಕಾಶಕ್ಕೇರಿದಾತನು—ಜಗತನ್ನಾಳಲಿ!—ಮಹಿಮೆ ಘನಂಗಳಲ್ಲಿ—ನಮ್ಮ ಕರ್ತನ ಸ್ತೋತ್ರ;—ಯೇಸು ಕ್ರಿಸ್ತ ನಮ್ಮ ಜೀವ;—ಹಲ್ಲೆಲೂಯಾ ಹಾಡಿರಿ!

೪. ಓ ಯೇಸುವೆ, ಬಾ! ಶಿಕ್ಷೆಯ—ವಿರೋಧಿಗೆ ಕೊಡು! ಬಾ! ಸಭೆಯ ನಿರೀಕ್ಷೆಯ—ನಿನ್ನಲ್ಲಿ ತೀರಿಸು!—ಮಹಿಮೆ ಘನಂಗಳಲ್ಲಿ—ನಮ್ಮ ಕರ್ತನ ಸ್ತೋತ್ರ;—ಯೇಸು ಕ್ರಿಸ್ತ ನಮ್ಮ ಜೀವ;—ಹಲ್ಲೆಲೂಯಾ ಹಾಡಿರಿ!

೬.

Mel. Sieh, hier bin ich, Ehrenkönig.

೧. ಬಡ ಪಾಪಿ ನಾನು ಬಂದೆ—ನಿನ್ನ ಮುಂದೆ, ದೇವರೇ!—ನೀನೇ ನೀತಿಯುಳ್ಳ ತಂದೆ;—ಕೊಡು ಶಾಂತಿ ಯೆನಗೆ!—ಕೇಳು ನನ್ನ—ಮೊರೆಯನ್ನು;—ಭಯಭ್ರಷ್ಟನಾಗಿದ್ದೇ.

೨. ಪ್ರಾಣ ಕುಂದಿ, ನನ್ನ ಭಾರ—ಇನ್ನೂ ಮೇಲೆ ತಡಿಯೆ.—ಕೊಡು ಪಾಪಪರಿಹಾರ,—ಕೊಡು, ಪ್ರಿಯ ಯೇಸುವೇ!—ಕೇಳು ನನ್ನ—ಮೊರೆಯನ್ನು;—ಪಾಪ ಹೋಕ್ಕಿಸೆನಗೆ.

೩. ದೇವರಾತ್ಮನೇ, ನನ್ನಲ್ಲಿ — ದಿವ್ಯ ಜ್ವಾಲೆ ಹೊತ್ತಿಸು! — ನನ್ನ ಅಂತಃಕರಣದಲ್ಲಿ — ಶೇರಿ, ವಾಸವಾಗಿರು! ಕೇಳು ನನ್ನ — ಮೊರೆಯನ್ನ; — ನಾನು ಶುದ್ಧಿಹೋನನು.

೨.

Mel. Jesus meine Zuversicht.

೧. ಉಂಟು ವೊಂದು ದೇಶವು; — ಅಲ್ಲಿ ಪಾಪವೇನೂ ಇಲ್ಲ. — ಮೃತಿಗೂ ಸೈತಾನಗೂ — ಅಲ್ಲಿ ಅಧಿಕಾರವಿಲ್ಲ. — ಬನ್ನಿ, ಭ್ರಾತೃಗಳಿರಾ, — ಅಲ್ಲೇ ಶೇರ ಹೋಗುವಾ!

೨. ಅಲ್ಲಿ ವೊಬ್ಬ ಉತ್ತಮ — ವೈದ್ಯ ವಾಸವಾಗಿದ್ದಾನೆ. — ಯೆಲ್ಲಾ ರೋಗಕ್ಕೌಷಧ — ಕೊಟ್ಟು, ಸ್ವಸ್ಥ ಮಾಡುತ್ತಾನೆ. — ಬನ್ನಿ, ಭ್ರಾತೃಗಳಿರಾ, — ಅಲ್ಲೇ ಸ್ವಸ್ಥವಾಗುವಾ!

೩. ಅಲ್ಲಿ ಬಲ್ಲಿದರಸು — ಪ್ರಜೆಯಂ ಕಾಪಾಡುತ್ತಾನೆ. ಹಸಿದಾಹಗಳಿಗೂ — ಆತ ತೃಪ್ತಿಮಾಡುತ್ತಾನೆ. — ಬನ್ನಿ, ಭ್ರಾತೃಗಳಿರಾ, — ಅಲ್ಲೇ ಸುಖ ಹೊಂದುವಾ!

೪. ನಿತ್ಯ ರಾಜ್ಯದೊಳಗೆ — ಕ್ರಿಸ್ತನೆಮ್ಮ ಶೇರಿಸ್ಯಾನು. — ಕಡುರೋಗಿ ಬಂದರೆ, — ಕ್ಷೇಮವಾತನೇ ಕೊಟ್ಟಾನು. — ಬನ್ನಿ, ಭ್ರಾತೃಗಳಿರಾ, — ಅಲ್ಲೇ ಶೇರ ಹೋಗುವಾ!

೮.

Mel. Meinen Jesum lass ich nicht.

೧. ಯೇಸು ಕ್ರಿಸ್ತಾ, ನಿನಗೆ — ನಿತ್ಯ ಘನ ಕೊಡುತ್ತೇವೆ.
ನಿನ್ನ ಕೃಪೆಯಿಂದಲೇ — ನಿನ್ನ ಪ್ರಜೆಯಾಗಿದ್ದೇವೆ. —
ನೀನು ಇಹಪರದಿ — ನಮ್ಮ ಗತಿಯಾಗಿದ್ದೀ.

೨. ನಮ್ಮವಸ್ಥೆ ತಿಳಿದು, — ದೈವಸನ್ನಿಧಾನ ಬಿಟ್ಟಿ;
ನಮ್ಮ ದ್ವೇಷವರಿತು, — ನಮ್ಮ ಮೇಲೆ ಪ್ರೀತಿ ಇಟ್ಟಿ.
ಆದಿತೇಜ ತ್ಯಜಿಸಿ, — ನರನಾಗಿ ಹುಟ್ಟಿದಿ.

೩. ನಮ್ಮ ಕರ್ಮರಾಶಿಗೆ — ಪ್ರಾಯಶ್ಚಿತ್ತ ಮಾಡ ಬಂ
ದಿ; — ಮರಣಸ್ಥರೊಳಗೆ — ಹೊಸ ಜೀವವನ್ನು ತಂದಿ.
ನಮ್ಮ ಶಾಪ ಧರಿಸಿ, — ನಿನ್ನ ರಕ್ತ ಚೆಲ್ಲಿದಿ.

೪. ನೀನು ಸತ್ತು ಜೈಸಿದಿ — ಮರಣದ ರಾಜನನ್ನು;
ನಿನ್ನ ಜೀವ ವರ್ಪಿಸಿ, — ಕೊಂಡು ಕೊಂಡಿ ಕ್ಷೇಮವನ್ನು
ಪಾಪಿಗಳ ವಂಶಕ್ಕೆ; — ನಿನ್ನ ಪ್ರೀತಿ ದೊಡ್ಡದೇ!

೫. ಹೊಸಿಯನ್ನ, ಯೇಸುವೇ! — ಕ್ಷಣ ಮಾತ್ರ
ಸತ್ತು, ಗೆದ್ದಿ. — ಇಳಿದು ಪಾತಾಳಕ್ಕೆ, — ದೈವತೇಜದಿಂ
ದ ಯೆದ್ದಿ. — ಈಗ ಶ್ರೇಷ್ಠ ಪೀಠದಿ — ಕೂತು, ರಾಜ್ಯವಾ
ಳುತ್ತೀ.

೬. ಕ್ರಿಸ್ತನೇ, ನೀ ಮರಳಿ — ಚೀಯೋನಲ್ಲಿ ಸೇರು

ವಾಗ,—ನಿಶ್ವ ರಾಜ್ಯ ಸ್ಥಾಪಿಸಿ—ಶೇಜಪ್ರೀತವೇರುವಾಗ, ನಿನಗೆಲ್ಲಾ ಲೋಕವು—ನಮಸ್ಕಾರ ಮಾಡಾೖದು.

೭. ಈಗ ನಾವು ನಿನಗೆ—ನಂಬಿ ಘನ ಕಾಡುತ್ತೀವೆ.—ನಿನ್ನ ಕೃಪೆಯಿಂದಲೇ—ನಿನ್ನ ಪ್ರಜೆಯಾಗಿದ್ದೀವೆ.—ನಮಗಿಪಾಪರದಿ—ನೀನೇ ಗತಿಯಾಗಿದ್ದೀ.

೮.

Mel. Gott wird ein Mensch.

೧. ಬೇಥ್ಲೇಮಿನ ಗ್ಯಾಸ್ಥಾನದಲ್ಲಿ—ಮನುಷ್ಯಪುತ್ರ ಪುಟ್ಟಲು,—ಸಮಸ್ತ ದೇವ ದೂತರಲ್ಲಿ—ಮಹಾ ಸಂಶ್ಯೋಷವಾಯಿತು.—ರಾತ್ರೀಲಿ ಮೆರವಣಿಗಾಗಿ—ಕುರುಬರಾಳ್ ಪ್ರತ್ಯಕ್ಷವಾಗಿ—ದಿವ್ಯ ಸೈನ್ಯಂಗಳು—ಪ್ರಕಾಶವಿತ್ತವು.—"ಕರ್ತಂಗೆ ಊರ್ಧ್ವದಲ್ಲಿ ಮಾನ!—ಇಾ ಲೋಕದಲ್ಲಿ ಸಮಾಧಾನ!—ಮನುಷ್ಯರಾಳಗೆ—ಆನಂದ!" ಯೆಂದರು.

೨. ಪಾಪಿಷ್ಟರಲ್ಲಿ ಪ್ರೀತಿ ಇಟ್ಟು—ನಮ್ಮಲ್ಲಿ ಯೇಸು ಬಂದನು.—ಅತ್ಯುನ್ನತ ನಿವಾಸ ಬಿಟ್ಟು,—ಇಾ ಲೋಕದಾಳಗಿಳಿದು,—ಸ್ವರಾಜ್ಯಕ್ಕೆ ಪ್ರಾರಂಭ ಮಾಡಿ,—ಸೈತಾನನಾಡನೆ ಹೋರಾಡಿ,—ಅಘೋರ ಯುದ್ಧದಿ—ವಿಜಯ ಗೆದ್ದನು.—ಹ್ಯಾಗಾಗಿ ಯೇಸು ಕ್ರೂಜೆಯಲ್ಲಿ

ಪವಿತ್ರ, ರಕ್ತವನ್ನು ಚೆಲ್ಲಿ, —ಸಮಾಧಿಯಿಂದಲ್ಲೇ —ಸ ಜೀವನೆದ್ದನು.

೩. ಓ ಯೇಸು, ನೀ ನನ್ನಲ್ಲಿ ಹುಟ್ಟಿ—ಸದಾ ನಿವಾಸವಾಗಿರು! —ಅಶುದ್ಧ ನನ್ನ ಹೃದ ಮುಟ್ಟಿ, —ಕಳಂಕದಿಂದ ಬಿಡಿಸು! —ಸಮಸ್ತ ಸಭೆಯಂ ಕಾಪಾಡಿ, —ಪ್ರಖ್ಯಾತ ರಾಜ್ಯಭಾರ ಮಾಡಿ, —ಶತ್ರು ವಿನಾಶಕ್ಕೆ —ಸಹಾಯವಂ ಕಾಡು! —ಕಡೇ ವಿಜಯದಿನದಲ್ಲಿ —ಮಹಾಶ್ರುಪುಳ್ಳ ಪ್ರಭೆಯಲ್ಲಿ —ನಿನ್ನನ್ನು ಕಂಡರೆ, —ಸಂತೋಷ ತೀರದು.

೧೦.

Mel. Sieh, hier bin ich, Ehrenkönig.

೧. ಜೀವಕಾಂತಿಯನ್ನು ಬಿಟ್ಟ —ರಕ್ತಮಯ ಮುಖವೇ, —ಮುಳ್ಳಿನ ಕಿರೀಟವಿಟ್ಟ —ಘಾಯವಾದ ತಲೆಯೇ, —ದ್ವೇಷವೆಷ್ಟು —ನಿಂದೆ ಯೆಷ್ಟು —ನಿನ್ನ ಮೇಲೆ ಬಂದದೆ!

೨. ನೀನು ಅತ್ತ ಹೇತು ಯೇನು? —ನನ್ನ ದುಷ್ಟ ಪಾಪವೇ. —ನೀನು ಸತ್ತ ಹೇತು ಯೇನು? —ನನ್ನ ಘೋರ ಶಾಪವೇ. —ಕ್ರೂಜೆಯಲ್ಲಿ —ರಕ್ತ ಚಲ್ಲಿ, —ಜೀವ ಕೊಟ್ಟಿ ನನಗೆ.

೩. ಯಾಕೆ ನಿನ್ನ ಮೇಲೆ ಕಷ್ಟ, —ದುಖ್ಖ, ಶ್ರಮೆ, ಬಿದ್ದವು? —ನಿತ್ಯನನ್ನ ಜೀವನಷ್ಟ —ಯಾಕೆ ಹಿಡುಕೊಂಡಿತು? —ಯಾಕೆ ನಿನ್ನ—ಶತ್ರುವಿನ —ಇಚ್ಛೆ ತೃಪ್ತಿಯಾಯಿತು?

೪. ನಿನ್ನ ಶುದ್ಧ ರಕ್ತದಿಂದ —ನನ್ನ ಪಾಪ ತೊಳೆದು, ನಿನ್ನ ಆತ್ಮಶಕ್ತಿಯಿಂದ —ಅಂಧಕಾರ ಬಿಡಿಸು! —ಕಡೆಯಲ್ಲಿ —ನೀನಿದ್ದಲ್ಲಿ, —ಕರ್ತಾ, ಯೆನ್ನ ಶೇರಿಸು!

೧೧.

Mel. Wie schön leucht't uns der Morgenstern.

೧. ಪವಿತ್ರ ದೇವರಾತ್ಮನೇ, —ನೀ ಹೃದಯದ ಸೂರ್ಯನೇ, —ನಮ್ಮೊಳ್ ಪ್ರವೇಶವಾಗು! —ನಮ್ಮಂತರ್ಭಾವದೊಳಗೆ —ಉದೈಸಿ, ಯೆಡೆ ಬಿಡದೆ —ಪ್ರಕಾಶಪ್ರದನಾಗು! —ಆತ್ಮಾ, —ಆತ್ಮಾ, —ಸತ್ಯ ಜ್ಞಾನ, —ನಿನ್ನ ದಾನ; —ನಿನ್ನ ಕಾಂತಿ —ನಮ್ಮ ನಿತ್ಯವಾದ ಶಾಂತಿ.

೨. ಪವಿತ್ರವಾದ ಬುಗ್ಗೆಯೇ, —ನಮಾತ್ಮದಾಹಕ್ಕೆ ಯೆರೆ —ಸಜ್ಜೀವಜಲವನ್ನು! —ನಮ್ಮನ್ನು ತೊಳೆದು ಬಿಡು; —ನಮ್ಮೊಳಗಿಂದ ಬಿಡಿಸು —ಅಸತ್ಯ ಮಲವನ್ನು! —ಯೆರೆ, —ಯೆರೆ, —ಪಾನಕ್ಕಾಗಿ, —ಸ್ನಾನಕ್ಕಾಗಿ, —ಜಲವನ್ನು; —ಹೊಯ್ದು, ಸಲಹು ನಮ್ಮನ್ನು!

೩. ಪವಿತ್ರವಾದ ಅಗ್ನಿಯೇ,—ನಮ್ಮೊಳಗಿನ ಮೈಲಿಗೆ—ಸುಟ್ಟ್ಹೋಗಲಿ ನಿನ್ನಿಂದ!—ಸೈತಾನನಧಿಕಾರವಂ ನಮ್ಮೊಳಗಿನ ರಾತ್ರಿಯಂ—ನೀ ದಿವ್ಯ ಜ್ವಾಲೆಯಿಂದ ಛಿನ್ನ—ಭಿನ್ನ—ಮಾಡಲಾಗಿ,—ಸಿದ್ಧರಾಗಿ—ನಿನ್ನ ಸೇವೆ—ಮಾಡ ತ್ವರೆ ಪಡುತ್ತೇವೆ.

೧೨.

Mel. Gott sey Dank in aller Welt.

೧. ನನ್ನ ಯೇಸು ಕ್ರಿಸ್ತನೇ,—ನಿನ್ನ ಸ್ತೋತ್ರ ಪಾಡುವೆ;—ನಿನ್ನ ದಯ ನನಗೆ—ಅಶಿಪಿತವಾಗೆದೆ.

೨. ನಿನ್ನ ಚಿತ್ತದಿಂದಲೇ—ಇಹದಲ್ಲಿ ಹುಟ್ಟಿದೆ; ನಿನ್ನ ಕೃಪೆಯಿಂದಲೇ—ಪರದಲ್ಲಿ ಶೇರುವೆ.

೩. ಪಾಪಿಗಳಿಗೋಸ್ಕರ—ನೀನು ತಾಳಿ ಶಾಪವ,—ಜೀವಬಲಿ ಅರ್ಪಿಸಿ,—ನಮ್ಮ ಜೀವ ಕಾದಿದ್ದೀ.

೪. ಗೋರಿಕತ್ತಲೊಳಗೆ—ಕರ್ತಾ, ನೀನು ಶೇರಲೇ,—ಮರಣದ ನೆರಳು—ಪರಿಹಾರವಾಯಿತು.

೫. ನಿನ್ನ ದೇಹ, ಯೇಸುವೇ—ಆತ್ಮಾಹಾರವಾಗೆದೆ;—ನಿನ್ನ ರಕ್ತ, ಕ್ರಿಸ್ತನೇ,—ಜೀವಪಾನ ನಮಗೆ.

೬. ನಿನ್ನ ಗುಣ ಪ್ರೀತಿಯು; — ನಿನ್ನ ಕೃತ್ಯ ನೀತಿಯು. ನಿನ್ನ ಆಜ್ಞೆ ತ್ರಾಣವೇ; — ನಿನ್ನ ಮಾತು ಪ್ರಾಣವೇ.

೭. ಯೇಸು, ಕರುಣದಲಿ — ನನ್ನ ಪಾಪ ಕ್ಷಮಿಸಿ, ನನ್ನ ಹೃದಯದೊಳು — ಸೇರಿ, ವಾಸವಾಗಿರು!

೮. ಆಗ ನಿನ್ನ ಪ್ರೀತಿಯು — ನನ್ನ ಕ್ಷೇಮವ ಹುದು. — ನಿನ್ನ ಜ್ಞಾನ ನನ್ನೊಳು — ಆತ್ಮ ಜ್ಯೋತಿಯ ಹುದು.

೯. ನನ್ನ ಯೇಸು ಕ್ರಿಸ್ತನೇ, — ನಿನ್ನ ಸ್ತೋತ್ರ ಮಾ ಡುವೆ. — ನಿನ್ನ ದಯ ನನಗೆ — ಅತಿಹಿತವಾಗಿದೆ.

೧೭.

Mel. Ringe recht, wenn Gottes Gnade.

೧. ಯೇಸು ಕ್ರೂಜೆವೃಕ್ಷದಲ್ಲಿ — ತೂಗುತ್ತಿರುವಾ ಗಲು, — ಆತ ದೇಹಾತ್ಮಂಗಳಲ್ಲಿ — ದುಖ್ಖ ತಾಳುತ್ತಿ ದ್ದನು.

೨. ಕಳ್ಳರಲ್ಲಿ ಕಳ್ಳನೋಲು — ಕ್ರೂಜೆಯಲ್ಲಿ ಸತ್ತನು; ಆತನೆದೆಗೀಟಿಕೋಲು — ಹಾದವಾಗಿ ತಾಗಿತು.

೩. ಸ್ವಲ್ಪ ಜನ ಪ್ರೀತಿಯಿಂದ — ಹತ್ರ ನಿಲ್ಲುತ್ತಿದ್ದ ರು; — ನಿಂತು, ಘೋರ ದುಖ್ಖದಿಂದ — ಬಿಕ್ಕಿ ಅಳುತ್ತಿ ದ್ದರು.

೪. ಮುಂಚೆ ಜ್ಞಾನವೃಕ್ಷದಿಂದ—ಮೃತ್ಯುಫಲ ಹು
ಟ್ಟಿತು;—ಈಗ ಕ್ರೂಜೆವೃಕ್ಷದಿಂದ—ಜೀವಫಲವಹು
ದು.

೫. ಹಾಗೆ ಆಳ್ದ ಕ್ರಿಸ್ತನಲ್ಲಿ—ನಿತ್ಯ ಸ್ನೇಹಮೂಲ
ವು—ಯೇಸುವಿನ ಶ್ರಮೆಯಲ್ಲಿ—ನಿತ್ಯ ಸುಖವಾಯಿತು.

೬. ಶುಭಸಮಾಚಾರವನ್ನು—ಕೇಳಿ, ಕ್ರೂಜೆ ದೃಷ್ಟಿ
ಸಿ,—ಮಾನವ ಕುಮಾರನನ್ನು—ನಂಬಿ, ಸ್ತೋತ್ರ ಮಾ
ಡಿರಿ!

೧೪.

Mel. Christus der ist mein Leben.

೧. ಹಟ್ಟಾದ ಬಂಡೆಯಲ್ಲಿ—ಸಮಾಧಿಯಾಗಿದು,—
ಅಮೂಲ್ಯ ಬೀಜವನ್ನು—ಯೊಸೇಫನಿಟ್ಟನು.

೨. ಆ ತೋಟ ಪೃಥ್ವಿಯಲ್ಲಿ—ವಿಶೇಷವಾದದ್ದು;
ಸಮಸ್ತ ಬೀಜದಲ್ಲಿ—ಆ ಬೀಜ ಶ್ರೇಷ್ಟವು.

೩. ತ್ರಿತೀಯ ದಿನದಲ್ಲಿ—ಉದಯವಾಗಲು,—ಆ
ಬೀಜ ಭೂಮಿಯಿಂದ—ಮೊಳಕೆಯಾಯತು.

೪. ಆ ದಿನದಲ್ಲಿ ಜೀವ—ಸಾವಿಂದುಂಟಾಯಿತು;
ಆ ದಿನದಲ್ಲಿ ಸಾವು—ಸ್ವಾಧೀನವಾಯಿತು.

೫. ಸಮಾಧಿಯಲ್ಲಿ ಶೇರಿ,—ಓ ಯೇಸು ಕ್ರಿಸ್ತನೇ, ನೀ ಜೀವಮಾರ್ಗವನ್ನು—ಪ್ರಸಿದ್ಧಿ ಮಾಡಿದೆ.

೬. ನಿನ್ನಲ್ಲಿ ದೃಢವಾಗಿ—ವಿಶ್ವಾಸಿಸಿದರೆ,—ಸಮಾಧಿಯಲ್ಲಿ ಶೇರ—ನಾನೇತಕಂಜುವೆ?

೭. ಈ ದೇಹಕ್ಕೆ ಸಮಾಧಿ—ವಿಶ್ರಾಂತಿಸ್ಥಳವು;—ನನ್ನಾತ್ಮವಾಟಿ ದಾಟಿ—ಉಜ್ಜೀವಿಸುವದು.

೮. ನೀ ಮೃತ್ಯುಶಕ್ತಿಯನ್ನು,—ಓ ಕರ್ತಾ, ಜೈಸಿದೆ; ನಾನೂ, ನಿನ್ನಲ್ಲಿ ನಂಬಿ,—ವಿಜಯ ಹೊಂದುವೆ.

೧೫.

Mel. Allein Gott in der Höh' sey Ehr.

೧. ಸರ್ವಾನ್ನತಂಗೆ ಸ್ತೋತ್ರವು;—ಆತಂಗೆ ಸ್ಥಿರ ಸೇವೆ—ಮಾಡ್ವೇವು; ನಾವಿನ್ನೆಂದಿಗೂ—ಸುಭದ್ರವಾಗಿದ್ದೇವೆ.—ನಮ್ಮಲ್ಲಿ ದಿವ್ಯಾನಂದವೇ;—ಮಹಾಸಂತೋಷ ಬಂದದೆ;—ವಿರುದ್ಧ ತೀರಿತಲ್ಲಾ.

೨. ಓ ಸರ್ವಸೃಷ್ಟಿರಾಜನೇ,—ಆಶ್ಚರ್ಯ ನಿನ್ನ ನೀತಿ! ಓ ನಮ್ಮ ಪ್ರಿಯ ತಂದೆಯೇ,—ಅತ್ಯಂತ ನಿನ್ನ ಪ್ರೀತಿ! ಅಶೋಧ್ಯ ನಿನ್ನ ಜ್ಞಾನವು;—ಸಂಪೂರ್ಣ ನಿನ್ನ ಶಕ್ತಿಯು; ಓ ಒಳ್ಳೇ ಯಜಮಾನ!

೩. ಓ ದೇವರ ಕುಮಾರನೇ, — ಓ ತಂದೆಯ ಪ್ರತಿಕಾಂತಿ! — ಕರ್ಮಾಬ್ಧಿಯೊಳ್ ಬಿದ್ದವರ್ಗೆ — ನಿನ್ನಿಂದ ಬಂತು ಶಾಂತಿ. — ನೋಡೈ ನಮ್ಮವಸ್ಥೆಗಳಂ! — ತಾರೈ ಮನಃ ಸಂತೋಷವಂ, — ಕಾರುಣ್ಯ ನಮ್ಮಲ್ಲಿಟ್ಟು!

೪. ಸರ್ವೋತ್ತಮ ಸದಾತ್ಮನೇ, — ಸೈತಾನನಿಂ ಕಾಪಾಡು! ಯೇಸುವಿಮುಕ್ತ ಜನಕ್ಕೆ — ಸತ್ಯೋಪದೇಶ ಮಾಡು! — ಕಷ್ಟಂಗಳೆಲ್ಲಾ ಬಿಡಿಸು; — ಮನೋವಿಶ್ರಾಂತಿಯಂ ಕೊಡು; ನಮ್ಮಲ್ಲಿ ವಾಸ ಮಾಡು!

೧೬.

Mel. Mein Glaub ist meines Lebens Ruh.

೧. ಓ ನಿತ್ಯ ಜೀವರಾಜನೇ, — ಯೆದ್ದಿ ಪ್ರಕಾಶದೊಡನೆ ಸಮಾಧಿಯೊಳಗಿಂದ! — ನಿನ್ನನ್ನು ಶಿಷ್ಯರುಗಳು — ಕಂಡನುಜೀವಿಸಿದರು — ಮಹಾಸಂತೋಷದಿಂದ. — ಓ ಯೇಸು, ನಿನ್ನ ಜೀವವೇ — ಜೀವೋದಯ ಜಗತ್ತಿಗೆ.

೨. ಸಮಸ್ತ ಗುಡ್ಡದಲ್ಲಿಯೂ — ಸಮಸ್ತ ತಗ್ಗಿನಲ್ಲಿಯೂ — ಪುಷ್ಪಂಗಳೇಳುತ್ತಾವೆ; — ವಸಂತಕಾಲ ತಿಳಿದು, ಭೂಗರ್ಭದಿಂದ ಯೆಚ್ಚತ್ತು, — ಸಂತೋಷವಾಗಿದ್ದಾವೆ. ಓ ಯೇಸು, ನಿನ್ನ ಜೀವವೇ — ಜೀವೋದಯ ಜಗತ್ತಿಗೆ.

೩. ಅಮೂಲ್ಯವಾದ ಬೀಜವ — ಯೋಸೇಫನಿಟ್ಟು

ಮುಚ್ಚಿದ—ಶಿಲಾಸಮಾಧಿಯಲ್ಲಿ;—ಅಮೂಲ್ಯವಾದ
ಪುಷ್ಪವು—ಆ ಬೀಜದಿಂದ ಪುಟ್ಟಿತು—ಯೇಕಾಂತ
ತೋಟದಲ್ಲಿ;—ಓ ಯೇಸು, ನಿನ್ನ ಜೀವವೇ—ಜೀವೋ
ದಯ ಜಗತ್ತಿಗೆ.

೪. ಇನ್ನು ಸಮಸ್ತ ಲೋಕಕ್ಕೆ—ದಿವ್ಯಾತ್ಮ ತ್ರಾಣದಿಂ
ದಲೇ—ವಸಂತವು ಬಂದೀತು;—ಆವಾಗ ಲೆಕ್ಕವಿ
ಲ್ಲದ—ಆದಾಮಮಕ್ಕಳ ಗಣ—ತೂಗತ್ವದಿಂದೆದ್ದೀ
ತು.—ಓ ಯೇಸು, ನಿನ್ನ ಜೀವವೇ—ಜೀವೋದಯ
ಜಗತ್ತಿಗೆ.

೫. ತುತೂರಿ ಊದುವಾಗಲು—ಮಹತ್ತಿನಲ್ಲಿ ಯೇ
ಸುವು—ಆಕಾಶದಿಂ ಬಂದಾನು.—ಧೂಳಿಂದ ನಮ್ಮ
ನ್ನೇರಿಸಿ,—ಮಹತ್ತಿನಲ್ಲಿ ಶೇರಿಸಿ,—ಕಿರೀಟವನ್ನಿಟ್ಟಾನು.
ಓ ಯೇಸು, ನಿನ್ನ ಜೀವವೇ—ಜೀವೋದಯ ಜಗತ್ತಿಗೆ.

೧೭.

Mel. Ringe recht wenn Gottes Gnade.

೧. ಕ್ರಿಸ್ತಾ, ನಿನ್ನ ಭಕ್ತರನ್ನು—ಪ್ರೀತಿಯಿಂದ ನಡಿಸು;
ಪ್ರೀತಿಯಲ್ಲಿ ಸಭೆಯನ್ನು—ಪೂರ್ಣ ದೃಢಪಡಿಸು.

೨. ನಿನ್ನ ಪ್ರೀತಿಯು ನಮ್ಮನ್ನು—ಐಕ್ಯದಾಳಗಡಲಿ;
ನಮ್ಮ ಅಹಂಕಾರವನ್ನು—ನಿನ್ನ ಪ್ರೀತಿ ಸುಡಲಿ.

೪. ನೀನೇ ಪ್ರೀತಿ; ಪ್ರೀತಿಯಿಂದ—ನಿನ್ನ ಜನ ಶುಂಬಳಿ;—ಹೃದಯದ ಹಿತದಿಂದ—ಪ್ರೀತಿಯಗ್ನಿ ಯೇಳಲಿ.

೫. ನಮ್ಮ ಸಖೆ ಒಂದೇ ವಂಶ:—ನಿನ್ನ ವಂಶ, ಯೇಸುವೇ!—ಒಂದೇ ರಕ್ತ, ಒಂದೇ ಮಾಂಸ,—ಒಂದೇ ಜೀವ ನಮಗೆ.

೬. ಪ್ರೀತಿಯಿಂದ ನಿನ್ನ ಪ್ರಾಣ—ಕ್ರೂಜೆಯಲ್ಲಿ ಅರ್ಪಿಸಿ,—ನೀನೆ ಹೋಗಿ, ವಾಸಸ್ಥಾನ—ನಮಗುಂಟು ಮಾಡಿದಿ.

೭. ದಿವ್ಯ ಪ್ರೀತಿಯೇ, ನಮ್ಮಲ್ಲಿ—ಯೆಂದೂ ವಾಸವಾಗಿರು;—ನಿನ್ನ ನಿತ್ಯ ರಾಜ್ಯದಲ್ಲಿ—ನಮ್ಮನ್ನೆಲ್ಲಾ ಸೇರಿಸು!

೧೯.

Mel. Warum sollt ich mich denn grämen.

೧. ಚಿಂತೆ ಯಾಕೆ, ಯಾಕೆ ದುಃಖ?—ಯೇಸುವು—ಬಂದನು.—ಆತ ನಮ್ಮ ಸುಖ;—ಆತಗುಂಟು ಘನ ಹಿತ;—ನಮಗೆ—ಇಟ್ಟದೆ—ಮಹಿಮೆಯ ಕಿರೀಟ.

೨. ಹುಟ್ಟುವಾಗ ಯೇನು ತಂದೆ?—ಕೂಸಿಗೆ—ಯೇನದೆ?—ಬತ್ತಲಾಗಿ ಬಂದೆ;—ತಿರಿ ಹೋಗುವಾಗ, ಯೇ

ನು — ಕ್ರೈಯೊಳು — ಹಿಡಿದು — ಹೋರಟು ಹೋ
ದ್ದೇನು ?

೩. ನಮ್ಮ ಜೀವ ನಮ್ಮದಲ್ಲ; — ದೇವರು — ಕೊಟ್ಟದ್ದು
ತೆಗೆಯಲೂ ಬಲ್ಲ. — ಆತಗಾಪ್ಪಿ ಕಾಂಡಿದ್ಧೇವೆ; — ಆ
ತನು — ಮಾಡಿದ್ದು — ಸರಿ ಯೆಂದು ನಂಬುತ್ತೇವೆ.

೪. ಸ್ವಪ್ನದಂತೆ ಹೋನ್ನು ಹೋಗಿ — ಬಾಬ್ಬುಳಿ — ಕಾ
ಗೌಸಿ — ನಿಲ್ಲದಾಂದು ಕ್ಷಣ. — ಮಾಯಾ ನರಲೋಕದ
ಲ್ಲಿ — ಆಗಿದೆ; — ಸತ್ಯವೇ — ಪರಲೋಕದಲ್ಲಿ.

೫. ಬ್ರೈಯಲಿ ಆ ದ್ವೇಷಕಾರ! — ಮೋಕ್ಷವು — ನನ್ನ
ದು; — ಮೋಕ್ಷ ಕಳಲಾರ. — ಆಸ್ತಿ, ಜೀವ, ವ್ಯರ್ಥ
ಮಾನ, — ಹೋದರೂ, — ಹೋಗದು — ನಿತ್ಯಸಮಾ
ಧಾನ.

———o()o———

೧೮.

Mel. Himmel, Erde, Luft und Meer.

೧. ಯೇಸು ನಮ್ಮ ದೇವರು; — ಶಕ್ಕ ಸ್ತೋತ್ರ ಹಾ
ಡಿರಿ! — ಆತ ನಮ್ಮ ಕರ್ತನು; — ಸತ್ಯ ಸೇವೆ ಮಾಡಿರಿ!

೨. ಯೇಸು ನಮ್ಮ ಗುರುವು; — ಶ್ರೇಷ್ಠ ಐಯ್ಯನಾ
ತನೇ. — ಯೇಸುವಿನ ದೀಕ್ಷೆಯು — ನಿತ್ಯಜೀವವಾಗೆದೆ.

೩. ಯೇಸು ನಮ್ಮ ರಕ್ಷಕ; — ಆತ ಪ್ರೀತಿಯೇ ಸರಿ. ಆತ ಸತ್ತು ಮಾಡಿದ — ಪ್ರಾಯಶ್ಚಿತ್ತವೇ ಗತಿ.

೪. ಯೇಸು ನಮ್ಮ ಮಿತ್ರನು; — ಯೇಸುವನ್ನು ಸ್ನೇಹಿಸಿ, — ಜೀವವಿರೋವರೆಗೂ — ನಂಬಿ, ದೃಢವಾಗಿರಿ.

೨೦.

Mel. Sollt es gleich bisweilen scheinen.

೧. ಉಂಟು ನಿಷ್ಕಳಂಕ ದೇಶ; — ಅಲ್ಲಿ ನಮಗೆ ಪ್ರವೇಶ. — ಅಲ್ಲಿ ಸೇರಿದಾಗಲು — ನಿತ್ಯ ಕ್ಷೇಮ ಸಿಕ್ಕೋದು.

೨. ಮೃತ್ಯುಸಾಗರದ ಘೋಷ — ನಮ್ಮ ಕಿವಿಗೆ ಸಂತೋಷ; — ನಂಬಿಕೆಯ ನಾವೆಯು — ದಾಟಿ ಹೋಗ ಬಹುದು.

೩. ಇಲ್ಲಿ ನಮ್ಮ ಸುಖ ಕಷ್ಟ; — ಇಲ್ಲಿ ನಮ್ಮ ಲಾಭ ನಷ್ಟ; — ನಮ್ಮ ಕ್ಷೇಮ ತಾಪವು, — ನಮ್ಮ ನೀತಿ ಪಾಪವು.

೪. ಅಲ್ಲಿ ಶಾಪ, ಪೀಡೆ, ಸಾವು, — ಅಂಧಕಾರ, ಸೂರ್ಯಕಾವು, — ಚಿಂತೆ, ದುಃಖ, ಕಾಣವು; — ಅಲ್ಲಿ ಸೌಖ್ಯ ತೀರದು.

೨೧.

Mel. Gott sey Dank in aller Welt.

೧. ಯೇಸು ಕ್ರಿಸ್ತನುತ್ತಮ — ತ್ರಾಣವುಳ್ಳ ಕುರುಬ.
ಯೇಸುವಿನ ಮಂದೆಯು — ಭದ್ರವಾಗಿರುವದು.

೨. ಯೇಸುವಿನ ಕುರಿಗೆ — ಪಾತಿ ಮೇವು ಊಟಕ್ಕೆ,
ಶುದ್ಧ ನೀರು ಪಾನಕ್ಕೆ, — ಯೆಂದೂ ಸಿದ್ಧವಾಗಿದೆ.

೩. ಒಂದೇ ಬಡ ಕುರಿಯು — ಮಾರ್ಗ ತಪ್ಪಿ ಹೋ
ಗಲು, — ಅದು ಸಿಕ್ಕುವನಕಾ — ಬಿಡ ಒಳ್ಳೇ ಕುರುಬ.

೪. ಲೋಕಾರಣ್ಯದೊಳಗೆ — ಮಂದೆ ಪಾಲಿಸ್ಯೇಸುವೇ!
ನಾನು ಬಡ ಕುರಿಯು; — ನನ್ನ ಆತ್ಮ ಹುಡುಕು!

೨೨.

Mel. Gott wills machen, dass die Sachen.

೧. ನನ್ನ ದಯವುಳ್ಳ ಮಿತ್ರ, — ನನ್ನ ಪ್ರಿಯ ರಕ್ಷ
ಕಾ, — ಪ್ರೀತಿಯಿಂದ, ಓ ಪವಿತ್ರ, — ಯೆನ್ನ ಶುದ್ಧ ಮಾ
ಡ ಬಾ!

೨. ದೊಡ್ಡ ಪಾಪಭಾರವನ್ನು — ನೀನು ಪರಿಹಾರಿಸು;
ದುಷ್ಟನಧಿಕಾರವನ್ನು — ನೀನು ನಿಲ್ಲಿಸಿ ಬಿಡು!

೩. ನಾನು ರೋಗಿ; ತ್ರಾಣವನ್ನು,—ಕ್ರಿಸ್ತ, ದಯ ಪಾಲಿಸು!—ಸಾಯುತ್ತೇನೆ; ಪ್ರಾಣವನ್ನು,—ಯೆದ್ದ ಯೇಸುವೇ, ಕೊಡು!

೪. ನಿನ್ನ ಆತ್ಮಸ್ನಾನವನ್ನು—ಕೊಡು ನನ್ನ ಆತ್ಮಕ್ಕೆ;—ಜೀವದನ್ನಪಾನವನ್ನು—ಬಡಿಸೆನ್ನಗ್ಯೇಸುವೇ!

೨೩.

Mel. Christus der ist mein Leben.

೧. ಯೇಳು, ಚಿಯೋನ ಸತಿ,—ಪ್ರಕಾಶವಾಗೆಲೇ; ಯೆಹೋವನಿಂದ ಪ್ರಭೆ—ನಿನ್ನಲ್ಲಿ ಮೂಡ್ವದೆ.

೨. ಸಮಸ್ತ ಜನರಲ್ಲಿ—ಅಗಾಧ ಕತ್ತಲು,—ಸಮಸ್ತ ಪೃಥ್ವಿಯಲ್ಲಿ—ಮಹಾಂಧಕಾರವು.

೩. ನಿನ್ನೊಳಜದಿ ಸೇರ್ವರು—ನಾನಾ ಜನಂಗಳು.—ನಿನ್ನನ್ನು ವಂದಿಸ್ವರು—ಪ್ರಖ್ಯಾತ ರಾಜರು.

೪. ಕಣ್ಣೆತ್ತಿ, ಗುಂಪು ನೋಡಿ,—ಸಂತೋಷವಾಗಿರು! ಮಹಾಸಮೂಹ ನೋಡಿ—ಕೂಡೆರಗುವದು.

೫. ಬಂದಾರು ದೂರದಿಂದ—ನಿನ್ನ ಕುಮಾರರು. ಮಿಗ್ವರು ಚನ್ನಿನಿಂದ—ಕುಮಾರಿತಿಗಳು.

೬. ಮಹಾ ಆಶ್ಚರ್ಯದಿಂದ—ಕಣ್ಣರಳುವದು.—ಸಂತೋಷಪ್ರಭೆಯಿಂದ—ಹೃದಯ ತುಂಬೀತು.

೭. ಸಮು ದ್ರದ ದ್ವೀಪಂಗಳ್—ನಿನ್ನಾಸ್ತಿಯಾಗವೆ. ಈ ಭೂಮಿಯ ಜನಂಗಳ್—ನಿನ್ನಾಳಗಾಗಿವೆ.

೮. ವಾಂತ್ಯೋ ಸಮೂಹದಿಂದ—ಸಂದರ್ಶಿಯಹುದು.—ಪೋಮಾದಿ ಸ್ತೋಬದಿಂದ—ತಂದರ್ಪಿಸುವರು.

೯. ಈಗ್ಯಾ ಮಿದ್ಯಾನಿನಿಂದ—ಬಂದಾರು ದೂತರು. ಪುಟ್ಟೀಶು ಯೆಲ್ಲರಿಂದ—ಅನಂತ ಸ್ತೋತ್ರವು.

೨೪.

Mel. Old Hundredth Psalm.

೧. ನಮ್ಮನ್ನು ನೋಡು, ಕರ್ತನೇ!—ನಿನ್ನಾತ್ಮಕೊಡು ನಮಗೆ!—ಸನ್ಮಾರ್ಗದಲ್ಲಿ ನಮ್ಮನ್ನು—ಕಟಾಕ್ಷದಿಂದ ನಡಿಸು!

೨. ನಿನ್ನನ್ನು ಸ್ತುತಿಸಲಿಕ್ಕೆ—ನೀ ಸಡ್ಲಿಸೆಮ್ಮನಾಲಿಗೆ; ಸಂತೋಷವುಳ್ಳ ಸೇವೆಗೆ—ತಕ್ಕೋ ನಮ್ಮನ್ನು, ಕರ್ತನೇ!

೩. ಸದ್ವಾಕ್ಯವೆಂಬ ಬೀಜವು—ನಮ್ಮೆದೆಯಲ್ಲಿ ಮೊಳೆತು,—ನಿನ್ನಾತ್ಮದಿಂದ ವರ್ಧಿಸಿ,—ಅಮೂಲ್ಯ ಪೈರು ಕೊಡಲಿ!

೪. ಓ ಪಿತೃ, ಪುತ್ರ, ಆತ್ಮನೇ,—ತ್ರಿಯೇಕನಾದ ದೇವರೇ,—ಕಟಾಕ್ಷಪೂರ ನಿನ್ನನ್ನು—ದಿನಾಲು ಸ್ತುತಿಸುವೆವು.

೨೫.

Mel. Nun danket alle Gott.

೧. ಯೆಲ್ಲಾನ್ನು ಭೋಗಿಸಿ—ದಯಾಳು ಕರ್ತನಿಂದ,—ಕೃತಜ್ಞರಾಗಿರಿ—ಮನೋವಾಕ್ಕಾಯದಿಂದ!—ನಮ್ಮನ್ನು ರಕ್ಷಿಸಿ,—ಶ್ರೀಗರ್ಭದಿಂದಲೇ—ಸಹಸ್ರ ವರವ—ಕೊಟ್ಟವನಾತನೇ.

೨. ಉದಾರಿ ದೇವರೇ,—ಸುಶಾಂತ ಹೃದವನ್ನು—ಸುಕ್ಷೇಮದೊಂದಿಗೆ—ಕೊಟ್ಟುಹಾದಿ ನಮ್ಮನ್ನು—ಕಾಪಾಡಿ ರಕ್ಷಿಸೋ!—ಕಡೇಲಿ ನಮಗೂ—ಆ ಲೋಕದೊಳಗೆ—ವಿಮೋಚನೆ ಕೊಡು!

೩. ಪಿತಾಪುತ್ರಾತ್ಮಕ್ಕೆ,—ಮಹೋಚ್ಚ ಪೀಠದಲ್ಲಿ—ಕೂತಿರುವಾತಗೆ,—ಸಮಸ್ತ ಸೃಷ್ಟಿಯಲ್ಲಿ—ಅನಂತ ಸ್ತೋತ್ರವು!—ನಮ್ಮಿಂದಲೂ ಸ್ತುತಿ—ತ್ರೈಲೋಕ್ಯಕರ್ತಗೆ—ಯೆಂದೆಂದೂ ಯೇಳಲಿ!

೨೬.

Mel. Mir ist Erbarmung widerfahren.

೧. ನಾನೀಗ ಭದ್ರ ರೇವಿನಲ್ಲಿ—ತಂದಿಟ್ಟೆ ನನ್ನ ಹಡಗ;—ಯೇಸುವಿನ ಘಾಯಂಗಳಲ್ಲಿ—ಹಾಕಿಟ್ಟೆ ನನ್ನ ಲಂಗರ.—ಭೂಪರಲೋಕ ಬಿದ್ದರೂ,—ನಾನೇನೂ ಭಯ ಪಡೆನು.

೨. ದಿವ್ಯ ಕಟಾಕ್ಷಪೂರ್ತಿಯನ್ನು—ಯಾರೂ ಗ್ರಹಿಸಲಾರರು.—ಕಟಾಕ್ಷವು ಪಾಪಿಷ್ಠರನ್ನು—ಯೆಂದೆಂದೂ ಹುಡುಕುವದು.—ಪಾಪಿಷ್ಟ ಯೆಡವಿದರೂ,—ದಿವ್ಯ ಕಟಾಕ್ಷ ನಿಲ್ಲದು.

೩. ನಿತ್ಯ ಕಟಾಕ್ಷಪೂರ್ತಿಯಿಂದ—ಕ್ರೂಜೇಲಿ ಯೇಸು ಸತ್ತನು.—ದೈವಾತ್ಮನು ಕಟಾಕ್ಷದಿಂದ—ನನ್ನನ್ನು ಶಿಕ್ಷಿಸುವದು.—ಅನಾದಿಯಿಂದ ತಂದೆಯು—ನನ್ನನ್ನು ಸ್ನೇಹಿಸಿದನು.

೪. ಓ ಪಾಪವನ್ನಳಿಸುವಂಥ—ಪವಿತ್ರವಾದ ರಕ್ತವೇ!—ಘಾಯಂಗಳನ್ನು ಕಟ್ಟಿಪ್ಪಂಥ—ಓ ಪರಿಶುದ್ಧ ಮದ್ದುವೇ!—ದೈವಕಟಾಕ್ಷ ನನಗೆ—ನಿನ್ನಿಂದ ಪ್ರಾಪ್ತಿಯಾಗೆದೆ.

೫. ಈ ರಕ್ತದ ಪ್ರವಾಹದಲ್ಲಿ—ವಿಶ್ವಾಸಸ್ನಾನ ಮಾಡುವೆ.—ಈ ರಕ್ತ ನನ್ನ ಹಣೆಯಲ್ಲಿ—ಗುರ್ತಾಗಿ ಕಾಣಿಸಿದರೆ,—ದೈವಕಟಾಕ್ಷ ಯೆಂದಿಗೂ—ನನ್ನನ್ನು ಬಿಡಲಾರದು.

೬. ಈ ಮಾರ್ಗ ಹಿಡಿದು ಕಾಂಡ್ಯೇನು,—ಶ್ವಾಸ ಬಿಡುವನಕಾ;—ಈ ಮರ್ಮವನ್ನು ಧ್ಯಾನಿಸ್ಯೇನು, ಉಶ್ವಾಸ ಬಿಡುವನಕಾ;—ದೈವಕಟಾಕ್ಷ ನನಗೆ—ಅನಂತ ಮುಕ್ತಿಯಾಗೆದೆ.

೨೭.

Mel. Gelobet seyst du, Jesus Christ.

೧. ಕ್ರಿಸ್ತ, ನೀ ಸತ್ತು ಜೀವಿಸಿ—ಮೃತಿಯನ್ನು ಜೈಸಿದಿ;—ಮೃತಿಯಲ್ಲಿ ಬಿದ್ದವರಿಗೆ—ನೀ ಜೀವ ಕೊಟ್ಟಿ, ಯೇಸುವೇ!—ಹಲ್ಲೆಲೂಯಾ.

೨. ಕ್ರಿಸ್ತ, ನೀ ಕೃಪೆಯಾಗಿದ್ದು—ನಮ್ಮ ಪಾಪ ಮನ್ನಿಸು!—ನಮ್ಮನ್ನು ನಿನ್ನ ಆತ್ಮಕ್ಕೆ—ವಿಧೇಯ ಮಾಡು, ಕರ್ತನೇ!—ಹಲ್ಲೆಲೂಯಾ.

೩. ಮಹತ್ವವುಳ್ಳ ಕ್ರಿಸ್ತನೇ,—ಪ್ರೀತಿಯುಳ್ಳ ಯೇಸುವೇ,—ಕೃಪಾಳುವೇ, ನಾವೆಂದಿಗೂ—ನಿನ್ನನ್ನು ಸ್ತುತಿಸುವೆವು.—ಹಲ್ಲೆಲೂಯಾ.

೨೮.

Mel. Russian Tune. (Borniansky.)

೧. ಕಾಡು, ಕಾಡು ಜೀವಪಾನ;—ಕಾಡು ಜೀವರೊಟ್ಟಿಯ!—ಕಾಡು, ಕಾಡು ಆತ್ಮಸ್ನಾನ;—ಕಾಡು ನೀತಿವಸ್ತ್ರವ!—ಕಾಡು ಕ್ರೂಜ್ಜೀವವೃಕ್ಷಫಲ—ವಿಷ ತಿಂದ ಪಾಪಿಗೆ;—ಕಾಡು ಹಾಂದು ವಾಸಸ್ಥಲ—ಶಾಂತಿಪ್ರಿಯನ ಆತ್ಮಕ್ಕೆ!

೨. ತ್ರಾಹಿ, ತ್ರಾಹಿ, ದಿವ್ಯ ಮಿತ್ರ!—ತ್ರಾಹಿ; ನಾ
ನು ಬೀಳುವೆ.—ತ್ರಾಹಿ, ತ್ರಾಹಿ, ಓ ಪವಿತ್ರ;—ತ್ರಾ
ಹಿ, ನಾನು ಮಡಿವೆ!—ತ್ರಾಹಿ; ನಿನ್ನ ಶ್ರಮದಿಂದ
ನಮಗೆ ರಕ್ಷಣ್ಯವು;—ತ್ರಾಹಿ; ನಿನ್ನ ಮೃತಿಯಿಂದ—ನ
ಮ್ಮ ಜೀವ ಹುಟ್ಟ್ಯಾದು.

೩. ಜಯ, ಜಯ, ಪ್ರಿಯ ಶೂರಾ!—ಜಯ, ದೇವ
ಪುತ್ರನೇ!—ಜಯ, ಜಯ, ನೀತಿಸೂರಾ!—ಜಯ, ನಿ
ತ್ಯ ತೇಜವೇ!—ಜಯ, ಪರಲೋಕದಿಂದ—ಬಂದ ನ
ಮ್ಮ ರಕ್ಷಕಾ!—ಜಯ, ನರಲೋಕದಿಂದ—ಮೇಲಕ್ಕೇರಿದ
ರಸಾ!

೨೮.

Mel. Seelenbräutigam.

೧. ಶಾಂತ ಯೇಸುವೇ,—ನಿನ್ನ ಹಾಗೆಯೇ—ಯಾ
ರು ಸರ್ವಲೋಕದಲ್ಲಿ?—ಯೆಲ್ಲಾ ನರಪುತ್ರರಲ್ಲಿ—ಅತಿ
ಶ್ರೇಷ್ಠನೇ—ಶಾಂತ ಯೇಸುವೇ.

೨. ನನ್ನ ಸಾಲವು—ಭಾರವಾಗಿತ್ತು.—ನೀನು ದೊ
ಡ್ಡ ಪ್ರೀತಿಯಿಂದ—ನನ್ನನ್ನೆಲ್ಲಾ ದೋಷದಿಂದ,—ಸಾಲ
ಸಲ್ಲಿಸಿ,—ಶುದ್ಧ ಮಾಡಿದಿ.

೩. ಆದಿತೇಜವೇ,—ಪ್ರೀತಿಯಿಂದಲೇ—ನಮ್ಮ

ಳು ಮನುಷ್ಯನಾಗಿ, —ನಿನ್ನ ಶತ್ರುಗಳಿಗಾಗಿ—ಬಲಿ ಅರ್ಪಿಸಿ, —ಪ್ರಾಣ ಚೆಲ್ಲಿದಿ.

೪. ದೈವ ಶೂರನೇ, —ಮೃತಿಯೊಳಗೆ—ಶೇರಿ, ದುಷ್ಟ ಶತ್ರುವನ್ನು—ಜೈಸಿ, ನಮ್ಮ ಶಿಕ್ಷೆಯನ್ನು—ಅನುಭವಿಸಿ, —ಮೇಲಕ್ಕೇರಿದಿ.

೫. ಓ ಪ್ರವಾದಿಯೇ, —ಸರ್ವರಾಜನೇ! —ನಿನ್ನ ಚಿತ್ತಕ್ಕೊಪ್ಪುತ್ತೇನೆ; —ನಿನ್ನ ಶಿಷ್ಯನಾಗಿದ್ದೇನೆ; —ನಿನ್ನ ಪಾದವೇ—ಗತಿ ನನಗೆ!

೩೦.

Mel. Befiehl du deine Wege.

೧. ಈ ವ್ಯರ್ಥ ಚಿಂತೆ ಬಿಟ್ಟು, —ವಿಶ್ವಾಸವೆಂದಿಗೂ ಸರ್ವೇಶನಲ್ಲಿ ಇಟ್ಟು, —ನೀ ಹೆದರದಿರು! —ಸಮಸ್ತ ಲೋಕವನ್ನು—ಆಳಿಪ್ಪ ದೇವರು—ವಿಧೇಯ ಭಕ್ತನನ್ನು—ಸಂರಕ್ಷಿಸುವನು.

೨. ಓ ಪಾಪಿ, ದೇವರಲ್ಲಿ—ವಿಶ್ವಾಸವಿಟ್ಟಿರು! —ಜಗತ್ತು ಆತನಲ್ಲಿ—ಸಂತೃಪ್ತವಹುದು. —ಸಹಸ್ರ ಚಿಂತೆಯಿಂದ—ಯೇನೊಂದೂ ಸಿಕ್ಕೀತೇ? —ವಿಶ್ವಾಸಮಾತ್ರದಿಂದ—ಸಮಸ್ತ ನಿನ್ನದೇ.

೩. ಓ ತಂದೆ, ನೀತಿಯನ್ನು—ನಮ್ಮಲ್ಲಿ ಬೆಳಿಸು!—
ಯೆಲ್ಲಾ ಕಳಂಕವನ್ನು—ನೀನಳಿಸಿ ಬಿಡು!—ನೀ ಭಯ
ಭ್ರಷ್ಟರಲ್ಲಿ—ವಿಶ್ರಾಂತಿ ಹುಟ್ಟಿಸು;—ವಿರುದ್ಧ ಮನದ
ಲ್ಲಿ—ನೀ ಪ್ರೀತಿಯನ್ನಿಡು!

೪. ನಿನ್ನಲ್ಲಿ ಶುದ್ಧ ನೀತಿ;—ನಿನ್ನಲ್ಲಿ ಬೆಳಕು;—ನಿನ್ನ
ಲ್ಲಿ ಸತ್ಯ ಪ್ರೀತಿ;—ನಿನ್ನಲ್ಲಿ ತ್ರಾಣವು.—ಶತ್ರುಂಗಳೆ
ಲ್ಲರನ್ನು—ವಿನಾಶ ಮಾಡುವಿ;—ಅನಂತ ಸುಖವನ್ನು
ವಿಶ್ವಾಸಿಗೀಯುತ್ತಿ.

೩೧.

Mel. Brüder, reicht die Hand zum Bunde.

೧. ಕ್ರಿಸ್ತ ರಾಜ್ಯವಾಳುತ್ತಾನೆ;—ಘನವಾಗಿ ಬಾಳುತ್ತಾ
ನೆ;—ಆತ ಜಯಶಾಲಿಯು.—ಹರ್ಷವಾಗಿರಾತನಲ್ಲಿ!
ಆತಗೆ ತ್ರೈಲೋಕ್ಯದಲ್ಲಿ—ಯೆಲ್ಲಾ ವಶವಹುದು.

೨. ಗದ್ದಿಗೆಯ ಸುತ್ತಲಾಗಿ—ದೂತರೆಲ್ಲಾ ದಾಸರಾಗಿ
ನಿಂತು ವಂದಿಸುವರು.—"ನನ್ನ ಬಲಪಾರ್ಶ್ವದಲ್ಲಿ—ಕೂ
ತು ಕ್ಕೋ," ಯೆಂದಾತನಲ್ಲಿ—ಮೆಚ್ಚಿ, ತಂದೆ ಯೆಂದನು.

೩. ತಂದೆ ಯೇಕ ದೇವರೆಂದೂ,—ಮಗನು ತದ್ರೂಪ
ನೆಂದೂ,—ಭಕ್ತರೆರಗುವರು.—ಯೇಸುವಲ್ಲಿ ನಿತ್ಯ ಪ್ರಾ

ಗೆ;—ಯೇಸುವಲ್ಲಿ ಸರ್ವತ್ರಗೆ;—ಯೇಸು ಸರ್ವರಾಜನು.

೪. ಆತ ಪ್ರಾಯಶ್ಚಿತ್ತವಾಗಿ—ಪಾಪಪರಿಹಾರಕ್ಕಾಗಿ ಕ್ರೂಜೆಯಲ್ಲಿ ಸತ್ತನು;—ಆತ ಕಡೇ ದಿನದಲ್ಲಿ—ಘನವಾಗಿ ಬರುವಲ್ಲಿ—ನಾವೂ ಜೀವಿಸುವೆವು.

೫. ಆಗ ತನ್ನ ವಾಕ್ಯವನ್ನು—ನಂಬಿದೆಲ್ಲಾ ಭಕ್ತರನ್ನು—ಕನಿಕರಿಸುವನು.—ಹಶು, ದಾಹ, ದುಃಖ, ಕಷ್ಟ, ಚಿಂತೆ, ಭೀತಿ, ರೋಗ, ನಷ್ಟ,—ಇನ್ನು ಮುಂದೆ ಕಾಣೆವು.

೩೨.

Mel. God save the Queen!

೧. ಬಾಳಲಿ ದೇವಜ!—ಆಳಲಿ ಮಾನವ—ಗೋತ್ರವನು!—ನೀತಿಯ ರಾಜನೇ,—ಪ್ರೀತಿಯ ಗುರುವೇ,—ಗೀತದ ಗುರಿಯೇ,—ಸ್ತೋತ್ರ ಪಡು!

೨. ಮಾನದ ಉನ್ನತ—ಸ್ಥಾನದಿಂದಿಳಿದ—ಸರ್ವಪತಿ—ಅಗಲಿ ತಂದೆಯ,—ಜಗತ್ತಿಗೋಸ್ಕರ—ರಕ್ತವ ಚೆಲ್ಲಿದ—ಪರ್ವತದಿ.

೩. ನೀತಿಯ ದೇವರೇ,—ಪ್ರೀತಿಯ ಮಾಡಿದೆ—ನರರಿಗೆ.—ಶಾಪವ ಸೈರಿಸಿ,—ಶಾಪವ ತಾಳಿದಿ;—ಪಾಪಗಳಂ ಪರಿ—ಹರಿಸಿದೆ.

೩೩.

Mel. Meinen Jesum lass ich nicht.

೧. ಪ್ರಿಯ ದೇವವಾಕ್ಯವೇ,—ಯೋಗ್ಯ ಸ್ತೋತ್ರ ನಿನಗೇನು?—ನಿನ್ನ ಹಾಲು ಕುಡಿವೆ,—ನಿನ್ನ ಮನ್ನಾ ಭಕ್ಷಿಸೇನು.—ಕ್ಷೇಮಕರ ಔಷಧಿ—ನಮ್ಮ ಆತ್ಮಕ್ಕೆ ಯುಕ್ತಿ.

೨. ನೀನು ಶತ್ರುಬಾಣವ—ಹಿಮ್ಮೆಟ್ಟಿಸುವಂಥ ಡಾಲು.—ನೀನು ದಿವ್ಯ ಖಡ್ಗ;—ನನ್ನ ಕೈಗೆ ಶ್ರೇಷ್ಟ ಪಾಲು.—ಉಕ್ಕಿಗಿಂತ ಯುದ್ಧದಿ—ನೀನು ಹದವಾಗಿದ್ದಿ.

೩. ಯೆಷ್ಟು ರತ್ನ, ಸಾಗರಾ,—ನಿನ್ನ ಮಡುವುಗಳಲ್ಲಿ! ಯೆಷ್ಟು ಹೊನ್ನು, ಪರ್ವತಾ,—ನಿನ್ನ ಗರ್ಭಸ್ಥಾದಲ್ಲಿ! ಹೊಲಾ, ನಿನ್ನ ಪೈರಾಳು—ಹೊಟ್ಟು ಸೂಡು ಸಿಕ್ಕದು.

೪. ರಮ್ಯವಾದ ವನವೇ,—ಶ್ರೇಷ್ಟ ಹೂವುಗಳ ತೋಟಾ!—ನಿಂನಲ್ಲುಂಟು ನನಗೆ—ವಾಳ್ಕೆ ಶ್ರುತಿ, ವಾಳ್ಕೆ ನೋಟ!—ಭಾರ ಹೊರೆ ಇಲ್ಲಿಗೆ—ಹಾಕಿ, ಸುಖಿಯಾಗುವೆ.

೫. ಬೆಳಕುಳ್ಳಾಕಾಶವೇ,—ನಿನ್ನ ನಕ್ಷತ್ರಗಳಿಂದ—ಇಹದಂಥದೊಳಗೆ—ಕಾಂತಿ ಆಗುವದರಿಂದ,—ಲೋಕಕಾಡಿನೊಳಗೆ—ದಾರಿ ಸಿಕ್ಕೋದೆನಗೆ.

೬. ಪ್ರಿಯ ದೇವವಾಕ್ಯವೇ,—ಕಷ್ಟದಲ್ಲಿ ನೀನೇ ಶಾಂ

೩.—ಲೋಕದಲ್ಲಿ ಕಷ್ಟಲೆ—ಹೊಟ್ಟುವಾಗ, ನೀನೇ ಕಾಂ
೩.—ಅಂತ್ಯಶ್ವಾಸ ಹೋಗಲು,—ನಿನ್ನಸ್ಮರಿಸುವೆನು.

೩೪.

Mel. O Durchbrecher aller Bande.

೧. ಮೃತ್ಯುವಿನ ಬಂಧವನ್ನು—ಬಿಡಿಸಿದ ಮನುಜಾ,—ಶತ್ರುವಿನ ಸೇನೆಯನ್ನು—ಹೋಡಿಸಿದ ನಾಯಕಾ,—ತ್ರಾಣದಿಂದ ಲೋಕವಾಳು,—ಕ್ರೂಜೆ ತಾಳಿದವನೇ,—ಜಯಪ್ರದನಾಗಿ ಬಾಳು,—ಓ ಮಹತ್ವದರಸೇ!

೨. ಜಯಶಾಲಿಯೇ, ನನ್ನನ್ನು—ದಂಡಿನಲ್ಲಿ ಶೇರಿಸು!—ಡಾಲು ಖಡಗಂಗಳನ್ನು—ನನ್ನಹಸ್ತದಲ್ಲಿಡು! ಆಗ ಯುದ್ಧಧ್ವನಿ ಯೆತ್ತಿ,—ಹೊತ್ತಿ ನಿನ್ನ ಹೊಜ್ಜೆಗೆ,—ಶತ್ರುವಿನ ನಡುನೆತ್ತಿ—ಭಂಗ ಮಾಡಿ, ಜೈಸುವೆ.

೩. ಕ್ಷೇಮವಾಗಿ ಸಾಯುತ್ತೇನೆ;—ತಂದೆಗಾತ್ಮವಾಪ್ಪಿಸಿ;—ಗ್ಲೋರಿದ್ವಾರ ಹೋಯುತ್ತೇನೆ,—ನಿನ್ನಗ್ಲೋರಿ ನೆನಸಿ. ಈ ಶರೀರವನ್ನುಕೀಟ—ತಿಂದರೇನು ಚಿಂತೆಯು?—ಅನುಜೀವಿಸಿ, ಕಿರೀಟ—ಹೊಂದಿ, ಹಾಡಿಸುವೆನು.

೩೫.

Mel. Seelenbräutigam.

೧. ದೇವರಾತ್ಮನೇ,—ಬಾ ನಮ್ಮೊಳಗೆ!—ಮಾಂಸ ಮೂಲವನ್ನು ಕಿತ್ತು,—ಮನದಿ ಸುಬೋಧೆ ಇತ್ತು,—ಹೃದಯವನ್ನು—ಶುಚಿಕರಿಸು!

೨. ಬೀಸು, ವಾಯುವೇ!—ಬೀಳು, ಮಳೆಯೇ!—ಕೋಲ್ಮೇ, ಬಂಡೆಯನ್ನು ಶೀಳು!—ಖಡ್ಗಾ, ಮಾಂಸದಲ್ಲಿ ಬೀಳು!—ಉರಿ, ಅಗ್ನಿಯೇ!—ಮೂಡು, ಸೂರ್ಯನೇ!

೩. ನನ್ನ ಆತ್ಮದಿ—ಜ್ಞಾನ ಹುಟ್ಟಿಸಿ,—ನನ್ನ ಇಂದ್ರಿಯಂಗಳನ್ನೂ,—ನನ್ನ ಪೂರ್ಣ ಮನಸ್ಸನ್ನೂ,—ಹಿಡಿದೆನ್ನಾಳು—ವಾಸವಾಗಿರು!

೪. ನೀನು ಬೋಧನೆ—ನನಗಿತ್ತರೆ,—ಜೀವದುಪದ್ರಂಗಳನ್ನೂ,—ಮರಣದ ಭಯವನ್ನೂ,—ಲಕ್ಷ್ಯ ಮಾಡದೆ—ಜಯ ಹೊಂದುವೆ.

೩೬.

Mel. Seelenbräutigam.

೧. ಪ್ರಿಯ ರಕ್ಷಕಾ,—ಕೃಪೆಯಿಂದ ಬಾ!—ಪಾಪದಲ್ಲಿ ಬಿದ್ದಿದ್ದೇವೆ;—ಧೂಳಿಯಲ್ಲಿ ಮುಳ್ಗುತ್ತೇವೆ.—ಕರ್ತ, ನಮ್ಮನ್ನು—ಶಾಂತ ಪಡಿಸು!

೨. ನಮ್ಮ ಸ್ಥಳದಿ—ಶಾಪ ಸೈರಿಸಿ,—ಮೃತಿಯನ್ನು ತಾಳಿ, ಯೆದ್ದಿ;—ಕ್ರೂರ ಯುದ್ಧದಲ್ಲಿ ಗೆದ್ದಿ.—ಶೂರಾ, ನಮಗು।—ಜಯವಂ ಕೊಡು!

೩೭.

Mel. Warum sollt ich mich denn grämen.

೧. ಆಗದೆನಗೆ ಸಹಾಯ!—ಯೆಂದಿಗೂ—ತೀರದು ಈ ಪ್ರಪಂಚಮಾಯ;—ರಕ್ತ ಹಾರುವಂಥ ಘಾಯ ಹೊಂದಿದೆ;—ಸುಮ್ಮನೆ—ಕಳಕೊಂಡೆ ಪ್ರಾಯ.

೨. ನೆಟ್ಟಿತೆನ್ನಾಳು ಸೈತಾನ—ಬಾಣವು;—ಹೋಯಿತು—ಆತ್ಮಸಮಾಧಾನ.—ಸಾಯುತ್ತೇನೆ, ಅನ್ನಪಾನ—ವಿಲ್ಲದೆ;—ಕರ್ತನೇ,—ಕೊಡು ಒಂದು ದಾನ!

೩. ಕ್ರಿಸ್ತಾ, ನನ್ನಜೀವ ಕ್ಷಯ—ವಹುದು;—ಹುಟ್ಟಿತು—ನರಕದ ಭಯ.—ಮಾಂಸದಾಶೆ ಪೂರ್ಣ ಲಯ;—ಕೋರಿಕೆ—ಒಂದದೆ:—ಯೇಸುವಿನ ದಯ.

೩೮.

Mel. Alle Menschen müssen sterben.

೧. ಹ್ಯಾಗೆ, ಓ ಇಮ್ಮಾನುವೇಲೇ,—ನಿನ್ನ ಸ್ತೋತ್ರ ಹಾಡಲಿ!—ಅನುದಿನ ಕೃಪೆ ಮೇಲೆ—ಕೃಪೆಯನ್ನು

ಕಾದುತ್ತೀ. — ನೀ ಸಹಾಯಕ್ಕಾಗಿ ಬಂದಿ; — ನೀನು ಅನ್ನ ಪಾನ ತಂದಿ, — ನಾನು ಸಾಯುವಾಗಲೇ, — ನನ್ನ ಪ್ರಿಯ ಮಿತ್ರನೇ!

೨. ದೂರ ಹೋದೆ; ದೂರದಿಂದ — ನೀ ನನ್ನನ್ನು ಕರೆದೆ. — ನರಕದ ಹಾದಿಯಿಂದ — ಯೆಳೆದೆನ್ನ, ಯೇಸುವೇ! — ಈಗ ಸುಖ ಪಡುತ್ತೇನೆ; — ನಿನ್ನ ದಾಸನಾಗಿದ್ದೇನೆ; — ನಿನ್ನ ಪಾದ ಹಿಡಿದು — ಮುಕ್ತನಾಗಿರುವೆನು.

೩. ಲೋಕಾರಣ್ಯದಲ್ಲಿ ಸುಖ — ನನಗೇನು ಸಿಕ್ಕಿತು? — ಒಳ್ಳೇ ಕುರುಬನ ಮುಖ — ನೋಡಿ ಸುಖ ಪಟ್ಟೆನು. ನೀನೇ ಸರ್ವಯಜಮಾನ; — ತೃಪ್ತಿ, ಕ್ಷೇಮ, ಸಮಾಧಾನ, — ನೀನೇ ಕಾಡ ಬಹುದು; — ನಿತ್ಯ ದ್ರವ್ಯ ನಿನ್ನದು.

೪. ನೀನು ಧೈರ್ಯ ಕಾಡಲಾಗಿ — ಚಿಂತೆ ನನಗಿಲ್ಲವು. ಕ್ರಿಸ್ತಾ, ನಿನ್ನ ಭಕ್ತನಾಗಿ — ಸುಖದಿಂದಿರುವೆನು. — ಯೆಂದಿಗೂ, ಇಮ್ಮಾನುವೇಲೇ, — ಪರಲೋಕಗಳ ಮೇಲೆ ಯೇರಿ ಹೋಗಿ ಆಳುತ್ತಿ. — ನೀ ನನ್ನನ್ನು ಕಾಯುವಿ.

೩೯.

Mel. Alle Menschen müssen sterben.

೧. ದೇವರೇ, ಸುವಾರ್ತೆಯನ್ನು — ಕೇಳ ಕೂಡಿ ಬಂದೆವು. — ಒಳ್ಳೇ ಆಶೀರ್ವಾದವನ್ನು — ನಿನ್ನ ಸಭೆಗೆ ಕಾ

ಡು! — ಜೀವವುಳ್ಳ ರೊಟ್ಟಿಯನ್ನು — ಹಂಚಿ, ಜೀವಜಲವನ್ನು — ಪಾನಕ್ಕಾಗಿ ಯೆರೆದು, — ಆತ್ಮತೃಪ್ತಿಯಂ ಕೊಡು.

೨. ಆದಿತಂದ್ಯೇ ಪಾಪದಿಂದ — ಶಾಪಗ್ರಸ್ಥರಾದೆವು. — ಸ್ವಂತ ಅಪರಾಧದಿಂದ — ಮರಣಸ್ಥರಾದೆವು. — ಗ್ರಹಿಸುವ ಮನಸ್ಸನ್ನೂ, — ಕೇಳುವಂಥ ಕಿವಿಯನ್ನೂ, — ನೋಡುವಂಥ ಕಣ್ಣನ್ನೂ, — ಕ್ರಿಸ್ತಾ, ದಯಪಾಲಿಸು!

೪೦.

Mel. O du Liebe meiner Liebe.

೧. ಕರುಣಾಕಟಾಕ್ಷವುಳ್ಳ — ತಂದೆ, ಮಗ, ಆತ್ಮನೇ! ಕೃಪೆಯನ್ನು, ಪ್ರೀತಿಯುಳ್ಳ — ಕರ್ತಾ, ತೋರಿಸೆಮ್ಮಗೆ! — ನಮ್ಮ ಪಾಪಮೋಹದಲ್ಲಿ — ನಿನ್ನ ವಾಕ್ಯ ಮರೆತು, — ಈ ಪ್ರಪಂಚ ಕಾಡಿನಲ್ಲಿ — ತಪ್ಪಿ ಹೋಗಿ, ಸತ್ತೆವು.

೨. ನಾವು ನಿನಗೆಷ್ಟು ದ್ವೇಷ — ಮಾಡಿ, ಕೆಟ್ಟು ಹೋದೆವು! — ದುಷ್ಟ ತಂತ್ರವುಳ್ಳ ಶೇಷ — ಯೆಷ್ಟು ಮೋಸ ಮಾಡಿತು! — ಈಗ ನಿನ್ನ ಪ್ರೀತಿ ನೋಡಿ, — ವ್ಯರ್ಥ ಬುದ್ಧಿ ಕಳದು, — ನಾವು ನಿನ್ನ ಪುತ್ರ ವೋಡಿ, — ನಿನ್ನ ವಶವಾದೆವು.

೪೧.

Mel. Eins ist Noth.

೧. ಒಂದವಶ್ಯ; ಒಂದು ಅರ್ಥ—ನನಗೀಗ ತಿಳಿ
ಸು!—ಬೇರೆ ಯೆಲ್ಲಾ ಆಶೆ ವ್ಯರ್ಥ;—ಬೇರೆ ಸುಖವಿ
ರದು.—ಸಂಸಾರದ ತ್ಯಾಗದಿ ಆತ್ಮದ ಶೋಕ;—ಸಂ
ಪೂರ್ಣ ಸಂತೋಷವನ್ನೀಯದು ಲೋಕ.—ಆ ಉತ್ತ
ಮ ದಾನವು ಸಿಕ್ಕಿದರೆ,—ನಾನೊಂದರಲ್ಲೆಲ್ಲವ ಹೊಂ
ದಿರುವೆ.

೨. ಯೇಕಾಪೇಕ್ಷೆಯಾದ ಪ್ರಾಣ—ಲೋಕಕ್ಕೆಲ್ಲಾ ಬಿಡ
ಲಿ;—ಕ್ರಿಸ್ತನಲ್ಲಿ ಸ್ಥಿರ ಧ್ಯಾನ—ನನ್ನ ಆತ್ಮವಿಡಲಿ!—
ಈತನು ದೇವಮನುಷ್ಯನ ಮೂರ್ತಿ;—ಈತನು
ಸರ್ವಮಹತ್ವದ ಪೂರ್ತಿ;—ಈತ ಪರಾತ್ಪರನಾದ ಪ
ತಿ;—ಈತ ನಿರಂತರವಾದ ಗತಿ.

೩. ನಿನ್ನ ಮೇಲೆ ನನ್ನ ಆಶೆ,—ಅತಿಪ್ರಿಯ ಯೇಸು
ವೇ!—ನನ್ನ ನಿತ್ಯ ಅಭಿಲಾಷೆ—ನೀನೇ, ದಿವ್ಯ ಮಿತ್ರ
ನೇ!—ಅನೇಕರು ತೊಲಗಿ ಹೋದರೆ, ಯೇನು?—ಸ
ದಾಪ್ರಿಯ ಯೇಸುವೇ, ನಾನುಳಿದೇನು.—ಕ್ರಿಸ್ತಾ, ನಿ
ನ್ನ ವಾಕ್ಯದ ಬಂಡೆಯೊಳು—ಸಜ್ಜೀವದ ಬುಗ್ಗೆಯು
ಯೇರುವದು.

೪. ಒಬ್ಬ ದಿವ್ಯ ಯಜಮಾನ—ನಮಗೇಸು ಕ್ರಿಸ್ತ
ನು.—ಈತ ಬೋಧಿಸುವ ಜ್ಞಾನ—ಶ್ರೇಷ್ಠ ಆತ್ಮತೃಪ್ತಿ

ಯು.—ಈಶ್ವರನು ಕೃಪೆಯ ತೋರಿಸಿದ್ದಾನೆ.—ಈಶ್ವರ ಮನುಷ್ಯರಿಗಾಲಿಯುತ್ತಾನೆ.—ನಾ ಯೇಸುವ ಸ್ತೋತ್ರಮಾಡನ್ನಿರಲು,—ಸರ್ವೇಶ್ವರನು ನಾಡವೆಯುಂಟೆನಗೆ.

೪೨.

Mel. Ein' feste Burg ist unser Gott.

೧. ಯೆಹೋವನು ಶಾಶ್ವತಿಕ—ಸಹಾಯವಾಗಿದ್ದಾನೆ.—ಶತ್ರುಂಗಳನ್ನು ಜೈಸುವ—ಶ್ರೇಷ್ಠಾಸ್ತ್ರವಾಗಿದ್ದಾನೆ.—ಹಳೇ ವೈರಿಯು—ಈಗ ಮುನಿದು—ಮಹಾಶಕ್ತಿಯಿಂ—ಕುಯುಕ್ತಿತಂತ್ರದಿಂ—ನಮ್ಮೆದುರಾಗಿದ್ದಾನೆ.

೨. ನಮ್ಮಲ್ಲಿ ತ್ರಾಣವಿಲ್ಲವು;—ಸಹಾಯ ಬೇಡುತ್ತೇವೆ.—ಅಭಯದಾತ ಬರಲು—ಸಂತೋಷವಾಗಿದ್ದೇವೆ.—ಅದಾರೆಂದರೆ—ಯೇಸು ಕ್ರಿಸ್ತನೇ;—ಯೆಲ್ಲಾ ಸೃಷ್ಟಿಗೂ—ಸರ್ವೇಶನಾತನು.—ಮತ್ತಾಬ್ಬ ದೇವರಿಲ್ಲ.

೩. ಭೂ ದೆವ್ವತುಂಬಾಗಿದ್ದರೆ—ನಮ್ಮನ್ನು ನುಂಗ್ಯಾದಿಲ್ಲ.—ವಿಜಯ ನಮ್ಮದಾಗೆದೆ;—ನಮ್ಮಲ್ಲಿ ಭಯವಿಲ್ಲ.—ಈ ಲೋಕೇಶನು—ಶಿಟ್ಟಾಗಿದ್ದರೂ,—ಹಾನಿಗೂ ನಿಲ್ಲನು.—ಯಾಕೆ? ಶಿಕ್ಷಿಯಿತು.—ಈ ಮಾಂದೇ ಮಾತು ಸಾಕು.

೪. ಯಾರಾರೂ ತಪ್ಪಿಸುವರೇ—ಪವಿತ್ರ ವಾಕ್ಯವ

ನ್ನು?—ದಿವ್ಯಾತ್ಮವಾಳಿ ಕಾಂಡದೆ—ಸದ್ಭಕ್ತ ಜನರನ್ನು;
ಪೆಣ್ಣುಳು, ಮಕ್ಕಳು,—ಪೋನ್ನು, ಪೊಸರು,—ಯೆ
ಲ್ಲಾ ಪೋಗಲಿ!—ಪೋಯ್ತವರ ಗತಿ.—ರಾಜ್ಯಾದಿ ನ
ಮ್ಮಪಾಲು.

೪೩.

Mel. Lobt Gott, ihr Christen alle gleich.

೧. ನಾನೂರು ಗ್ರಾಮಗಳನ್ನು—ಸಂಚರಿಸುತ್ತಿರೆ,—
ನಿನ್ನನ್ನು ನೆನಸುವೆನು,—ಯೆರೂಸಲ್ಯೇಮವೇ!

೨. ಪವಿತ್ರ ನಿನ್ನ ಕಾಂತಿಯು—ಮನೋದೃಷ್ಟಿಯಲಿದೆ.
ಓ ಪಟ್ಟಣೇ, ನಿನ್ನನ್ನು—ನಾನೆಂದೂ ಮರೆಯೆ.

೩. ಓ ದೇವರ ಪ್ರಕಾಶವ—ಕಂಡ ಗುಡ್ಡಂಗಳೇ,—
ನಿಮ್ಮನ್ನುಯ್ಯೇರಿ ನೋಡುವ—ಸಂತೋಷ ದೊಡ್ಡದ್ದೇ.

೪. ಚೆಲ್ವಾದ ನಿನ್ನ ತೀರವು—ಗೆನ್ನೇಜರೇಥವೇ.—
ಆ ಘನವುಳ್ಳ ಕರ್ಮೆಲು—ಸೌಂದರ್ಯವಾಗಿದೆ.

೫. ಆ ಹಿಮವಂತ ಪೆರ್ಮೋನು,—ಗಿಲ್ಬಾದು,
ಯೆರಿಖೋ,—ಬೆಥ್ಲೇಮಬೈಲು, ಕಾನವು,—ಸೌಂದರ್ಯ
ವಲ್ಲವೋ?

೬. ಆದಾಗ್ಯೂ ವಾಂದ್ಯೆ ಶ್ರೇಷ್ಟವು—ಸಮಸ್ತ ದೇ
ಶಕ್ಕೆ:—ಚಿಯೋನ ಚಿನ್ನ ಕೋಟೆಯು—ಮಹತ್ವವುಳ್ಳದ್ದೇ.

೨. ಓ ಪರಿಶುದ್ಧ ಗಾಲ್ಗಾಥಾ!—ಓ ಇಪ್ಪೈಗುಡ್ಡವೇ! ಜಗತ್ತಿಗೆ ಸಂಜೀವನ—ನಿಮ್ಮಲ್ಲಿ ಹುಟ್ಟ್ವದೆ.

೪೪.

Mel. O Jesu Christ, mein's Lebens Licht.

೧. ಓ ಕ್ರಿಸ್ತಾ, ನೀತಿಸೂರ್ಯನೇ!—ಸಮಸ್ತ ಭಕ್ತಸ ಭೆಗೆ—ಆಕಾಶದಿಂ ಪ್ರಕಾಶಿಸಿ,—ಪ್ರಕಾಶ ಉಂಟು ಮಾಡುತ್ತೀ.

೨. ಓ ನಮ್ಮ ಪ್ರಿಯ ಕರ್ತನೇ,—ಆಧಾರವಾಗಿರೆ ಮಗೆ!—ಸೈತಾನನಿಂದ ನಮ್ಮನ್ನು—ಕೃಪಾಳುವಾಗಿ ರ ಕ್ಷಿಸು!

೩. ಪವಿತ್ರ ನಿನ್ನ ರಕ್ತವು—ನಮ್ಮನ್ನು ತೊಳಿಯುವ ದು;—ಶರೀರ ನಿದ್ದೆಗೈದರೆ—ವಿಶ್ವಾಸ ಯೆಚ್ಚರವಾಗಿದೆ.

೪. ನಮ್ಮನ್ನು ಕಾಯಿ, ಕ್ರಿಸ್ತನೇ!—ನೀನೆಮ್ಮ ಭದ್ರ ದುರ್ಗನೇ.—ಮುಂಜಾನೆ ಯೆಚ್ಚತ್ತಾಗಲು,—ನಿನ್ನನ್ನು ಸ್ತುತಿಸುವೆವು.

೪೫.

Mel. Vom Himmel hoch, da komm' ich her.

೧. ಈಗನ್ನುಜನರಕ್ಷಕ—ಕನ್ಯಾಸ್ತ್ರೀಯಿಂದ ಹುಟ್ಟಿದ.

ಇದು ಸಮಸ್ತ ಲೋಕಕ್ಕೆ—ಮಹಾ ಆಶ್ಚರ್ಯವಾ
ಗಿದೆ.

೨. ನರೇಚ್ಛೆಯಿಂದಲ್ಲದೆ,—ದೇವಾತ್ಮಶಕ್ತಿಯಿಂದ
ಲೇ,—ಸರ್ವೋಚ್ಚ ದೇವವಾಕ್ಯವು—ಸ್ತ್ರೀಗರ್ಭಫಲವಾ
ಯಿತು.

೩. ಕುಮಾರಿ ಬಸುರಾದರೂ,—ಕನ್ಯತ್ವ ತಪ್ಪಲಿಲ್ಲವು.
ಕನ್ಯಾಸ್ತ್ರೀಯಿಂದ ದೇವಜ—ಪವಿತ್ರನಾಗಿ ಹುಟ್ಟಿದ.

೪. ಆನಂದಸ್ಥಾನವಂ ಬಿಟ್ಟು,—ಈ ನರಲೋಕಕ್ಕಿಳಿ
ದು,—ಕೃಪಾಳು ನಮ್ಮ ರಕ್ಷಕ—ನಮ್ಮೋಲು ಪಾಡು ತಾ
ಳಿದ.

೫. ಆಕಾಶದಿಂದ ಹೊರಟು—ಆಕಾಶಕ್ಕೇರಿ ಹೋ
ದನು;—ಪಾತಾಳಕ್ಕಿಳಿದವನು—ಮಹತ್ವದಲ್ಲಿ ಕೂತನು.

೬. ಓ ದಿವ್ಯ ಮಿತ್ರ, ಯೇಸುವೇ,—ಮನುಷ್ಯನ
ಕುಮಾರನೇ,—ಮನುಷ್ಯರಾದ ನಮ್ಮನ್ನು—ಮಹತ್ವ
ದಲ್ಲಿ ಸೇರಿಸು!

೪೬.

Mel. Stärk' uns, Mittler, dein sind wir.

೧. ತ್ರಾಹಿ, ಮಧ್ಯವರ್ತಿಯೇ,—ನಿನ್ನ ಭಕ್ತರನ್ನು;—ಕಾ
ಯಿ, ಸರ್ವನಾಥನೇ,—ನಿನ್ನ ಸಭೆಯನ್ನು!—ನಿನ್ನಲ್ಲಿ ನಂ

ಬುತ್ತೇವೆ;—ನೀನೆಮ್ಮ ಯಜಮಾನನು;—ನಾವು ನಿನ್ನ
ದಾಸರು.—ದಿವ್ಯ ನಿರ್ಮಾಣಿಕಾ,—ದಿವ್ಯ ಮಧ್ಯಸ್ಥನೇ,
ಬಾಧಕನೇ, ಅಭಯದಾತಾ,—ಓ ರಕ್ಷಕನೇ,—ಜೀವದ
ನ್ನಪಾನ—ದಯಪಾಲಿಸೆಮಗೆ—ಕಾರುಣ್ಯ ಮಾಡಿ!

೨. ನಮ್ಮ ಪ್ರಾಯಶ್ಚಿತ್ತಕ್ಕೆ—ನಿನ್ನ ಪ್ರಾಣ ಬಿಟ್ಟು,
ನಿನ್ನ ರಕ್ತ ಚೆಲ್ಲಿದೆ,—ಪ್ರೀತಿ ನಮ್ಮಲ್ಲಿಟ್ಟು.—ನೀನೆಮ್ಮ
ಶಿಕ್ಷೆ ಪೊತ್ತಿ.—ನಮ್ಮನ್ನು ಕನಿಕರಿಸಿ—ಕ್ರೂಜೆಯಲ್ಲಿ
ತೀರಿದಿ.—ದಿವ್ಯ ನಿರ್ಮಾಣಿಕಾ,—ದಿವ್ಯ ಮಧ್ಯಸ್ಥನೇ,—
ಬಾಧಕನೇ, ಅಭಯದಾತಾ,—ಓ ರಕ್ಷಕನೇ,—ಪಾಪಪರಿ
ಹಾರ—ದಯಪಾಲಿಸೆಮಗೆ—ಕಾರುಣ್ಯ ಮಾಡಿ!

೩. ನಿತ್ಯ ಜೀವರಾಜನೇ,—ಯೆದ್ದು ಗೋರಿಯಿಂದ—
ಮೃತಿಯನ್ನು ಜೈಸಿದೆ—ದಿವ್ಯ ತ್ರಾಣದಿಂದ;—ನಿಂನಲ್ಲಿ
ನಮ್ಮ ಜೀವ.—ಪಾತಾಳಲೋಕಕ್ಕಿಳಿದಿ;—ಪರಲೋಕಕ್ಕೇ
ರಿದ್ಧೀ.—ದಿವ್ಯ ನಿರ್ಮಾಣಿಕಾ,—ದಿವ್ಯ ಮಧ್ಯಸ್ಥನೇ,—
ಬಾಧಕನೇ, ಅಭಯದಾತಾ,—ಓ ರಕ್ಷಕನೇ,—ನಮ್ಮ ಆ
ತ್ಮವನ್ನು—ಮೃತಿಯಿಂದ ತಪ್ಪಿಸು—ಕಾರುಣ್ಯ ಮಾಡಿ!

೪೭.

Mel. Wachet auf! ruft uns die Stimme.

೧. ಕಾಯುವವರೆದ್ದಿದ್ಧಾರೆ;—ಯೆಚ್ಚತ್ತಿರೆಂದು ಕೂಗು
ತ್ತಾರೆ;—ಯೆಚ್ಚತ್ತಿರು, ಚಿಯೋನಳೇ.—ಅವರ್ ಘನಶಬ್ದ

ದಲ್ಲಿ — ಕೂಗೋದು ಮಧ್ಯರಾತ್ರಿಯಲ್ಲಿ: — ಪ್ರವೀಣ ಕನ್ಯಾಸ್ತ್ರೀಯರೇ, — ಇಗೋ, ಇಗೋ, ಪತಿ! — ದೀಪಂಗಳಂ ಹಚ್ಚಿ! — ಹಲ್ಲೆಲೂಯಾ! — ಸಮೀಪವೇ — ವಿವಾಹಕ್ಕೆ ಪ್ರವೇಶಿಸುವ ಘಳಿಗೆ!

೨. ಈ ಉದಯರಾಗಕ್ಕಾಗಿ — ಚಿಯೋನಳು ಹ್ಲಾದಿತಳಾಗಿ — ಯೆಚ್ಚತ್ತು ಯೆದುಗೊಳ್ಳಲು, — ಕೋಟಿಸೂರ್ಯಃಶೋಭಾಕ್ರಾಂತ — ಪ್ರಸನ್ನ ಸತ್ಯವಂತ ಕಾಂತ — ಆಕಾಶದಿಂದ ಬಂದನು. — ಪ್ರಿಯ ಕಿರೀಟ, ಬಾ, — ಓ ಯೇಸು, ದೇವಜಾ! — ಹೋಸಿಯನ್ನ! — ನಿನ್ನೊಡನೆ — ಕೂಡಿದ್ದರೆ, — ಕೂತೇವು ನಿನ್ನ ಮೇಜಿಗೆ.

೩. ನಾನಾ ವಾದ್ಯಶಬ್ದದಿಂದ — ದೂತಮನುಷ್ಯಧ್ವನಿಯಿಂದ — ಯೆದ್ದೀತು ನಿನ್ನ ಸ್ತೋತ್ರವು. — ನಾವು ರತ್ನದ್ವಾರ ಸೇರಿ, — ಸಿಂಹಾಸನದ ಹತ್ತಿರ ಯೇರಿ — ವಾಡ್ಡೋಲಗಕ್ಕೆ ಬಂದೆವು; — ಕಣ್ಣೊಂದೂ ಕಾಣದ, — ಕಿವ್ಯೊಂದೂ ಕೇಳದ — ಆತ್ಮತೃಪ್ತಿ — ಉಂಟಾಯಿತಾಹಾ! — ಕೊಂಡಾಡುವಾ; — ಅನಂತ ಸ್ತೋತ್ರ ಮಾಡುವಾ.

೪೮.

Mel. Nun ruhen alle Wälder.

೧. ಓ ಲೋಕವೇ, ನೋಡಲ್ಲಿ, — ಆ ಕ್ರೂಜೇವೃಕ್ಷದಲ್ಲಿ — ಅಘೋರ ನೋಟವೇ! — ಆ ಕಷ್ಟದಾಳು ಯಾ

ರು? — ಆ ನಿಂದ್ಯೆದಾಸನ್ಯಾರು? — ಪ್ರಶಸ್ತ ಜೀವರಾ ಜನ್ಯೇ.

೨. ಈ ದೊಡ್ಡ ಪೀಡೆಯನ್ನು, — ಈ ರಕ್ತ ಬೆವರನ್ನು ಚನ್ನಾಗಿ ದೃಷ್ಟಿಸು! — ಅಗಾಧ ಚಿಂತೆಯಿಂದ, — ನಿಟ್ಟುಸು ರುಗಳಿಂದ — ಈ ಯೆದೆ ಛಿನ್ನವಾಯಿತು.

೩. ಯಾರಿಂದ ಪೆಟ್ಟು ತಿಂದೆ? — ಈ ಕ್ರೂರವಾದ ನಿಂದೆ — ನೀನ್ಯಾಕೆ ತಾಳಿದೆ? — ನೀನಪರಾಧಿಯಲ್ಲ; — ನಮ್ಮಂಥಾ ಪಾಪಿಯಲ್ಲ, — ಪವಿತ್ರ ದೇವಪುತ್ರನೇ.

೪. ಮೂಲೋತ್ಪಾದಿಯಿಂದ — ಅಸಂಖ್ಯ ಪಾಪದಿಂದ — ನಾ ಭ್ರಷ್ಟನಾಗಿರೆ, — ಅಶುದ್ಧ ಪಾಪಿಗಾಗಿ — ನೀ ಶುದ್ಧ ಪೂರ್ಣೆಯಾಗಿ — ನನ್ನಾಲು ಶಾಪ ತಾಳಿದೆ.

೫. ನಿನ್ನ ಕಟಾಕ್ಷಕ್ಕಾಗಿ — ಯೇನೇನು ಪ್ರತಿಯಾಗಿ — ನಾ ಮಾಡ ಬಹುದು? — ನಾ ಬಿದ್ದ ಪಾಪವನ್ನೂ — ನೀ ಪಟ್ಟ ಶ್ರಮವನ್ನೂ — ನಾನೆಂದೂ ಮರೆತು ಬಿಡೆನು.

೪೮.

Mel. O Lamm Gottes, unschuldig.

೧. ದೋಷರಹಿತವಾಗಿ — ನಿಬದ್ಧ ದೇವರ ಕುರಿ! — ತಾಳ್ಮೆಪೂರಿತವಾಗಿ — ನಿಂತಿಪ್ಪ ಪೂಸ್ಪದ ಗುರಿ! — ಅ

ಘೋರ ನಿನ್ನ ತಾಪ;—ಅಸಂಖ್ಯ ನಮ್ಮ ಪಾಪ.—ಕಾರು
ಣ್ಯ ತೋರಿಸು, ಯೇಸು!

೨. ದ್ರೋಹರಹಿತವಾಗಿ—ನಿಬದ್ಧ ದೇವರ ಕುರಿ!
ತಾಳ್ಮೆಪೂರಿತವಾಗಿ—ನಿಂತಿಪ್ಪ ಪೂಜ್ಯದ ಗುರಿ!—ಅ
ಘೋರ ನಿನ್ನ ತಾಪ;—ಅಸಂಖ್ಯ ನಮ್ಮ ಪಾಪ;—ಕಾರು
ಣ್ಯ ತೋರಿಸು, ಯೇಸು!

೩. ದ್ರೋಹರಹಿತವಾಗಿ—ನಿಬದ್ಧ ದೇವರ ಕುರಿ!—
ತಾಳ್ಮೆಪೂರಿತವಾಗಿ—ನಿಂತಿಪ್ಪ ಪೂಜ್ಯದ ಗುರಿ!—ಅ
ಘೋರ ನಿನ್ನ ತಾಪ;—ಅಸಂಖ್ಯ ನಮ್ಮ ಪಾಪ.—ವಿಶ್ರಾಂ
ತಿ ಪಾಲಿಸು, ಯೇಸು!

[Andere Fassung, nach derselben Melodie.]

೧. ಕುರಿಯಂತೆ ನಿನ್ನನ್ನು—ಬಲ್ಯಾಗಿ ಕೊಟ್ಟ ಪವಿತ್ರ!
ನಿಂದೆ ಶ್ರಮೆಗಳನ್ನು—ತಾಳ್ದಿಪ್ಪ ಮಾನವಮಿತ್ರ!—
ನೀನ್ಹೊತ್ತಿ ಪಾಪವೆಲ್ಲಾ,—ಮತ್ತೊಂದು ಗತಿ ಇಲ್ಲ;—ನ
ಮ್ಮನ್ನುರಕ್ಷಿಸ್ಯಾ, ಯೇಸು.

೫೦.

Mel. Nun danket alle Gott.

೧. ಯೇಸುವಿನೊಡನೆ—ನಾ ತೊಡಗಿ ಕೊಂಡ್ಯೇನು—
ಯೇಸುವಿನೊಡನೆ—ತೊಟ್ಟದ್ದು ಮುಗಿಸ್ಯೇನು.—ಕಣ್ಣೆ

ತ್ತಲಾದರೂ,—ಬಿದ್ದಾಗ್ಲೂ, ಯೆಂದಿಗೂ—ಯೇಸು ವಿನ
ಲ್ಲಿಯೇ—ಮನಾ್ಯದೃಷ್ಟಿಪುದು.

೨. ಯೇಸುವಿದ್ದಲ್ಲಿಯೇ—ಜಗದ್ವಿಚಾರವೇನು?—ನಂಗಾತನಿದ್ದರೆ—ಸುಖದ್ರವಾಗಿದ್ದೇನು.—ಯೇಸುವ ದಯೆಯು—ಅವಿಶ್ರೈಶ್ವರ್ಯವು.—ಯೇಸುವ ಸಾಮಿಪ್ಯ—ಮಹಾ ಮೋಕ್ಷಾಬ್ಧಿಯು.

೩. ಯೇಸುವ ವಾಕ್ಯವು—ಅಮೂಲ್ಯ ಮಂತ್ರಘೋಷ;—ಯೇಸುವ ನೀತಿಯು—ಪವಿತ್ರ ತೇಜಪೋಷ.—ಯೇಸುವಿದ್ದಲ್ಲಿಯೇ—ನಾ ಭಯ ಪಡೆನು.—ಯೇಸುವಿದ್ದಲ್ಲಿಯೇ—ಮುಕ್ತಿಲಿ ಜೀವವು.

೩೧.

Mel. Wachet auf! ruft uns die Stimme.

೧. ಕರ್ತ, ನಮ್ಮ ಮಧ್ಯದಲ್ಲಿ—ಪ್ರವೇಶವಾಗಿರು! ನಿಂನಲ್ಲಿ—ಸಂತೃಪ್ತಿ ಪೊಂದ ಬಂದೆವು.—ಕಾಡು ಪರಿಪಾರವನ್ನು;—ವಿಶ್ವಾಸವಿಡುವವರನ್ನು—ಮುಕ್ತಿ ಕೈಯಿಂದ ರಕ್ಷಿಸು!—ಓ ಯೇಸು, ಯೆಂದಿಗೂ—ನಮ್ಮರಪಾಗಿರು!—ಆಮೆನ್! ಆಮೆನ್!—ಯೆದ್ದಾಗಲೆ—ನಿನ್ನಾಡನೆ—ಕೂತೇವು ನಿನ್ನ ಮೇಜಿಗೆ.

೨. ಯೇಸು ದಿವ್ಯ ಕೃಪೆಯಾಗಿ—ಕೊಟ್ಟಂಥ ರೊಟ್ಟಿ ಜೀವಕ್ಕಾಗಿ—ವಿನಯದಿಂದ ತಿನ್ನಿರಿ!—ಜೀವವುಳ್ಳ ಪಾತ್ರೆಯಲ್ಲಿ—ಕುಡೀರಿ! ನಿತ್ಯ ರಾಜ್ಯದಲ್ಲಿ—ಸ್ವತಂತ್ರ ನಿಮಗಿರಲಿ!—ಸತ್ಹೋಗುವನಕ—ಹಿಡೀರಿ ಕರ್ತನ!—ಆಮೆನ್! ಆಮೆನ್!—ಹೋದಿಕ್ಕಟ್ಟೇ;—ಆ ಊಟಕ್ಕೆ—ಕೂತಾರು ಸ್ವಲ್ಪ ಜನರೇ.

೫೨.

Mel. Nun danket alle Gott.

೧. ಇಗೋ, ಮನುಷ್ಯನು!—ಕಣ್ಣೋಲಿ ದುಖ್ಖಜಲ; ಮೋರೋಲಿ ಲಜ್ಜೆಯು;—ತುಟೋಲಿ ಶೋಕಮಲ; ತಲೋಲಿ ಬೆವರು;—ಸಂಕಷ್ಟ ಮನದಿ;—ಯೆದೋಲಿ ತಾಳ್ಮೆಯು;—ಈ ರೂಪ ನೋಡಿರಿ!

೨. ಇಗೋ, ಮನುಷ್ಯನು!—ತುಂಬಾಯಿತು ಘಾಯದಿಂದ—ಶರೀರವು; ಯೆಲೋ,—ಈ ಶ್ರಮೆಯು ಯೆಲ್ಲಿಂದ?—ಪವಿತ್ರನೋತಕ್ಕೆ—ಪ್ರಯಾಸ ಪಟ್ಟನು?—ನಮ್ಮಪರಾಧವೇ—ಆತನ್ನಕೊಂದಿತು.

೩. ಇಗೋ, ಮನುಷ್ಯನು!—ನೀ ಪಟ್ಟ ಶ್ರಮವನ್ನು ಮರೆಯಲಾರೆವು;—ಕರ್ತಾ, ತಕ್ಕೋ ನಮ್ಮನ್ನು!—ದಯಾಳು ಯೇಸುವೇ,—ನಮ್ಮನ್ನು ರಕ್ಷಿಸು!—ನೀನೊಬ್ಬ ನಮಗೆ—ಮಧ್ಯಸ್ಥಗಾರನು.

೪. ಇಗೋ, ಮನುಷ್ಯನು!—ನಿನ್ನಲ್ಲಿ ನಂಬುತ್ತೇವೆ. ಅನಂತ ಜೀವವು—ನಿನ್ನಿಂದ ಹೊಂದಿದ್ದೇವೆ!—ನೀ ಶಾಪ ತಾಳಿದೆ.—ಅಕ್ಷಯವಾಯಿತು.—ಸಮಾಧಿ ನಮಗೆ—ವಿಶ್ರಾಂತಿಸ್ಥಳವು.

೭೬೩.

Mel. Mitten wir im Leben sind.

೧. ಮಧ್ಯ ಜೀವದೊಳಗೆ—ಮೃತಿಯಲ್ಲಿದ್ದೇವೆ.—ಯೆಲ್ಲಿ ಗತಿ? ಕೃಪೆಯ—ಯೆಲ್ಲಿ ಹೊಂದುತ್ತೇವೆ?—ನಿನ್ನೊಬ್ಬನಲ್ಲಿ, ಕರ್ತ!—ಓ ಕರ್ತ, ನಮ್ಮ ಕರ್ಮವು—ನಿನ್ನ ಕೋಪವೆಬ್ಬಿಸಿತು.—ನಿರ್ಮಲ ಕರ್ತನೇ,—ನಿರ್ಮಲ ಶಕ್ತನೇ,—ನಿರ್ಮಲ ದಯಾಪರನಾದ—ಓ ರಕ್ಷಕನೇ,—ತೀಕ್ಷ್ಣ ಸಾವಿನಿಂದ—ನಮ್ಮ ಆತ್ಮ ತಪ್ಪಿಸು—ಕಾರುಣ್ಯ ಪಟ್ಟು.

೨. ಮಧ್ಯ ಮೃತಿಯೊಳಗೆ—ನರಕದ ದ್ವಾರ—ತೆರೆದಾಗಲೆಮಗೆ—ಯೆಲ್ಲಿ ಪ್ರೀತಿಗಾರ?—ನೀನೊಬ್ಬ, ನಮ್ಮ ಕರ್ತ!—ನೀ ದೃಷ್ಟಿಸು ಕಟಾಕ್ಷದಿ—ನಮ್ಮ ಪಾಪ ದುರ್ಗತಿ! ನಿರ್ಮಲ ಕರ್ತನೇ,—ನಿರ್ಮಲ ಶಕ್ತನೇ,—ನಿರ್ಮಲ ದಯಾಪರನಾದ—ಓ ರಕ್ಷಕನೇ,—ಅಗ್ನಿಕ್ಷಯದಲ್ಲಿ—ದೊಬ್ಬ ಬೇಡ ನಮ್ಮನ್ನು—ಕಾರುಣ್ಯ ಪಟ್ಟು.

೩. ಮಧ್ಯ ನರಕದೊಳು—ಶಿಕ್ಷೆಯ ಪ್ರಮಾಣ—ನ

ಮ್ಮ ಮೇಲೆ ಬೀಳಲು, — ನಮಗೆಲ್ಲಿ ಸ್ಥಾನ? — ಓ ಯೇಸುವೇ, ನಿಂನಲ್ಲಿ. — ನೀ ನಿನ್ನ ರಕ್ತ ಚೆಲ್ಲಿದೆ — ಪಾಪ ಪರಿಹಾರಕ್ಕೆ. — ನಿರ್ಮಲ ಕರ್ತನೇ, — ನಿರ್ಮಲ ಶಕ್ತನೇ, ನಿರ್ಮಲ ದಯಾಪರನಾದ — ಓ ರಕ್ಷಕನೇ, — ಹೀನ ಮಾಡ ಬೇಡ — ಭಕ್ತರ ನಿರೀಕ್ಷೆಯಂ — ಕಾರುಣ್ಯ ಪಟ್ಟು.

೫೪.

Mel. Nun ruhen alle Wälder.

೧. ಆ ಕಳ್ಳ ಕ್ರೂಜೆಯಲ್ಲಿ — ತನ್ನಂತ್ಯ ಕ್ಷಣದಲ್ಲಿ — ವಿಶ್ವಾಸಿಸುತ್ತಿರೆ, — ಜಗತ್ಕರ್ತಂಗೆ ಬಾಗಿ — ಕಟಾಕ್ಷ ಬೇಡಲಾಗಿ — ಕೃತಾರ್ಥನಾದನಲ್ಲವೇ?

೨. ಭಯಸ್ಥ ಪಾಪಗಾರ — ಸಂಪೂರ್ಣ ಪರಿಹಾರ — ತಕ್ಕೊಳ್ಳ ಬಹುದಾ? — "ಪಾಪಿಷ್ಠಗೆ ನಿರಂತ್ರ, — ಸಂತೋಷದ ಸ್ವತಂತ್ರ," — ಈ ಮಾತಾಶ್ಚರ್ಯವಲ್ಲವಾ?

೩. ಆದಾಗ್ಯೂ ವಾಂದ್ಯೇ ಭಯ: — ಪ್ರತ್ಯಕ್ಷವಾದ ದಯ — ಆ ಪಾಪಿ ಹೊಂದಿದ; — ಮತ್ತೊಬ್ಬ ಕಳ್ಳ ತೀರಿ, — ರಕ್ಷಣ್ಯಕಾಲ ಮೀರಿ, — ನ್ಯಾಯಾಜ್ಞೆ ಪಟ್ಟ ಶಾಪಿತ.

೪. ಜಗತ್ಸಂಪೂರ್ಣ ಮಾಯ; — ಓ ಯೇಸು, ನೀ ಸಹಾಯ — ಭಯಸ್ಥಗೆ ಕಾಡು! — ಇಂನ್ಯಾಕೆ ವ್ಯರ್ಥ ಭ

ಯ?—ಇಲ್ಲಲ್ಲಿ ನಿನ್ನ ದಯ—ಸಾಕೆನ್ನಗೆ ಯೆಂದೆಂದಿಗೂ.

೫೫.

Mel. Jesus meine Zuversicht.

೧. ನಾನು ನಂಬಿ ಕೊಳ್ಳುವ—ನನ್ನ ಕರ್ತ ಬಾಳುತ್ತಾನೆ. ಮರಣದ ಭಯವ—ಪರಿಹಾರ ಮಾಡಿದ್ಧಾನೆ.—ಗಾಢ ಕತ್ತಲೆಯೊಳು—ಆತ ನನ್ನ ಬೆಳಕು.

೨. ನಿತ್ಯ ಜೀವದರಸ—ತನ್ನ ಮಾತು ಕೈಕೊಂಡಾನು.—ಆತ ತನ್ನ ಭಕ್ತನ—ತಾನಿದ್ದಲ್ಲಿ ಶೇರಿಸ್ವಾನು. ಅಂಗವನ್ನು ತಲೆಯು—ಯೆಂದೂ ಬಿಟ್ಟು ಹೋಗದು.

೩. ಆತನೈಕ್ಯದೊಳಗೆ—ಭಕ್ತಿಯಿಂದ ಶೇರುತ್ತೇನೆ. ಆತನಲ್ಲಿ ನಂಬಿಗೆ—ಯೆಂಬ ಕೈಯನ್ನಿಡುತ್ತೇನೆ.—ಕ್ರೂರ ಮೃತಿ ನಮ್ಮನ್ನು—ಛೇದ ಮಾಡ ಕೂಡದು.

೪. ಮಾಂಸವಾಗಿ ಹುಟ್ಟಿದೆ;—ಬೇಗ ಬೀಳ್ವೆ ಬೂದಿಯಾಗಿ:—ಅಂತ್ಯದಿನ ಬರಲೇ—ಆತ ನಿತ್ಯ ಜೀವಕ್ಕಾಗಿ—ಮಣ್ಣಿನಿಂದ ಕರೆದು—ನನ್ನನ್ನೆಬ್ಬಿಸುವನು.

೫. ಇಲ್ಲಿ ರೋಗ, ದುಃಖವು;—ಅಲ್ಲಿ ಕ್ಷೇಮ, ಸುಖ, ಶ್ರಗ;—ಇಲ್ಲಿ ಮಣ್ಣು, ಧೂಳಿಯು;—ಅಲ್ಲಿ ದಿವ್ಯ

ಮಹಿಮಾನ.—ಮಣ್ಣಾಗಿಲ್ಲಿ ಬಿದ್ದರೆ,—ಆತ್ಮವಾಗಿ ಯೇಳುವೆ.

೬. ದೇಹಾ, ಹರ್ಷವಾಗಿರು!—ಯೇಸುವ ಸಂಬಂಧವಾದಿ.—ನಂಬಿ ಚಿಂತೆಯಂ ಬಿಡು;—ಜೀವಕ್ಕಾತ ನಿನ್ನ ಹಾದಿ.—ಕಡೆಯ ತುತೂರಿಯು—ನಿನ್ನನ್ನೆಬ್ಬಿಸುವದು.

೩೬.

Mel. Preis dem Todesüberwinder.

೧. ಗೊಲ್ಗಥದಿ ಮೃತವಾದ—ಮೃತ್ಯುಂಜಯಗೆ ಸ್ತುತಿ!—ಪಾಪಿಗಳಿಗಾಪ್ತನಾದ—ರಕ್ಷಕನಿಗೆ ಸ್ತುತಿ!—ನಮ್ಮ ರಾಜ ಬಾಳಲಿ!—ಸತ್ತು ಪುನರ್ಜೀವಿಯಾದ—ಜೀವದರಸನಿಗೆ—ಹಾಡಿರೆಲ್ಲಾ ಭಕ್ತರೆ!

೨. ಸ್ತೋತ್ರದಲ್ಲಿ ಹಾಡನಾಡಿ,—ಪೂರಿತ ಸಂತೋಷದಿ—ಮೃತ್ಯುಂಜಯನಂ ಕೊಂಡಾಡಿ,—ಅಡ್ಡ ಬಿದ್ದು ಹಾಡಿರಿ!—ಅತ್ಯಧಿಕ ಹರ್ಷಿಸಿ—ಯೋಗ್ಯ ಸ್ತುತಿಮಾನ ಮಾಡಿ,—ಘನವುಳ್ಳ ಕರ್ತಗೆ—ಯೆರಗಿರಿ, ಭಕ್ತರೇ!

೩. ನಾ ಸಮಾಧಿಯಿಂದೆದ್ದಾಗ,—ನನ್ನ ಪ್ರಿಯ ಯೇಸುವೇ,—ನಿನ್ನ ಮುಖ ನೋಡಿದಾಗ,—ದೇಹ ತೇಜವಾಗಿರೆ,—ಮಧ್ಯವರ್ತಿ ಕರ್ತನೇ,—ಅಲ್ಲಿ ನಾನು ಯೆಚ್ಚತ್ತಾಗ, ನಿನ್ನ ಜೀವದೈಕ್ಯಕ್ಕೆ—ಪೂರ್ಣವಾಗಿ ಸೇರುವೆ.

೫೬

[Das Gleiche, nach der Melodie Saft vom Felsen.]

೧. ಗೊಲ್ಗಥದಿ ಮೃತವಾದ—ಮೃತಿಂಜಯಗೆ ಸ್ತುತಿ! ಪಾಪಿಗಳಿಗಾಪ್ತನಾದ—ರಕ್ಷಕನಿಗೆ ಸ್ತುತಿ!—ಸತ್ತು ಪುನ ಜೀವಿಯಾದ—ನಮ್ಮ ಯಜಮಾನನಾದ—ಜೀವದರಸನಿಗೆ—ಪಾಡಿರೆಲ್ಲಾ ಭಕ್ತರೆ!

೨. ಸ್ತೋತ್ರದಲ್ಲಿ ಪಾಡನಾಡಿ—ಪೂರಿತ ಸಂತೋಷದಿ—ಮೃತಿಂಜಯನಂ ಕೊಂಡಾಡಿ,—ಅಡ್ಡ ಬಿದ್ದು ಹಾಡಿರಿ!—ಯೋಗ್ಯ ಸಾಭಿಮಾನದಿಂದ—ಸ್ತೋತ್ರಗಳ ಧ್ವನಿಯಿಂದ—ಘನವುಳ್ಳ ಕರ್ತಗೆ—ಯೆರಗಿರಿ, ಭಕ್ತರೇ!

೩. ನಾ ಸಮಾಧಿಯಿಂದೆದ್ದಾಗ,—ನನ್ನ ಪ್ರಿಯ ಯೇಸುವೇ,—ನಿನ್ನ ಮುಖ ನೋಡಿದಾಗ,—ದೇವ ತೇಜವಾಗಿರೆ,—ಅಲ್ಲಿ ನಾನು ಯೆಚ್ಚತ್ತಾಗ,—ನಿನ್ನ ಪುತ್ರರ ಬಂದಾಗ,—ನಿನ್ನ ಜೀವದೈಕ್ಯಕ್ಕೆ—ಪೂರ್ಣವಾಗಿ ಶೇರುವೆ.

———o0o———

೫೭.

Mel. Christ lag in Todes Banden.

೧. ಯೇಸುವು ಕ್ರೂಜೆಯಲ್ಲಿ—ಸತ್ತೆಮ್ಮ ಪಾಪಕ್ಕಾಗಿ,—ತೃತೀಯ ದಿನದಲ್ಲಿ—ಯೆದ್ದ ಸಜೀವಿಯಾಗಿ.—ಇದರಲ್ಲಿ ಹರ್ಷಿಸಿ—ಕರ್ತಂಗೆ ಸ್ತೋತ್ರ ಮಾಡಿರಿ!—ಕೊಂಡಾಡಿ! ಹಲ್ಲೆಲೂಯಾ. ಹಲ್ಲೆಲೂಯಾ.

೨. ಸಾವನ್ನು ಜೈಸುವಂಥ—ಬಲಿಷ್ಠ ಸಿಕ್ಕಲಿಲ್ಲ; ನಮ್ಮಲ್ಲಿ ನೀತಿವಂತ—ಯೆಲ್ಲೆಲ್ಲೂ ಕಾಣಲಿಲ್ಲ;—ಅದರಿಂದ ಮೃತ್ಯುವು—ನಮ್ಮಲ್ಲಿ ಕೈಯ ಹಾಕಿತು.—ಸಹಾಯಗಾರನ್ಯಾರು? ಹಾಲ್ಲೆಲೂಯಾ.

೩. ಸ್ವತಂದೇ ಮನೆಯಿಂದ—ಬಂದು ಸಹಾಯಕ್ಕಾಗಿ, ಅನಂತ ಪ್ರೀತಿಯಿಂದ—ಸತ್ಧ್ಯಾಗಿ ನಮ್ಮೋಲಾಗಿ,—ಮೃತ್ಯುವಿನ ರಾಜ್ಯವ—ಯೇಸು ಪೂರಾಗಿ ಜೈಸಿದ;—ಇನ್ನೇನೂ ಭಯವಿಲ್ಲ. ಹಾಲ್ಲೆಲೂಯಾ.

೪. ಜೀವಕ್ಕೂ ಕ್ರೂಜೆಯಲ್ಲಿ,—ಸಾವಿಂಗೂ, ಯುದ್ಧವಾಯಿತು;—ಆ ಜೀವ ಜೈಸುವಲ್ಲಿ—ಸಾವನ್ನು ನುಂಗಲಾಯಿತು.—ಸಾವ ತಾಳ್ದ ಜೀವವು—ಸಾವನ್ನು ಜೈಸಿ ಬಿಟ್ಟಿತು.—ಓಹೋ ನೀ ಸ್ಯಾತೆ, ಮೃತ್ಯು! ಹಾಲ್ಲೆಲೂಯಾ.

೫. ಓ ಸತ್ಯ ಪಸ್ಕಬಲಿ,—ನೀನೆಮಗನ್ನಪಾನ!—ಆ ಕ್ರೂಜೆವೃಕ್ಷದಲ್ಲಿ—ಆಯಿತೆಮಗೆಂಥಾ ದಾನ!—ನಮ್ಮ ಮನೆಗಳಿಗೆ—ಆ ರಕ್ತ ತಾಗಿಸಿದ್ದರೆ,—ಸಂಹಾರಿ ಮುಟ್ಟಲಾರ. ಹಾಲ್ಲೆಲೂಯಾ.

೬. ಈ ಪಸ್ಕಹಬ್ಬದಲ್ಲಿ—ಸಂತೋಷ ಪಡುತ್ತೇವೆ. ನಾವೆಂದೂ ಯೇಸುವಲ್ಲಿ—ಆನಂದವಾಗಿದ್ದೇವೆ.—

ಆತನ ದಯೋದಯ — ನಮ್ಮೊಳಗಾಯ್ತು ಪ್ರಬಲ;
ಸಂದ್ಯಾತು ಪಾಪರಾತ್ರಿ. ಹಲ್ಲೆಲೂಯಾ.

೨. ಶ್ರೀಯಾದ ರೊಟ್ಟಿಯುಂಟು — ಈ ಶುಭದೂಟದಲ್ಲಿ. — ಸಂತೃಪ್ತಿಯಾಗಲುಂಟು; — ಹುಳೀ ಹಿಟ್ಟೆಲ್ಲಾ ಚಲ್ಲಿ! — ಕ್ರಿಸ್ತ ನಮ್ಮ ಪೋಷವು. — ನಮ್ಮುತ್ತಮ ಸಂತೋಷವು; — ಬೇರೇನೂ ಆಶೆ ಇಲ್ಲ. ಹಲ್ಲೆಲೂಯಾ.

೫೮.

Mel. Meinen Jesum lass ich nicht.

೧. ನನ್ನ ಯೇಸುವಂ ಬಿಡೆ. — ಆತ ಸತ್ತ ನಂನೋಲಾಗಿ. — ಯೆಂದಿಗೂ ನಾನಾತಗೆ — ಅಟ್ಟುತ್ತೇನೆ ಸ್ಥಿರವಾಗಿ. ಆತ ಜೀವಜ್ಯೋತಿಯೇ. — ನನ್ನ ಯೇಸುವಂ ಬಿಡೆ.

೨. ನನ್ನ ಯೇಸುವಂ ಬಿಡೆ. — ನನ್ನ ಆಸ್ತಿ ನನ್ನ ಪ್ರಾಣ — ವಶ ಕೊಟ್ಟೆನಾತಗೆ; — ಆತ ನನ್ನ ಸಮಾಧಾನ. ನಾನು ಬಾಳೋವರೆಗೆ — ನನ್ನ ಯೇಸುವಂ ಬಿಡೆ.

೩. ಇಂದ್ರಿಯಂಗಳೊಳಗೆ — ತ್ರಾಣ ಧಾತು ಇಲ್ಲವಾಗಿ, — ನನ್ನ ಅಂತ್ಯದಿನಕ್ಕೆ — ಸೂರ್ಯ ಮೂಡಿ ಬರಲಾಗಿ, ಜೀವವಳಿಯುತ್ತಲೆ — ನನ್ನ ಯೇಸುವಂ ಬಿಡೆ.

೪. ಸದ್ವಿಶ್ವಾಸಮಹಿಮೆ — ಕಾಣುವಂಥ ಸ್ಥಳ ಸೇರಿ,

ತಂದೆ ಬಲಪಾರ್ಶ್ವಕ್ಕೆ—ಯೇಸು ಕೂತ ಮೇಲಕ್ಕೇರಿ,—
ಆತನಲ್ಲಿ ಪಾರ್ಥಿಪೆ;—ನನ್ನ ಯೇಸುವಂ ಬಿಡೆ.

೫. ಮಾಯಾ, ಡಂಭ, ಮಹಿಮೆ,—ನನಗೇನೂ
ಹಿತವಲ್ಲ;—ಸತ್ತು ಯೆದ್ದ ಯೇಸುವೇ—ಶ್ರೇಷ್ಠ ತೃಪ್ತಿ
ಮಾಡ ಬಲ್ಲ.—ನನ್ನ ಮಿತ್ರನಾತನೇ:—ನನ್ನ ಯೇಸು
ವಂ ಬಿಡೆ.

೬. ನನ್ನ ಯೇಸುವಂ ಬಿಡೆ.—ಇರ್ವೆನಾತನ ಬಳೀ
ಲಿ.—ಆತನಿಂದ ಕುಡಿವೆ—ಜೀವಜಲದ ನದೀಲಿ.
ಪಾಪ್ಪಿರಿ, ಸಹೋದ್ರರೆ:—ನನ್ನ ಯೇಸುವಂ ಬಿಡೆ.

೫೯.

Mel. Himmelan, nur himmelan.

೧. ಪರಲೋಕಕ್ಕೆಂದಿಗೂ—ಮಾರ್ಗ ಹಿಡಿದು—
ಪೋಗು! ಅಲ್ಲಿ ತುಂಬೋದು—ಭಕ್ತರಾಶಿಯು.—ಭೂ
ಲೋಕದಿ—ಸುಖದುಃಖಗಳವೆ;—ಮಹಿಮೆಯ ಕಡೆ
ಗೆ—ಕಣ್ಣಿರಲಿ!

೨. ಯೆಚ್ಚತ್ತಾಗ ಅಲ್ಲಿಗೆ—ಆತ್ಮವೆಬ್ಬಿಸು!—ಈ
ಪ್ರಯಾಣ ಶೀಘ್ರವೇ—ಮುಗಿಯುವದು.—ಯಾವಾ
ಗಲೂ—ಮೇಲಿನ ಸ್ವತಂತ್ರಕ್ಕೆ—ನಿನ್ನ ಸಿದ್ಧ ಮಾಡಿಯೇ,
ಯೆಚ್ಚತ್ತಿರು!

೩. ಪರಲೋಕದಾಲಯು — ನಿನ್ನ ಗತಿಯು. — ಈ ಪ್ರಪಂಚಮಾಯದ — ಚಿಂತೆ ಬೇಡವು. — ವಿಸರ್ಜಿಸು — ಲೋಕದಾಶೆ, ಮನವೇ. — ಪರಲೋಕದಾಸ್ತಿಯೇ — ನಿರ್ಲಯವು.

೪. ಕರ್ತನನ್ನು ದೃಷ್ಟಿಸಿ — ಮೋಕ್ಷ ಶೇರಲೆ, — ಹಾಲ್ಲೆಲೂಯಾ ಹಾಡುವಿ; — ಯೆಂಥಾ ಸುಖವೇ! — ವಿಜಯವು! — ಕ್ರೂಜೆಯಿಂದ ಪೀಠಕ್ಕೆ — ಯೆದ್ದ ಜಯಶಾಲಿಗೆ — ವಿಜಯವು!

೬೦.

Mel. Die güldne Sonne.

೧. ಸಂತೋಷಪೂರ್ಣ — ಶೃಂಗಾರಸೂರ್ಯ *) — ಈ ಭೂಮಿಯಲ್ಲಿ — ಪ್ರಕಾಶ ಚೆಲ್ಲಿ, — ಆನಂದಜ್ವಾಲೆಯ ಹೊಯ್ಯುವದು. — ಸುಶಾಂತ ನಿದ್ದೆ — ನಾ ಮಾಡುತ್ತಲಿದ್ದೆ; — ಯೆಚ್ಚರವಾಗಿ — ಹೃತ್ಸಂತಸವಾಗಿ — ದಿವಕ್ಕೆ ಮುಖವ ಯೆತ್ತಿದೆನು.

೨. ಹಾಡುವಾ, ಬತ್ರಿ! — ಕರ್ತಂಗೆ ತತ್ರಿ — ದಾನಗಳನ್ನು! — ಸಮಸ್ತವನ್ನು — ಕರ್ತನಿಗರ್ಪಿಸ ಯೋಗ್ಯವದೆ. ಪ್ರಾಮುಖ್ಯ ದಾನ — ಮನಸ್ಸಿನ ಧ್ಯಾನ; — ಸಂಶಯ

*) Oder besser, aber unverständlich: ಸಂತೋಷಾಕ್ರಾಂತ — ಹಿರಣ್ಯಕಾಂತ.

ಪ್ರೀತ—ಹೃದಯದ ಗೀತ—ಉತ್ತಮ ಧೂಪವು ಕರ್ತನಿಗೆ.

೩. ಕೃಪೆಯ ವರ,—ಕೇಡಿನ ಪಾರ,—ದಿನದ ಕಾಂತಿ, ರಾತ್ರಿಯ ಶಾಂತಿ,—ಆತನ ಕೃತ್ಯಗಳಾಗಿಹವು.—ಆತನ ಪಾತ್ರ—ವಿಶ್ರಮಿಕೆ ಛದ್ರ;—ಮತ್ತೀಳಲಾಗಿ,—ಮಹಾಬೆಳಕಾಗಿ—ಆತನ ದಯ ಪ್ರಕಾಶಿಪುದು.

೪. ಓ ಕರ್ತ, ನನ್ನ—ಪಾಪಂಗಳನ್ನ—ಕಟಾಕ್ಷದಿಂದ—ಶಕ್ಕ್ಯ ನನ್ನಿಂದ;—ದೇವರೆ, ಮನ್ನಿಸು ದುಷ್ಟನಿಗೆ! ಮುಂದಿನ ಸುಖ—ಮಾತ್ತಾಗುವ ದುಃಖ—ನಿನ್ನಕೈಯಲ್ಲಿ;—ನೀ ಯೆಲ್ಲವ ಬಲ್ಲಿ.—ನಿನಗೆ ಯೆಲ್ಲವ ವ್ಯಾಪ್ತಿಸಿದೆ.

೬೧.

Mel. Gott sey Dank in aller Welt.

೧. ದೇವರ ಸಮೀಪಕ್ಕೆ—ಶೇರ ಬರ್ರಿ ಯೆಲ್ಲರೇ!—ಆತ್ಮಗಳ ಶಾಂತಿಯು—ಆತನಿಂದ ಬೇಡುವಾ!

೨. ಆತನ ಸಮೀಪಕ್ಕೆ—ನಾವು ಶೇರಿ ಬಂದರೆ, ಆತನು ನಮ್ಮೊಳಗೂ—ಬಂದು ವಾಸಿಸುವನು.

೩. ಆತ ಕೊಟ್ಟ ದಾನಕ್ಕೆ—ಸ್ತೋತ್ರ ಶಕ್ಕದ್ದಾಗೆದೆ;—ನಮ್ಮ ಹೃದಯಗಳ—ಆತನಿಗೆ ಕೊಡುವಾ!

೪. ಧರ್ಮ, ನೋಂಪು, ಜಾತ್ರೆಯು —ಯೇನೂ ಫಲ ಕೊಡವು; —ಯೇಸು ಕ್ರಿಸ್ತನಿಂದಲೇ —ಮೋಕ್ಷ ಪ್ರಾಪ್ತಿಯಾಗದೆ.

೫. ಮೂರ್ತಿವಿಗ್ರಹಂಗಳು —ನಮಗೇನೂ ಕೊಡವು. —ಜೀವವುಳ್ಳ ದೇವರೇ, —ನಿನ್ನ ಸೇವೆ ಸುಖವೇ!

೬. ದೇವಪುತ್ರ ಯೇಸುವು —ನಮ್ಮ ಒಂದೇ ಗತಿಯು; —ನಿನ್ನ ಸತ್ಯ ಸೇವೆಗೆ —ತ್ರಾಣ ಪಾಲಿಸೆಮಗೆ!

೬೨.

Mel. Tod mein Hüttlein kannst du brechen.

೧. ದೇಹವೆಂಬ ಪಾತ್ರೆಯನ್ನು —ಮೃತ್ಯು ಮುರಿದ್ದಾಕಲು, —ಕೊಲ್ಲಲಾರದಾತ್ಮವನ್ನು; —ನನ್ನ ಪಾಲ ಸಂದಿತು. —ಹ್ಯಾಗೆ? ಮಧ್ಯವರ್ತಿಯು —ನನಗಾಗಿ ಸತ್ತನು.

೨. ಆತ ತನ್ನ ರಕ್ತ ಚೆಲ್ಲಿ —ನೀತಿಗಾಗಿ ಯೇಳಲು, ರಕ್ತಬಂಧುವುಗಳಲ್ಲಿ —ಸ್ಥಳವೆನಗಾಯಿತು; —ರಕ್ತಬಲಿಯಿಂದಲೇ —ನಾನು ಜೀವ ಹೊಂದಿದೆ.

೩. ನನ್ನ ಮರ್ತ್ಯ ದೇಹವನ್ನು —ರೋಗ ತಿಂದು ಬಿಟ್ಟರೆ, —ಹ್ಯಾಗೂ ಒಂದೇ ವಾಕ್ಯವನ್ನು —ಪಟ್ಟಿ ಹಿ

ಡು ಕಾಳ್ಳುವೆ:—"ಜೀವವುಳ್ಳ ಕರ್ತನು—ನನ್ನ ಜೀವ ಮೂಲವು!"

೪. ಸಾಯುವಾಗ ಜೀವಪಾನ—ಕಾಡು, ಪ್ರಿಯ ಕರ್ತನೇ!—ನಿನ್ನ ಘಾಯಗಳ ಧ್ಯಾನ—ಮಾಡಿ ನಿದ್ರೆಗೈಯುವೆ.—ಅಲ್ಲಿ ನಿನ್ನ ನೀತಿಯು—ನನ್ನ ಬಿಳೀ ವಸ್ತ್ರವು.

೬೩.

Mel. Freu dich sehr, o meine Seele.

೧. ಶೆರೆಯಿಂದ ಚೀಯೋನನ್ನು—ಕರ್ತ ಬಿಡಿಸುತ್ತಲು—ಭಯಂಕರ ಸ್ವಪ್ನವನ್ನು—ಕಂಡ ಹಾಗಿರುವೆವು. ಆಗ ಪ್ರಾಪ್ತಂಶಾ್ಯಷದಿ—ಕರ್ತನನ್ನು ಸ್ತುತಿಸಿ—ರಾಜ್ಯದಿ ಪ್ರವೇಶಿಸ್ಯೇವು;—ಆಶಗೆರಗಿ ಕಾಂಡ್ಯೇವು.

೨. ಯೆತ್ತಿ ನಿನ್ನ ಹಸ್ತವನ್ನು—ನಮ್ಮನ್ನಾಶೀರ್ವದಿಸು!—ಕಷ್ಟ ಪಡುವವರನ್ನು—ಮೆಚ್ಚಿ, ಕೃಪೆಯಾಗಿರು! ತ್ರಾಣವುಳ್ಳ ಅರಸಾ,—ನಮ್ಮ ಪ್ರಿಯ ರಕ್ಷಕಾ!—ಜೈಸಿ ನಮ್ಮ ಶತ್ರುವನ್ನು,—ಕಾಯಿ ನಿನ್ನ ಪ್ರಜೆಯನ್ನು!

೩. ಆಗಲು ಕಣ್ಣೀರು ಬಿಟ್ಟು,—ಬೀಜ ಬಿತ್ತಿದವರು—ಮಹಿಮೆಯ ಕಿರೀಟವಿಟ್ಟು,—ಪೂರ್ವ ಶ್ರಮೆ ಮರೆತು,—ವೈರನ್ನು ಕಟಾಯಿಸಿ,—ಪರಲೋಕರಾಜ್ಯದಿ—ವಂದಿಸಿ ತಮ್ಮರಸನ್ನ,—ಹಾಡಿಯಾರು ಹಾ್ಯಸಿಯನ್ನ

೬೪.

Mel. Womit soll ich dich wohl loben.

೧. ಕರ್ತಾ, ಯಾವ ರೀತಿಯಿಂದ—ನಿನ್ನ ಸ್ತುತಿಸುವೆವು?—ತ್ರಾಣವನ್ನು ಮೇಲಿನಿಂದ,—ನನ್ನ ಕರ್ತನೇ, ಕಾಡು!—ನಿನ್ನ ಪ್ರೀತಿಯ ಐಶ್ವರ್ಯ—ನನ್ನ ಬುದ್ಧಿಗೆ ಆಶ್ಚರ್ಯ.—ಲಕ್ಷ ಸ್ತೋತ್ರ ನಿನಗೆ—ಆಗಲೆನ್ನ ದೇವರೇ.

೨. ನಿನ್ನ ಸತ್ಯ, ಪ್ರೀತಿ, ತ್ರಾಣ,—ನಂಬಿಕೆ, ಪ್ರಸಾದದಿ—ನನ್ನ ಮನಸ್ಸಿನ ಧ್ಯಾನ—ಹಗಲಿರುಳಿರಲಿ.
ನನ್ನ ಆತ್ಮ, ನನ್ನ ಅಂಗ,—ನಿನ್ನ ದಯೆಯ ಪ್ರಸಂಗ.
ಲಕ್ಷ ಸ್ತೋತ್ರ ನಿನಗೆ—ಆಗಲೆನ್ನ ದೇವರೇ.

೩. ಜಾರಿ ನಿನ್ನ ಮಾರ್ಗದಿಂದ—ಪಾಪ ಹೆಚ್ಚಿಸಿದೆನು;—ನಿನ್ನ ದೀರ್ಘಶಾಂತಿಯಿಂದ—ಲಜ್ಜೆ ನನಗಾಯಿತು.—ಕನಿಕರವುಳ್ಳ ತಂದೆ,—ನಿನ್ನ ಪಾದಕ್ಕೀಗ ಬಂದೆ.
ಲಕ್ಷ ಸ್ತೋತ್ರ ನಿನಗೆ—ಆಗಲೆನ್ನ ದೇವರೇ.

೪. ಪೂರ್ಣ ಅನುಗ್ರಹದಿಂದ—ನೀ ನನ್ನನ್ನು ನಡಿಸಿ,—ನಾನು ಹುಟ್ಟಿದಂದಿನಿಂದ—ದಯೆ ಮಾತ್ರ ಮಾಡಿದಿ.—ನಿನ್ನ ಪ್ರೀತಿ ಮೇರೆ ಯೇನು!—ಹಾಂಗು ಹ್ನಾಗೆ ಸಲ್ಲಿಸೇನು?—ಲಕ್ಷ ಸ್ತೋತ್ರ ನಿನಗೆ—ಆಗಲೆನ್ನ ದೇವರೇ.

೫. ನನ್ನ ಆತ್ಮಕ್ಕೆ ಪರೀಕ್ಷೆ—ಮಾಡ ನೀನು ಯೋ

ಚಿಸಿ,—ಈಗ ಪ್ರೀತಿ, ಆಗ ಶಿಕ್ಷೆ—ನನಗಾಗ ಮಾಡಿ
ದಿ;—ಆದೆನೀಗ ನಿನ್ನದಾಸ;—ನಿನ್ನ ಚಿತ್ತ ನಂನಭ್ಯಾಸ.
ಲಕ್ಷ ಸ್ತೋತ್ರ ನಿನಗೆ—ಆಗಲೆನ್ನ ದೇವರೇ.

೬. ಪ್ರಿಯ ತಂದೆ, ಪೂರ್ಣ ಪ್ರೀತಿ—ನೀನು ಮಾ
ಡಿದೆನಗೆ;—ನಿನ್ನ ದಯವುಳ್ಳ ರೀತಿ,—ಯೇಸು, ರುಚಿ
ನೋಡಿದೆ; ಆತ್ಮಾ, ನಿನ್ನ ಶುದ್ಧ ಕಾಂತಿ—ನನ್ನ ಆತ್ಮದ ವಿ
ಶ್ರಾಂತಿ;—ಲಕ್ಷ ಸ್ತೋತ್ರ ನಿನಗೆ,—ಓ ತ್ರಿಯೇಕ ದೇವರೇ!

೬೫.

Mel. Wie schön leucht't uns der Morgenstern.

೧. ಇನ್ನುಂಟೋ ತೃಪ್ತಿ ಆತ್ಮಕ್ಕೆ—ನೀನಲ್ಲದೆ, ಓ
ತಂದೆಯೇ,—ನಂನುತ್ತಮ ಸಂತೋಷ!—ನಿನ್ನನ್ನು ಬಿಟ್ಟ
ಸುಖವು,—ನೀ ಕಾಡದಂಥ ಬೆಳಕು,—ಇದ್ದಲ್ಲಿ ಯೆಂ
ಥಾ ಪೋಷ?—ಸತ್ಯ—ನಿತ್ಯ—ಸಮಾಧಾನ, ವಾಸಸ್ಥಾನ,
ಪಾಪಗಾರ—ನಿನ್ನ ಹಾರ್ಭು ಹೊಂದಲಾರ.

೨. ಇನ್ನುಂಟೋ ತೃಪ್ತಿ ಆತ್ಮಕ್ಕೆ—ನೀನಲ್ಲದೆ, ಓ
ಯೇಸುವೇ,—ಪ್ರಪಂಚಕಾಡಿನಲ್ಲಿ?—ನೀ ನನ್ನ ಬಿಟ್ಟು
ಬಿಟ್ಟರೆ—ನಾ ದಿಕ್ಕು ಕಾಣದಿರುವೆ—ಉಭಯ ಲೋಕದ
ಲ್ಲಿ.—ಯೇಸು—ಲೇಸು—ಕೃಪೆಯಾಗಿ—ಕಾಡಲಾಗಿ,—
ಇಲ್ಲಿ ಯೇನು,—ಅಲ್ಲಿ ಯೇನು ಆಶಿಸೇನು?

೩. ಇನ್ನುಂಟೋ ತೃಪ್ತಿ ಆತ್ಮಕ್ಕೆ —ನೀನಲ್ಲದೆ, ಓ ಆತ್ಮವೇ, —ಓ ಶಾಂತಕರ ಮಿತ್ರ! —ನೀ ಜ್ಞಾನತೇಜದಿಂದಲೇ —ಪ್ರಕಾಶ ಕಾಡದಿದ್ದರೆ—ನಾನಾಗೆನು ಪವಿತ್ರ. ಪರ—ತರ—ಮಿತ್ರ, ನನ್ನ—ಆತ್ಮವನ್ನ—ಕೃಪೆಯಾಗ—ಕಾಯಿ ನಿತ್ಯ ಜೀವಕ್ಕಾಗಿ.

೬೬.

Mel. Brüder streuet guten Samen.

೧. ಪಾಪ, ಶಾಪ, ಪೀಡೆಯನ್ನು—ಹೊತ್ತು ಪ್ರಿಯ ಯೇಸುವು—ಕ್ರೂಜೆಯಲ್ಲಿ ಜೀವವನ್ನು—ನಮಗಾಗಿ ಬಿಟ್ಟನು.—ಸಲ್ಲಿಸಿದನೆಮ್ಮ ಸಾಲವನ್ನು—ತಂದನುತ್ತಮ ನಿರೀಕ್ಷೆಯನ್ನು.

೨. ನಿನ್ನ ಶ್ರಮೆಗಳ ಫಲ—ನಮ್ಮ ನಿತ್ಯ ಶಾಂತಿಯೇ;—ಸೌಖ್ಯವಾದ ವಾಸಸ್ಥಳ—ನೀನು ಕಟ್ಟಿ ನಮಗೆ. ಪ್ರಿಯ ಕರ್ತಾ, ನಿನ್ನ ಪಾದಸೇವೆ—ಪೂರ್ಣ ಮನದಿಂದ ಮಾಡುತ್ತೇವೆ.

೬೭.

Mel. Gott ist gegenwärtig.

೧. ದೇವರು ಸಮೀಪ;—ಆತನೆದುರಾಗಿ—ಪ್ರಾರ್ಥಿಸುವಾ ಭೀತಿಯಾಗಿ.—ದೇವರಿಲ್ಲಿ ಬಂದ;—ಆತಗ

ಡ್ಡ ಬಿದ್ದು — ಧ್ಯಾನಿಸುವಾ ಸುಮ್ಮನಿದ್ದು; — ಕರ್ತರೇ, — ಆತಗೆ — ಹೃದಯವ ತೆರ್ರಿ; — ಸೇವೆ ಮಾಡ ಬರ್ರಿ!

೨. ಯೆಲ್ಲಾ ದೂತಸೈನ್ಯ — ಪರಲೋಕದಲ್ಲಿ — ನಿತ್ಯ ಹಗಲಿರುಳಲ್ಲಿ — "ಶುದ್ಧ, ಪರಿಶುದ್ಧ — ಕರ್ತ" ಯೆಂದು ಹಾಡಿ, — ಬಾಗುತ್ತಾರೆ ಸ್ತೋತ್ರ ಮಾಡಿ. — ನಮ್ಮನ್ನು — ಲಾಲಿಸು! — ನೋಡಿ ನೀಚರನ್ನು, — ಸಲಹು ನಮ್ಮನ್ನು.

೩. ನಮಗಿನ್ನು ಬೇಡ — ಈ ಪ್ರಪಂಚಲಯ; — ಸಾಕು, ಕರ್ತ, ನಿನ್ನ ದಯ. — ನಿನ್ನ ವಶವಾಗಿ — ಪರಿಪೂರ್ಣ ಸೇವೆ — ಮಾಡ ಸಿದ್ಧರಾಗಿದ್ದೇವೆ. — ದೇವರೇ, ನಿನಗೆ — ಆಗಲಿ ಸನ್ಮಾನ, — ಪ್ರಿಯ ಯಜಮಾನ!

೪. ನನ್ನ ಹೃದಯದಲ್ಲಿ — ದಯದಿಂದ ಬಂದು, — ಪರಿಶುದ್ಧ ಜಲ ತಂದು, — ಪಾಪಮಲವನ್ನು — ಶುಚಿ ಮಾಡಲಾಪಿ, — ಪರಿಶುದ್ಧ ಸರ್ವವ್ಯಾಪಿ! — ನಿನ್ನನ್ನು — ಅರಿತು — ಯೆಂದೂ ನೆನೆದೇನು; — ಯೆಂದೂ ಸೇವಿಸೇನು.

೬೮.

Mel. Auferstehn, ja auferstehn wirst du.

೧. ನನ್ನ ದೇಹವೇ, ನೀ ಯೇಳುವಿ, — ವಿಶ್ರಾಂತಿ ತೀರಿಸಿ; — ನಿರ್ಲಯವಾಗಿ — ನೀ ಕರ್ತಗೆಮರಾಗಿ — ನಿಂತಿರುವಿ.

೨. ಭೂಮಿಯಲ್ಲಿ ಬಿದ್ದ ಬೀಜವು, —ವಸಂತ ಬರಲು, —ಉಜ್ಜೀವಿಸೀತು; —ಈ ದೇಹಕ್ಕೂ ಬಂದೀತು —ವಸಂತವು.

೩. ಹರ್ಷಸ್ತೋತ್ರಪೂರ್ಣ ದಿನವೇ, —ನನ್ನಾತ್ಮದಾಶೆಯೇ! —ತುತೂರಿರಾಗ —ಸಮಾಧಿಗಳಿದಾಗ, —ನಾನೇಳುವೆ.

೪. ಸ್ವಪ್ನ ಕಂಡ ಹಾಗಿರುವೆನು —ಆ ದಿವಸದೊಳು; —ಈ ಪಾಪಭಾರ —ಈ ಕಾಡಿನ ಸಂಚಾರ —ತೀರುವದು.

೫. ನನ್ನ ಕರ್ತನನ್ನು ನೋಡುವೆ —ಆ ಲೋಕದೊಳಗೆ —ಪ್ರವೇಶ ಮಾಡಿ; —ಕಾರುಣ್ಯವಂ ಕೊಂಡಾಡಿ —ನಾ ಹಾಡುವೆ.

೬೯.

Mel. Die wir uns allhie beisammen finden.

೧. ಒಂದೇ ಮುಖ್ಯವಾದ ಆತ್ಮಪೋಷ —ಮಾತ್ರ ನನಗಾದರೆ, —ಇಹಲೋಕಾರಣ್ಯವಂ ಸಂತೋಷ —ಪಟ್ಟು ದಾಟಿ ಹೋಗುವೆ. —ದುಃಖಾಕ್ರಾಂತನಾಗಿ ತೋಟದಲ್ಲಿ ಧೀರತ್ವಮೆ ತಾಳ್ದ ಯೇಸುವಲ್ಲಿ —ಆತ್ಮದೃಷ್ಟಿ ಇಟ್ಟರೆ, —ನಾನು ಮುಕ್ತನಾಗುವೆ.

೨. ನೀನು ತೋರಿಸಿದ ತಾಳ್ಮೆಯನ್ನು,—ನನ್ನ ಪ್ರಿಯ ಯೇಸುವೆ,—ನಿನ್ನ ರಕ್ತಮಯ ರೂಪವನ್ನು—ನಾನು ಯೆಂದೂ ಮರೆಯೆ.—ನೀನು ಕ್ರಯಕ್ಕೆ ನನ್ನಾತ್ಮಕೊಂಡು,—ಕ್ರೂಜೆಯಲ್ಲಿ ತೀವ್ರ ದಾಹಗೊಂಡು,—ಜೀವವಂ ವಿಸರ್ಜಿಸಿ,—ತೀರಿತೆಂದು ಕೂಗಿದಿ.

೩. ನನಗಾಗಿ ನೀನು ಪಟ್ಟ ಕಷ್ಟ—ಯೆಂದೂ ನೆನಸುವೆನು.—ಘೋರ ಕತ್ತಲಲ್ಲಿ ನಾನು ಭ್ರಷ್ಟ....ನಾಗಿ ಕೂತು ಕೊಳ್ಳಲು,—ನೀ ಕಾರುಣ್ಯ ಪಟ್ಟು, ಪ್ರೀತಿಯಾಗಿ ನಿನ್ನ ರಕ್ತ ಚೆಲ್ಲಿ ನನಗಾಗಿ,—ಕೊಟ್ಟಮೂಲ್ಯ ಬೆಲೆಯ, ಕೊಂಡು ಕೊಂಡಿ ದಾಸನ.

೪. ಇನ್ನೂ ನಿನ್ನ ದಾಸನಾಗಿದ್ದೇನು,—ನನ್ನ ಪ್ರಿಯ ಯೇಸುವೆ;—ನಿನ್ನ ನಾಮವನ್ನ ಸ್ಮರಿಸ್ಯೇನು,—ಅತಿಶ್ರೇಷ್ಟ ಮಿತ್ರನೆ!—ನಿನಗಾಗಿ ಕಾರ್ಯ ನಡಿಸ್ಯೇನು; ನಿನಗಾಗಿ ಬದುಕಿ ಸತ್ತೇನು;—ಜೀವಿಸುವ ವರೆಗೆ—ಈ ಪ್ರಮಾಣ ಸ್ಥಿರವೇ.

೭೦.

Mel. Seelenbräutigam.

೧. ನಮ್ಮ ಪ್ರಾಯವು—ಬಹುಸ್ವಲ್ಪವು;—ಬೇಗ ಬಹುದಂಶ್ವಾಸ.—ಈ ಪ್ರಪಂಚದ ವಿಲಾಸ—ಬಹುಕಾಲವು—ನಿಲ್ಲಲಾರದು.

೨. ವ್ಯರ್ಥ ಶ್ರಮೆಯು — ಇನ್ನು ಬೇಡವು. — ಚುರುಕಾದ ಬುದ್ಧಿಯನ್ನು, — ಹೃದಯದ ಶುದ್ಧಿಯನ್ನು, — ಕೊಡು ನಮಗೆ, — ಪ್ರಿಯ ಕರ್ತನೇ!

೩. ಇಂದು ನಮ್ಮದು; — ನಾಳೆ ಕಷ್ಟವು — ಹೊರ್ಗೆ ಮರ್ಮವಿರಲಾಗಿ, — ನಿತ್ಯ ಆತ್ಮಸುಖಕ್ಕಾಗಿ — ನೋಡದವನೇ — ಮೂಢನಲ್ಲವೆ?

೪. ನನ್ನ ಆತ್ಮಕ್ಕೆ — ಒಂದೇ ಯೋಚನೆ: — ಈ ಪ್ರಪಂಚವೆಲ್ಲಾ ಲಯ; — ಒಂದೇ ಗತಿ ನಿನ್ನ ದಯ. ದಯವೆನ್ನಗೆ — ಕೊಡು, ಯೇಸುವೇ!

೭೧.

Mel. Wachet auf, ruft uns die Stimme.

೧. ಕರ್ತನು ಮನುಷ್ಯನಾಗಿ — ಈ ಭೂಮಿಯಲ್ಲಿ ಹುಟ್ಟಲಾಗಿ, — ಹಾಡಿದರೆಲ್ಲಾ ದೂತರು. — ಸತ್ತ ಮೇಲೆ ಜಯ ಗೊಂಡು, — ಸಿಂಹಾಸನವ ಯೇರಿ ಕೊಂಡು, ಸರ್ವಾಧಿಕಾರಿ ಕೂತನು. — ಓ ಜೀವದರಸಾ, — ಅಲ್ಲಿಂದ ಬೇಗ ಬಾ! — ಹೌದು, ಹೌದು, — ತ್ವರೆ ಪಡು! — ನಿಂನ್ಹತ್ತರ — ನಮ್ಮನ್ನು ಕರೆಕೊಳ್ಳ ಬಾ!

೨. ವಿಶ್ವಾಸವೀಗ ಮುದ್ರೆಗೊಂಡು, — ವಾಗ್ದಪೂರ್ಣವ ನೋಡಿ ಕೊಂಡು, — ನಿನ್ನನ್ನು ದೃಷ್ಟಿಸುತ್ತದೆ. — ಇ

ನ್ನು ಮೇಲೆ ಯೆದುರಾಗಿ—ನಿನ್ನನ್ನು ದೃಷ್ಟಿಸ ಬೇಕಾಗಿ ಹೃದಯ ಹಾರೈಸುತ್ತದೆ.—ಪವಿತ್ರ ಆತ್ಮನೂ—ಮೇಲಾದ ಸಭೆಯೂ—"ಕರ್ತಾ ಯೇಸು—ಬಾ" ಯೆನಲು, ನಾವಿಲ್ಲಿಯೂ—"ಬಾ ಯೇಸು" ಯೆಂದು ಹಾಡೇವು.

೭೨.

Mel. Wie schön leucht't uns der Morgenstern.

೧. ಈ ದಿನದಲ್ಲಿ ಯೇಸುವು—ಸಮಾಧಿಯಿಂದ ಯೆದ್ದನು.—ಸಜೀವಿ ಅರಸಾಗಿ.—ವಿಜಯರಾಗ ಹಾಡಿರಿ!—ಅನಂತ ಸ್ತೋತ್ರ ಮಾಡಿರಿ,—ವಿಧೇಯ ದಾಸರಾಗಿ!—ತನ—ಘನ....ವನ್ನು ಬಿಟ್ಟು,—ಪ್ರೀತಿ ಇಟ್ಟು—ನರರಲ್ಲಿ,—ಕ್ರಿಸ್ತ ಸತ್ತ ಕ್ರೂಜೆಯಲ್ಲಿ.

೨. ಓ ನಮ್ಮ ಪ್ರಿಯ ಕರ್ತನೆ,—ನೀನೆಮ್ಮ ನಿಸ್ತಕ್ಯಾರಿಕೆ.—ನಿನ್ನಲ್ಲಿ ನಂಬಿದ್ದೇವೆ.—ನಿನ್ನಾತರ್ಕೆ ಬೆಳಕಿಲ್ಲವು;—ನಿನ್ನಾತರ್ಕೆ ಸುಖವಿಲ್ಲವು;—ನಿನ್ನಾತರ್ಕೆ ಸಾಯುತ್ತೇವೆ.—ಆಳು,—ಬಾಳು,—ಜೈಸಿ ನಿನ್ನ—ಶತ್ರುವಿನ ರಾಜ್ಯವನ್ನು,—ಕಾಯಿ ನಿನ್ನ ಪ್ರಜೆಯನ್ನು!

೩. ಈ ಮರ್ತ್ಯ ದೇಹದಿಂದಲೂ—ಸಮಾಧಿಯೊಳಗಿಂದಲೂ—ವಿಧೇಯ ಭಕ್ತರನ್ನು,—ಓ ಯೇಸು ಕ್ರಿಸ್ತ, ತಪ್ಪಿಸು!—ಅನಂತ ಮಹಿಮೆಯೊಳು—ಕಾಡ್ಡು

ಪ್ರವೇಶವನ್ನು — ಯೇರಿ, — ಶೇರಿ, — ನೀನಿದ್ದಲ್ಲಿ — ಕಾಂತಿಯಲ್ಲಿ—ನಿನ್ನ ಮುಖ—ದೃಷ್ಟಿಸೋದು ಯೆಂಥಾ ಸುಖ!

೭೩.

Mel. Gott ist getreu!

೧. ಈಗೀಗಲೂ — ಸಮಸ್ತ ಚಿಂತೆಯ — ನಾ ಬಿಟ್ಟು ಬಿಟ್ಟೆನು. — ಸರ್ವೇಶನು — ಹೃದಯದಂಧವ — ಪ್ರಕಾಶಿಸಿದನು. — ವಿಶ್ವಾಸದ ಸಂತೃಪ್ತಿಯನ್ನೂ — ಹೃದಯದ ಸಂತೋಷವನ್ನೂ — ನಾ ಹೊಂದಿದೆ.

೨. ಸರ್ವೇಶನು — ನನ್ನನ್ನು ಬಿಡದೆ, — ಈ ಜೀವವಿದ್ದರೂ, — ಅದ್ದೋದರೂ, — ಆಶ್ಚರ್ಯವಾಗಿಯೇ — ಸಂರಕ್ಷಿಸುವನು. — ಕಡೇಲಿ ನಿತ್ಯ ನೀತಿಯನ್ನೂ — ಅನಂತವಾದ ಜೀವವನ್ನೂ — ನಾ ಪಡೆವೆ.

೭೪.

Mel. Das ist unbeschreiblich.

೧. ವೊಂದು ಊರಿನಲ್ಲಿ — ವೊಂದು ಬೆಳಕು — ಅಂಧಕಾರದಲ್ಲಿ — ತೋರಲಾಯಿತು. — ಬೆತ್ಲೆಹೇಮಿನಲ್ಲಿ — ನೀತಿಸೂರ್ಯನು — ಪಾಪಕತ್ತಲಲ್ಲಿ — ಕಾಂತಿ ಹೊಯ್ದನು.

೨. "ದೇವರಿಗೆ ಮಾನ—ಊರ್ಧ್ವ ಲೋಕದಿ;—ನಿತ್ಯ ಸಮಾಧಾನ—ಭೂಮಿಗಿರಲಿ",—ಯೆಂಬ ಗೀತವನ್ನು ದೇವದೂತರು—ಹಾಡಿ, ಲೋಕವನ್ನು—ಹಾರಸಿದರು.

೩. ಈಗ ನರರಲ್ಲಿ—ದಿವ್ಯ ಕೃಪೆಯು—ಯೆಲ್ಲಾ ಭೂಮಿಯಲ್ಲಿ—ದೊಡ್ಡದಾಯಿತು.—ಈಗ ಶುದ್ಧ ನೀತಿ,—ಬಾಳ್ವೆ ಸುಖವು,—ಸತ್ಯವಾದ ಪ್ರೀತಿ,—ನೆಲೆಗೊಂಡವು.

೪. ಬೆಥ್ಲೆಹೇಮಿನಲ್ಲಿ—ನಮ್ಮ ಯೇಸುವು—ಮರ್ತ್ಯ ರೂಪದಲ್ಲಿ—ಹುಟ್ಟುವಾಗಲು,—ಜೀವದ ಪ್ರಕಾಶ—ಮೂಡುತ್ತಿರಲು,—ಮರಣದ ಪಾಶ—ಬಿಚ್ಚಿ ಹೋಯಿತು.

೭೫.

Mel. Freu dich sehr, o meine Seele.

೧. ಕತ್ತಲೆ, ನೋಡು! ಭೂಮಿಯಲ್ಲಿ—ಯೆಷ್ಟು ಅಂಧಕಾರವು!—ಬೆಳಕು ಕಾರ್ಗತ್ತಲಲ್ಲಿ—ಸ್ವಲ್ಪ ಮಾತ್ರ ಕಾಂಬುದು.—ಯೆಷ್ಟು ಜನ ಭ್ರಮಿಸಿ,—ಸತ್ತ ಬಾಂಬೆಗೆರಗಿ,—ದಿಕ್ಕು ತಪ್ಪಿ ಹೋಗುತ್ತಾರೆ,—ವ್ಯರ್ಥ ಶ್ರಮೆ ಪಡುತ್ತಾರೆ.

೨. ಯೆಂದು ಹೋದೀತಂಧಕಾರ?—ಯೆಂದು ಸೂರ್ಯ ಬಂದಾನು?—ಯೆಂದು ಶುಭಸಮಾಚಾರ—ಬೆಳಕ

ನ್ನು ಹ್ಯಾದೀತು?—ಸತ್ಯ ಜ್ಞಾನ ಮರೆತು,—ಮೂರ್ಖ
ರಾದ ಜನರು—ನಿನ್ನನ್ನೆಂದು ವಂದಿಸ್ಯಾರು?—ಕ್ಷೇಮ
ವೆಂದು ಪಡೆದಾರು?

೩. ಯೇಳು, ಸರ್ವಪಾಪಹಾರ!—ಯೇಳು, ಕೃಪೆ
ಯರಸನೇ!—ರಾತ್ರಿಯನ್ನು ಪರಿಹಾರ.... ಮಾಡು, ನೀತಿ
ಸೂರ್ಯನೇ!—ನಿನ್ನ ವಾಕ್ಯ ಬೇಗವೇ—ಕಳುಹಿಸು, ಕ
ರ್ತನೇ!—ಕಾಡ ಹಾಸುರಾಗ ಮಾಡು;—ಪೂರ್ಣ ಜೀವಿ
ಯಾಗ ಮಾಡು!

೪. ಕರ್ತಾ, ಕಾಡು ಸಿದ್ಧಿಯನ್ನು—ನಿನ್ನಸೇವಕರಿಗೆ!
ಕಾಡು ವಾಳ್ಕೆ ಫಲವನ್ನು—ವಾಕ್ಯದ ಪ್ರಸಂಗಕ್ಕೆ!—
ಪರಿಪೂರ್ಣ ಜಯಕ್ಕೆ—ಮಾರ್ಗ ಮಾಡು, ಕರ್ತನೇ!—
ನಿನ್ನ ತ್ರಾಣ ಕುಂದ್ಯಾದಿಲ್ಲ;—ನಿನ್ನರಾಜ್ಯಕ್ಕಂತ್ಯವಿಲ್ಲ.—

೭೬.

Mel. O Durchbrecher aller Bande.

೧. ಯೆಂದಿಗೂ ಸಮೀಪವಾದ—ಸರ್ವಬಂಧ
ಹಾರನೇ,—ನೀನಿದ್ದಲ್ಲಿ ನಿತ್ಯವಾದ—ಸುಖ ವಸ್ತಿಯಾಗೆ
ದೆ.—ತೀರಿಸಿನ್ನು ನ್ಯಾಯವನ್ನು—ನಮ್ಮ ಹಾಳ್ಕೆ ಬು
ದ್ಧಿಗೆ;—ಬಿಡಿಸೆಮ್ಮ ಶೆರೆಯನ್ನು,—ಓ ಕಟಾಕ್ಷಪೂರ
ನೇ!

೨. ತಂದೆ ಕೊಟ್ಟ ಮಂದೆಯಲ್ಲಿ—ಒಂದೂ ಕುರಿ ಸಾಯದು.—ಶತ್ರುರೆಲ್ಲಾ ರಾಜ್ಯದಲ್ಲಿ—ಸೇರಿ ಸ್ಪರ್ಧಿಸುವರು.—ಕಾರ್ಯ ತೀರಿಸ ಬೇಕಾಗಿ,—ಶುದ್ಧ ಪ್ರಾಯಶ್ಚಿತ್ತವ—ನಮ್ಮ ಪಾಪಗಳಿಗಾಗಿ—ಯೇಸು ಸತ್ತು ಮಾಡಿದ.

೩. ನಮ್ಮ ಆತ್ಮಗಳ ಸಿದ್ಧಿ—ನಿಂನ ಸ್ಥಿರ ಚಿತ್ತವೇ.—ನಿಂನಲ್ಲೆಮ್ಮ ಸುಖನಿಧಿ—ನೆಲೆಯಾಗಿರುತ್ತದೆ.—ಕ್ರೂಜೆಯ ನಿಮಿತ್ತವಾಗಿ—ಲೋಕವೆಲ್ಲಾ ಬೈದರೂ,—ನೀನೇ ಮಿತ್ರನಿರಲಾಗಿ—ನಮಗೇನು ಚಿಂತೆಯು?

೪. ನೋಡು, ಬಂಧದಲ್ಲಿದ್ದೇವೆ—ನಾವು ನೀಚ ದಾಸರು;—ಮುಲ್ಗಿ, ಕೂಗಿ, ಬೇಡುತ್ತೇವೆ;—ನಮ್ಮ ನಾಗ ತಪ್ಪಿಸು!—ಈ ಪ್ರಪಂಚಸೇವೆಯನ್ನು—ಮಾಡೋದೆಷ್ಟು ಕಷ್ಟವು!—ನಮ್ಮ ಆತ್ಮದಾಶೆಯನ್ನು,—ಕರ್ತಾ, ಅನುಕೂಲಿಸು!

೫. ನಮ್ಮ ದುಷ್ಟ ವೈರಿಯನ್ನು—ನೀನು ಜೈಸು, ಕರ್ತನೇ!—ಕಾಡು ಮೋಸ ಬಲವನ್ನು—ಕುಂದಿ ಹೋದ ನಮಗೆ!—ಹೋಗಲಿ ಮನುಷ್ಯಸ್ನೇಹ!—ಹೋಗು, ನರಭಯವೇ!—ಹೋಗಲಿ ಮನೋಸಂದೇಹ! ಹೋಗು, ಮಾಂಸಪ್ರೀತಿಯೇ!

೬. ಕರ್ತಾ, ಮುರಿ, ಜಜ್ಜು, ಕುಟ್ಟು,—ಕತ್ತಲೆಯ ತ

ಕ್ತಿಯ; — ಪ್ರೀತಿಯಗ್ನಿಯಿಂದ ಸುಟ್ಟು — ಬಿಡು ದುಃಸ್ವಭಾವವ! — ಸರ್ಪಬೀಜವಂ ಬಿಸಾಡು — ಅಂಧಕಾರದೊಳಗೆ; — ಶಂದ್ಯೋಮನೆ ಸಿದ್ಧ ಮಾಡು — ಭಕ್ತರ ಸಮೂಪಾಕ್ಕೆ!

೭. ನಮ್ಮ ಮಾಂಸಕ್ಕುಪಚಾರ — ಇಪಾದಲ್ಲಿ ಬ್ಯೇಡವು; — ನಿನ್ನ ಚಿತ್ತದ ಪ್ರಕಾರ — ಮಾತ್ರ, ಕರ್ತಾ, ನಡಿಸು! ನಿನ್ನ ಸತ್ಯ ಬಾಯ್ಪು ಮಾತು — ಪೂರ್ತಿಯಾಗ್ಯೋವರೆಗೆ, ನಮ್ಮ ಆತ್ಮ ನಿನ್ನನ್ನಾತು — ಕಾಂಡು ದೃಢವಾಗಿದೆ.

೮. ರಾಜಾ, ನಿನ್ನ ರಾಜ್ಯವಾಳು! — ನಿನ್ನ ಪ್ರಜೆ ಸಲಪು! — ಸರ್ವ ಪ್ರಭುವಾಗಿ ಬಾಳು — ನಿತ್ಯ ಮಹಿಮೆಯೊಳು! — ಭಾರ ಪಾತ್ತು ವಾಂದು ದಾನ — ಬ್ಯೇಡುತ್ತ್ಯೇವೆ, ಯೇಸುವ್ಯೇ! — ಬಿಡುಗಡೆಯ ಸ್ವಾಪಾನ — ಶ್ಯಾರ ಮಾಡು ನಮಗೆ!

೯. ಕಾಂಡು ಕಾಂಡಿದ್ಧೀ ನಮ್ಮನ್ನು — ನೀನಮೂಲ್ಯ ಕ್ರಯಕ್ಕೆ. — ನಿನ್ನ ಕ್ರೂಜ್ಯೇ ಫಲವನ್ನು — ಕಾಡು ನಿನ್ನ ಸಭೆಗೆ! — ನಿನ್ನ ರೂಪಕ್ಕೆ ನಮ್ಮನ್ನು — ಸರಿಯಾಗಿ ರೂಪಿಸು! — ನಿನ್ನ ಆತ್ಮಪೂರ್ತಿಯನ್ನು — ಪಾಂದಿ ತೃಪ್ತಿಯಪೊವು.

೧೦. ಪ್ರೀತಿ! ನಿನ್ನ ರಾಜ್ಯವನ್ನು — ಶ್ಯೇರದ್ದಲ್ಲಾ ಸಾಯಲಿ! — ಪರದೈಸಕ್ಕೆ ನಮ್ಮನ್ನು — ಅಂತ್ಯದಲ್ಲಿ ವೈ

ಯ್ಯುವಿ; —ಹೊಂದಿ ಪೂರ್ಣ ಜಯವನ್ನು,—ನಿನ್ನ ಸಂ
ನಿಧಿಯೊಳು —ಸೇರಿ, ಶುಭಸ್ವಪ್ನವನ್ನು—ಕಂಡ ಹಾಗಿ
ರುವೆವು.

೭೭.

Mel. Kommt, Brüder, lasst uns gehen.

೧. ಸಂಧೋತು ದಿನ, ಬರ್ರಿ; —ಹೋಗೋಣ, ಭ್ರಾ
ತೃರೇ! —ಗಂಡಾಂತ್ರವುಂಟು, ಸರಿ, —ಈ ಕಾಡಿನೊಳಗೆ.
ಪಡೋಣ ಧೈರ್ಯವ. —ನಿಶ್ಶಕ್ತಕ್ಕೆ ಪ್ರಯಾಣ —ಹೊ
ರೈಸಲಿಕ್ಕೆ ತ್ರಾಣ —ಕೊಟ್ಟಾನು ಒಡೆಯ.

೨. ಇಕ್ಕಟ್ಟು ಹಾದಿಯಲ್ಲಿ —ಪ್ರಯಾಸ ಪಟ್ಟರೂ,
ಆ ಕರೆದವನಲ್ಲಿ —ವಿಶ್ವಾಸಿಸುವೆವು. —ಯೆರೂಸಲೇಮಿ
ಗೆ —ನಮ್ಮೇತ್ರದೃಷ್ಟಿ ಇಟ್ಟು, —ಈ ಕಾಡ ಲೋಕ ಬಿ
ಟ್ಟು, —ಹೋಗೋಣ, ಭ್ರಾತೃರೇ!

೩. ಪ್ರಪಂಚದನುಭೋಗ —ಯೇನೇನು ನೋಡದೆ,
ನಿರ್ವಿಘ್ನನಾಗಿ ಹೋಗ —ಕಟ್ಲೆ ದೇಶಾಂತ್ರಿಗೆ. —ಅಭಯ
ವಾಗಲಿ! —ಪ್ರಪಂಚವನ್ನು ಬಿಟ್ಟು, —ಬೈಲಾಶೆ ತೆಗ
ದಿಟ್ಟು, —ಆ ಗುರಿ ನೋಡಿರಿ!

೪. ಬರ್ರಿ! ಸಂತೋಷವಾಗಿ —ಕೈ ಕೊಟ್ಟು ಹೋಗಿ
ರಿ! —ಯಾರೊಬ್ಬ ಬೀಳಲಾಗಿ, —ಸಹಾಯ ಮಾಡಿರಿ! —

ಪ್ರಯಾಣ ಸಣ್ಣದು;—ನಾಳೆ ಸ್ವದೇಶದಲ್ಲಿ—ಬಂದೆ
ಮ್ಮ ಮನೆಯಲ್ಲಿ—ಪ್ರವೇಶಿಸುವೆವು.

೭೮.

Mel. Herr! dir ist Niemand zu vergleichen.

೧. ಓ ಮನವೇ, ಯೆಹೋವನನ್ನು—ಕೊಂಡಾಡಿ,
ದಿವ್ಯ ನಾಮವನ್ನು—ವಿನಯವಾಗಿ ಸ್ತುತಿಸು!—ಪರಾ
ತ್ಪರನ ಕೃಪೆಯನ್ನೂ,—ಸಮಸ್ತ ಉಪಕಾರವನ್ನೂ,—
ಯಾವಾಗ್ಲೂ ಧ್ಯಾನಿಸುತ್ತಿರು!—ಯೆಹೋವ ಪಾಪವ್ಯಾ
ಧಿಯನ್ನು—ಸಂಪೂರ್ಣ ಸ್ವಸ್ಥ ಮಾಡಿದ;—ಯೆಹೋ
ವನಾತ್ಮಶಾಂತಿಯನ್ನು—ಕೊಟ್ಟೋಡಿಸಿದ ಭಯವ.

೨. ಯೆಹೋವ ದಿವ್ಯ ಕೃಪೆಯಿಂದ,—ಆಶ್ಚರ್ಯ
ವಾದ ಸ್ನೇಹದಿಂದ,—ಸಂತೃಪ್ತಿ ಮಾಡ ಬಲ್ಲನು.—
ಆ ದಿನದಿ ಸಮಾಧಿಯಿಂದ—ನಾವೆದ್ದು, ತಂದೇ ಹ
ಸ್ತದಿಂದ—ಕಿರೀಟ ಧರಿಸುವೆವು.—ಯೆಹೋವ ಬಡ
ಜನರನ್ನು—ಯಾವಾಗ್ಲೂ ನಡಿಸುವನು.—ಸದಾತ್ಮ
ಭಕ್ತಸಭೆಯನ್ನು—ಆನಂದ ಪಡಿಸುವದು.

೩. ಯೆಹೋವ ನಮ್ಮವಸ್ಥೆಯನ್ನೂ,—ಮಂಣಾ
ಗಿಪ್ಪಂಥ ಕಷ್ಟವನ್ನೂ,—ಅಪೂರ್ವದಿಂದ ತಿಳಿದು,—
ನಮ್ಮಪರಾಧ ತೆಗದ್ದಾಕಿ—ನಮ್ಮನ್ನು ಮಕ್ಕಳೆಂದು ಹಾ

ಕೆ,—ಸ್ವೀಕಾರ ಮಾಡಿ ಕೊಂಡನು.—ಓ ಪ್ರಿಯ ಆತ್ಮ, ಸ್ತೋತ್ರ ಮಾಡು—ಭೂಪರಲೋಕರಾಜಗೆ!—ಕಟಾಕ್ಷನಿಧಿಯಂ ಕೊಂಡಾಡು,—ವಿಮುಕ್ತವಾದ ಮನವೇ!

೭೯.

Mel. Schwing dich auf zu deinem Gott.

೧. ಇನ್ನು ವೊಂದು ತೀರಿಕೆ—ನಮ್ಮ ಕರ್ತನಿಂದ ಯೆಲ್ಲಾ ದೇವಸಭೆಗೆ—ಬರುವದರಿಂದ,—ದುಃಖವುಳ್ಳ ಆತ್ಮವೇ,—ಚಿಂತೆಯನ್ನು ಬಿಡು;—ಯೇಸು ಕ್ರಿಸ್ತನಲ್ಲಿಯೇ—ಭರವಸವಿಡು!

೨. ನಮ್ಮ ಪ್ರಿಯ ರಕ್ಷಕ—ನಮ್ಮ ಹೊರೆಯನ್ನು ತಾನು ಹೊತ್ತು, ಮಾಡಿದ—ಪರಿಹಾರವನ್ನು.—ಯೇಸು ನಮ್ಮ ವೈರಿಯ,—ತಾನೇ ಸತ್ತು, ಗೆದ್ದ.—ನಮ್ಮ ನೀತಿಗೋಸ್ಕರ—ಮೃತಿಯಿಂದ ಯೆದ್ದ.

೩. ನಮ್ಮ ನಿತ್ಯ ಜೀವವು—ಯೇಸುವಿನ ದಾನ; ಯೇಸುವಿನ ರಕ್ತವು—ನಮ್ಮ ಸಮಾಧಾನ.—ನಮ್ಮ ಪಾಪಸಾಲವು—ಕ್ರಿಸ್ತನಿಂದ ಸಂತು.—ದೇವರಾತ್ಮ ನಮ್ಮೊಳು—ವಾಸ ಮಾಡ ಬಂತು.

೪. ಚಿಂತಾಕ್ರಾಂತರೆಲ್ಲರೇ,—ಚಿಂತೆ ಯೆಲ್ಲಾ ಬಿಟ್ಟು, ನಿಮ್ಮ ಪೂರ್ಣ ಕಾರ್ಯಕೆ—ಯೇಸುವಲ್ಲಿ ಇಟ್ಟು,—ಸಿಕ್ಕು

ವ ಕಿರೀಟವ—ನೀಡಿ, ಧೈರ್ಯ ತನ್ನಿ!—ಆ ಸುವರ್ಣಪಟ್ಟಣ—ಸೇರ ಮಾಡಿ ಬನ್ನಿ!

೮೦.

Mel. Jesu, hilf siegen, du Fürste des Lebens!

೧. ಆತ್ಮದ ಶತ್ರುವು ವಂಚನೆಯಿಂದ—ನಮಗೆ ಶೋಧನೆ ಮಾಡುತ್ತಲು,—ಇರುಳೂ ಹಗಲೂ ಮೋಸಗಳಿಂದ—ನಮ್ಮನ್ನು ಕಷ್ಟವ ಪಡಿಸಲು,—ಯೇಸುವೇ, ತ್ರಾಹಿ, ಪ್ರಕಾಶವ ಚೆಲ್ಲಿ—ಸುತ್ತಲು ಮುಚ್ಚುವ ಕತ್ತಲೆಯಲ್ಲಿ!

೨. ನಮಗೆ ಯೌವನಪಾಪಗಳಿಂದ—ಆತ್ಮದ ಸಂಕಟ ಹುಟ್ಟಿಸಲು,—ನಿನ್ನ ರಕ್ಷಣ್ಯದ ಪೂರ್ಣತೆಯಿಂದ—ಯೇಸುವೇ, ನಮಗೆ ಶಾಂತಿ ಕೊಡು!—ಯೇಸುವೇ, ತ್ರಾಹಿ, ಸಹಾಯಕನಾಗು!—ಮೋಕ್ಷದ ಮಾರ್ಗದಿ ನಾಯಕನಾಗು!

೩. ಬಿಡದೆ ನಮಗೆ ಸುತ್ತುವ ಪಾಪ,—ಕಪಟ, ದ್ವೇಷ, ದುರಾಶೆಗಳು,—ನಿರ್ಣಯ ಮಾಡುವ ದೇವರ ಶಾಪ,—ನಮ್ಮನ್ನು ಉಪದ್ರ ಪಡಿಸಲು,—ಯೇಸುವೇ, ತ್ರಾಹಿ, ದುರಾಶೆಗಳನ್ನು—ನಾಂದಿಸಿ, ಮಾಡು ವಿಮೋಚನೆಯನ್ನು;

೪. ಜೀವದ ರಾಜನೇ, ಮರಣಾದಲ್ಲಿ — ದೇಪಾದ ತ್ರಾಣಾವು ಕುಂದಿದರೆ, — ವೈರಿಯ ಕಡೆಯ ಶೋಧನೆಯ ಲ್ಲಿ — ಜಯದ ಮೋಡವು ಮುತ್ತುತ್ತಲೇ, — ಯೇಸು ವೇ, ಸಲಪು! ಕತ್ತಲ ಪೋಯಿ! — ಕೈಯನ್ನು ಚಾಚಿ ನಮ್ಮಾತ್ಮಗಳ್ ಕಾಯಿ!

———o0o———

೮೧.

Mel. Jesu meine Freude.

೧. ಮೃತ್ಯುಬಂಧದಿಂದ, — ಗೋರಿಯೊಳಗಿಂದ, — ಯೇಸು ಯೆದ್ದನು. — ಅಂಧಕಾರವನ್ನು — ಬಿಟ್ಟು, ಮೃತಿ ಯನ್ನು — ಜಯಿಸಿದನು. — ಈಗಲೇ — ವಿಶ್ವಾಸಿಗೆ — ನಿ ತ್ಯ ಜೀವ ಪ್ರಾಪ್ತಿ ಆಯ್ತು; — ಜಯ ತಂಗವಾಯ್ತು.

೨. ಸೋತು ಪೋಗಿ ಗೆದ್ದಿ, — ಸತ್ತು ಪೋಗಿ ಯೆ ದ್ದಿ, — ಜೀವರಾಜನೇ! — ಪಾಪಕ್ಕೆ ಸಾಯೋಣ, — ಸತ್ತು, ಬದುಕೋಣ — ಜೀವನೀತಿಗೆ. — ಯೇಸುವೇ, — ನೀನಾ ಬ್ಬನೇ — ನಮ್ಮ ಗತಿ; ಪಾದಸೇವೆ — ನಿನಗೀಯುತ್ತೇವೆ.

೩. ಕಳಕಿಗುಂಟು ಪೀಠ; — ನಮಗೆ ಕಿರೀಟ; — ಓ ಸಂತೋಷವೇ! — ಮರಣದ ಶಸ್ತ್ರ — ದೇಪಾವೆಂಬ ವ ಸ್ತ್ರ — ಕಿಮಿಯುತ್ತಲೇ, — ಆತನೇ — ಸ್ವಪ್ರಜೆಗೆ — ಸೂ ರ್ಯವಸ್ತ್ರ ತೊಡಿಸ್ಪಾನು, — ಮಹಿಮೆ ಕಾಟ್ಟಾನು.

೮೨.

Mel. Ach sieh ihn dulden, bluten, sterben.

೧. ನಮ್ಮೊಡೆಯನ ಶ್ರಮೆಯನ್ನು—ವಿನಯವಾಗಿ ನೋಡಿ, ಧ್ಯಾನಿಸು!—ಸರ್ವೇಶ ತನ್ನ ಜೀವವನ್ನು ಮನುಷ್ಯರ ನಿಮಿತ್ತ ಕೊಟ್ಟನು.—ಈ ದೊಡ್ಡ ಪ್ರೀತಿಗೆ ಸಮಾನವು—ಮತ್ತಾವನಲ್ಲಿ ಯೆಂದೂ ಕಾಣದು.

೨. ಓ ಕ್ರಿಸ್ತ, ನಿನ್ನ ಕ್ರೂಜೆಯಲ್ಲಿ—ಅನಂತ ಪ್ರೀತಿಯನ್ನು ತೋರಿಸಿ,—ಪವಿತ್ರ ನಿನ್ನ ರಕ್ತ ಚೆಲ್ಲಿ,—ವಿಮೋಚನೆಗೆ ಮುದ್ರೆ ಹಾಕಿದಿ.—ಭೂಪರಲೋಕ ನಾಶವಾದರೂ,—ಈ ಪ್ರೀತಿ ಯೆಂದೂ ಬಿದ್ದು ಹೋಗದು.

೩. ನೀ ಕ್ರೂಜೆಯಲ್ಲಿ ತೂಗಲಾಗಿ,—ಮಧ್ಯಾಹ್ನದಿ ಗಾಢಾಂಧಕಾರವು,—ಅಘೋರವಾದ ಗುರುತಾಗಿ,—ಭಯಸ್ಥ ಭೂಮಿಯನ್ನು ಮುಚ್ಚಿತು.—ನಿಂನಲ್ಲಿ ನಂಬಿ ನಾನು ಸತ್ತರೆ,—ಅನಂತ ಕಾಂತಿಯನ್ನು ಕಾಣುವೆ.

೪. ಉಂಟೆನಗೀಗ ಪರಿಹಾರ.—ಸೈತಾನನೆಂಬ ಹಾಳೇ ಶತ್ರುವು—ಸರ್ವೇಶನಾಜ್ಞೆಯ ಪ್ರಕಾರ—ನಂನಲ್ಲಿ ಪಾಲು ಹೊಂದಲಾರನು.—ನಾನ್ಯೇಸುವಿನ ಶಿಷ್ಯನಾದರೆ,—ಮಹಾಸಂತೋಷದಿಂದ ತೀರುವೆ.

೮೩.

Mel. Fahre fort, Zion, fahre fort im Licht.

೧. ಚೀಯೋನೇ! ಚೀಯೋನೇ!—ನೀನು ದೇವಸ ಭೆಯು.—ಇಕ್ಕಟ್ಟಾದ ದ್ವಾರದಿಂದ—ಶೇರಿ ಧೈರ್ಯವಾಗಿರು!—ನೆಟ್ಟಗಾದ ಹಾದಿಯಿಂದ—ನಡೆ, ಯೇನಾಯಾಸ ಪಡದೆ,—ಮುಂದಕ್ಕೆ! ಮುಂದಕ್ಕೆ!

೨. ಚೀಯೋನೇ! ಚೀಯೋನೇ!—ಪರಿಶುದ್ಧ ಪಟ್ಟವೇ!—ಚಿಂತೆ ಪಡ ಬೇಡವು—ದುಷ್ಟಲೋಕಹಿಂಸೆಗೆ.—ಮುಂದಿನ ಕಿರೀಟವನ್ನು,—ಸದ್ವಿಶ್ವಾಸ ಯೆಂದೂ ಹಿಡಿದು,—ದೃಷ್ಟಿಸು! ದೃಷ್ಟಿಸು!

೩. ಚಿಯೋನೇ! ಚೀಯೋನೇ!—ನೀನು ದೇವಗ್ರಾಹವು.—ಪಾಪಾದ ಕಳಂಕ ವಾಂದೂ—ನಿಂನಲ್ಲಿರ ಬಾರದು.—ಯೇಸು ನಿನಗಾಗಿ ನಾಂದು—ತನ ಜೀವವನ್ನು ಸುಮ್ಮನೆ—ಕೊಟ್ಟನೇ? ಕೊಟ್ಟನೇ?

೪. ಚೀಯೋನೇ! ಚೀಯೋನೇ!—ನೀ ಪವಿತ್ರ ಕನ್ನೆಯು.—ಯೇಸು ತಂನ ರಕ್ತವನ್ನು—ನಿನಗಾಗಿ ಹೊಯ್ದನು.—ನಿಶ್ಚ ರಾಜ್ಯಪ್ರಾಪ್ತಿಯನ್ನು—ನಿನಗೆ ಅನಾದಿ ತಂದೆಯು—ಕೊಟ್ಟನು, ಕೊಟ್ಟನು.

೫. ಚೀಯೋನೇ! ಚೀಯೋನೇ!—ಜಯಶಾಲಿಯಾಗಿರು!—ಯೇಸುವೆಂಬ ವೀರನನ್ನು—ನಂಬಿ ಧೈರ್ಯವಾ

ಗಿರು!—ನಿನ್ನ ರಣಭೂಮಿಯನ್ನು—ಬಿಡದೆ, ಪೋರ್
ರಾಡು! ಜಯವು—ನಿನ್ನದು, ನಿನ್ನದು.

೮೪.

Mel. So führst du doch recht selig, Herr, die Deinen.

೧. ಓ ಕರ್ತಾ, ಅಪರೂಪ ಮಾರ್ಗದಿಂದ—ಸ್ವಜನಕ್ಕೆ ಪರೀಕ್ಷೆ ಮಾಡುತ್ತೀ.—ಹ್ಯಾಗಾದರೂ ಸಂಪೂರ್ಣ ಪ್ರೀತಿಯಿಂದ—ಸ್ವ ಪ್ರಜೆಯನ್ನು ಕಾಯುತ್ತಾ ಇದ್ದೀ.—ನಿನ್ನಲ್ಲಿ ನಂಬುವಂಥ ದಾಸಗೆ—ಡೊಂಕಾದ ಮಾರ್ಗ ನೆಟ್ಟಗಪ್ಪುದು.—ಆರಂಭದಲ್ಲಿ ಕತ್ತಲಿದ್ದರೂ,—ಕಡೇಲಿಯೆಲ್ಲಾ ಬೆಳಕಾಗಿದೆ.

೨. ಮನುಷ್ಯಬುದ್ಧಿಕಲ್ಪನೆಗಳನ್ನು—ಅನೇಕ ಸಾರಿ ಹೀನ ಮಾಡುತ್ತೀ.—ನಮ್ಮಿಂದಲಾಗದಂಥ ಕಷ್ಟವನ್ನು—ನೀನೊಂದು ಕ್ಷಣದಲ್ಲಿ ತೀರ್ಸುತ್ತೀ.—ಮಣ್ಣಾದ ನೀಚರನ್ನು ಯೆಬ್ಬಿಸಿ,—ಭೂರಾಜರಲ್ಲಿ ಕೂಂಡ್ರ ಮಾಡಲು,—ಗರ್ವಿಷ್ಟನನ್ನು ಬೇಗ ಹಿಡಿದು—ಸ್ವಪೀಠದಿಂದ ತಳ್ಳಿ ಬಿಡುತ್ತೀ.

೩. ಓ ತಂದೆ, ನಿನ್ನ ಪ್ರೀತಿಚಿತ್ತದಿಂದ—ನನ್ನನ್ನು ಮಗುವೆಂದು ನಡಿಸು.—ಓ ಆತ್ಮವೇ, ಸುಶಾಂತ ಕಾಂತಿಯಿಂದ—ನಂನಲ್ಲಿ ನಿತ್ಯ ವಾಸವಾಗಿರು.—ಓ ನನಗಾಗಿ

ಸತ್ತ ಯೇಸುವೇ,—ನಿನ್ನಿಂದ ಅಪಜಯವಾದೆನು.—ಅನಂತಪ್ರೀತಿ ನನ್ನ ಜೈಸಿತು;—ಇನ್ನೆಂದೂ ನಿನ್ನ ದಾಸನಾಗಿಪ್ಪೆ.

೮೫.

Mel. O du Liebe meiner Liebe.

೧. ನನ್ನ ಮೇಲೆ ದಯವಿಡು,—ನನ್ನ ಪ್ರಿಯ ಯೇಸುವೇ!—ನನ್ನ ಪಾಪ ಪೂರ್ತಿ ಬಿಡು,—ಪರಿಶುದ್ಧ ಕರ್ತನೇ!—ಕಿತ್ತು ಪಾಪಬೀಜವನ್ನು—ನಂನಲ್ಲಿಂದ, ಕ್ರಿಸ್ತನೇ,—ನಿನ್ನ ಕೃಪಾಕಾಂತಿಯನ್ನು—ಮೂಡ ಮಾಡು ನನಗೆ.

೨. ನನ್ನ ಬಡ ಮೊರೆಯನ್ನು—ಕೇಳು, ಪ್ರಿಯ ಕರ್ತನೇ!—ಕಾಡಿನಿಂದ ನೀ ನನ್ನನ್ನು—ನಿನ್ನ ಸನ್ನಿಧಾನಕ್ಕೆ ತರುವಾಗ, ನಿನ್ನ ಮುಖ—ನಿತ್ಯ ದರ್ಶಿಸುವೆನು.—ನಿನ್ನ ಪಾತ್ರ ಪೂರ್ಣ ಸುಖ—ಹೊಂದಿ, ಹರ್ಷಿಸುವೆನು.

೮೬.

Mel. Warum sollt ich mich denn grämen.

೧. ಮಗನ ಮುಖಾಂತ್ರವಾಗಿ—ದೇವರು—ನಮ್ಮೊಳು—ಬಂದು ಇರಲಾಗಿ,—ಇನ್ನು ಬೇಡ ಪಾ

ಹಸ್ಯೇವೆ—ನಮಗೆ;—ಯೇಸುವೇ,—ನಿನಗೊಪ್ಪುತ್ತೇವೆ.

೨. ನಾವು ದಾಸರಾದ ಕಾಲ—ಮುಗ್ಯಿತು.—ಕ್ರಿಸ್ತನು—ಶಕ್ತ ನಮ್ಮ ಪಾಲ—ಯೇಸು ಬಲಹೀನನಲ್ಲ; ಇತ್ತರ—ರಕ್ಷೆಯ—ಪೂರ್ಣ ಮಾಡ ಬಲ್ಲ.

೩. ನಮಸ್ಕಾರ ಮಾಡುತ್ತೇವೆ,—ಕರ್ತನೇ!—ನಿನಗೆ ದಾಸರಾಗಿದ್ದೇವೆ.—ಇಹಜೀವದಂತ್ಯದಲ್ಲಿ—ನಮ್ಮನ್ನು ಯೇರಿಸು—ಚೀಯೋನ್ ಗಿರಿಯಲ್ಲಿ!

೮೭.

Mel. Ich will's wagen.

೧. ಜೀವವನ್ನ—ಹೊಂದ, ನನ್ನ—ಆಶೆ ಇಹುದು;—ದೃಢದಿಂದ—ಇಂದಿನಿಂದ—ತಡ ಮರೆತು,—ಹೋಗುತ್ತೇನೆ ಗುರಿಗೆ;—ಹಿಂದಕ್ಕೆಂದೂ ದೃಷ್ಟಿಸೆ.—ಯೆಲ್ಲಾ ಬಿಟ್ಟು—ಮನಸ್ಸಿಟ್ಟು—ಹುಡುಕುವೆನು.

೨. ಹಿತಕ್ಕಾಗಿ—ಓಡಲಾಗಿ—ತ್ವರೆ ಪಡುವೆ.—ಲಾಭವೇನು,—ಕೀರ್ತಿಯೇನು,—ಉದಾಸೀನನಗೆ?—ಯುದ್ಧದಿ ಮೈಗಳ್ಳನು—ಜಯ ಹೊಂದ ಕೂಡದು.—ನಿದ್ರೆಗಾರ—ಗೆಲ್ಲಲಾರ.—ನೆನೆ, ಮನವೇ!

೩. ಮಾರ್ಗದಲ್ಲಿ—ಕುಂದುವಲ್ಲಿ,—ಮೋಕ್ಷಗುರಿಗೆ ನೋಡಿ, ನನ್ನ—ದೃಷ್ಟಿಯನ್ನ—ತಪ್ಪ ಗೊಡದೆ,—ಮುಂ

ದೆ ಮುಂದೆ ನಡೆದು,—ಮೋಕ್ಷ ಹುಡುಕುವೆನು.—
ಯೇಸು, ದಯ....ಮಾಡಿ, ಜಯ—ಕೊಡು ನನಗೆ!

೪. ಕೇಳು ನಿನ್ನ—ಶಿಶುವಿನ—ಮೊರೆ, ತಂದೆಯೇ! ಶಕ್ತಿಯಾದ—ಆಶೀರ್ವಾದ—ಕೊಡು, ಕ್ರಿಸ್ತನೇ!—ಜ್ಞಾನೇತ್ರಗಳನ್ನು—ದೇವರಾತ್ಮವೇ, ಕೊಡು!—ಜೀವವನ್ನ—ಹೊಂದ, ನನ್ನ—ಆಶೆಯಾಗಿದೆ.

೮೮.

Mel. Mit Fried und Freud ich fahr dahin.

೧. ದೇವರ ಚಿತ್ತವಾದರೆ,—ಸುಶಾಂತಿಯಿಂದ—ಸಂತೋಷವಾಗಿ ಹೋಗುವೆ—ಲೋಕದಿಂದ.—ಮೃತಿ ಬಾಳ್ಕೆ ನಿದ್ದೆಯೇ;—ಈ ಮಾತ ದೇವರಂದ.

೨. ಓ ಕ್ರಿಸ್ತಾ, ದೇವಪುತ್ರನೇ,—ನಿಂನ್ಹತ್ರ ಬಂದೆ,—ನಿಂನಲ್ಲಿ ದೇವರೆನಗೆ—ಪ್ರಿಯ ತಂದೆ.—ಸತ್ತರೇನು ಚಿಂತೆಯು?—ನೀನೆನ್ನ ನಿತ್ಯ ಜೀವ.

೮೯.

Mel. Christ unser Herr zum Jordan kam.

೧. ನಾನೇ ಸರ್ವಾಧಿಕಾರಿಯು—ಭೂಪರಲೋಕದಲ್ಲಿ.—ಸುಬೋಧೆಯನ್ನು ನುಡಿದು,—ಸಮಸ್ತ ಸೃಷ್ಟಿಯ

ಲ್ಲಿ—ಪಿತಾಪುತ್ರಾತ್ಮನಾಮದಿ—ಜನಕ್ಕೆ ಸ್ನಾನವನ್ನು—ಕೊಟ್ಟು, ಕೈಕೊಳ್ಳ ಮಾಡಿರಿ—ನಾ ನಿಮಗ್ಹೇಳಿದ್ದನ್ನು,—ಯೆಂಬಾಜ್ಞೆ ಯೇಸು ಕೊಟ್ಟ.

೨. ಈ ಆಜ್ಞೆಯ ಪ್ರಕಾರವು—ಈಗಹುದಿಲ್ಲಿ ಸ್ನಾನ.—ಓ ಯೇಸು, ದಯಪಾಲಿಸು—ಪವಿತ್ರ ಆತ್ಮದಾನ!—ಈ ಅಂಗವನ್ನು ಶೇರಿಸು—ಸಭಾಶರೀರದಲ್ಲಿ.—ಈ ದ್ರಾಕ್ಷೇಕುಡಿ ಅಂಟಿಕ್ಕು—ಓ ಬಳ್ಳಿಯೇ, ನಿಂನಲ್ಲಿ.—ಈ ಕುರಿಯನ್ನು ಕಾಯಿ!

೯೦.

Mel. Liebster Jesu, wir sind hier.

೧. ಸ್ನಾನ ಹೊಂದಿದವನ, (ಳ, ರ,*)—ಪ್ರಿಯ ಯೇಸುವೇ, ಕಾಪಾಡು!—ಆತ್ಮಗಳ ಶತ್ರುವ—ರಾಜ್ಯವನ್ನು ಹೀನ ಮಾಡು!—ಸಭೆ ಯೆಂಬ ರಾಜ್ಯವಾಳು; ವರ್ಧಮಾನವಾಗಿ ಬಾಳು!

೨. ಕೊಟ್ಟ ಹೊಸ ಹೆಸರಂ (ಹೆಸರುಗಳಂ*) ನಿನ್ನ ಕೈಗಳಲ್ಲಿ ಬರೆ.—ಚೀಯೋನ್ ಪಟ್ಟಕವನಂ, (ಳಂ, ರಂ,*)—ಜೀವ ತೀರಿದಾಗ, ಕರೆ.—ನಂಬಿ ಕಂಡ ಜನವಲ್ಲಿ—ಪಾರ್ಥಿಸುವದು ನಿಂನಲ್ಲಿ.

*) Zu ändern nach dem Geschlecht und der Zahl der Getauften.

೯೧.

Mel. Nun lob, mein Seel, den Herren.

೧. ಈ ಗಂಡಹೆಂಡರನ್ನು—ಓ ಕರ್ತ, ಆಶೀರ್ವದಿಸು!—ನೀನವರೈಕ್ಯವನ್ನು—ಕಾಪಾಡಿ, ಕೃಪೆಯಾಗಿರು! ಈ ಹೊಸ ಮನೆಯಲ್ಲಿ—ಸುಕ್ಷೇಮವನ್ನು ತಾ!—ಈ ಹೃದಯಗಳಲ್ಲಿ—ನೀ ವಾಸ ಮಾಡ ಬಾ!—ಈ ನಿನ್ನ ಮಕ್ಕಳನ್ನು,—ಓ ತಂದೆ, ಸಲಹು!—ಆ ಲೋಕಕ್ಕವರನ್ನು—ಕದೇಲಿ ಸೇರಿಸು!

೯೨.

Mel. Wie schön leucht't uns der Morgenstern.

೧. ಅನಂತ ದಿವ್ಯ ಪ್ರೀತಿಯು—ವಿವಾಹ ನೇಮ ಮಾಡಿತು;—ಮನುಷ್ಯಬುದ್ಧಿ ಅಲ್ಲ.—ಸದಾದಯಾಳು ತಂದೆಯೇ—ವಿಧೇಯವಾದ ಜನಕ್ಕೆ—ಸಹಾಯ ಮಾಡ ಬಲ್ಲ.—ಸುಖ—ದುಖ್ಖ—ಕಾಡುವಂಥ,—ತೀರದಂಥ,—ಪ್ರೀತಿಯಲ್ಲಿ—ನಂಬಿಹಾಪರದಲ್ಲಿ!

೯೩.

Mel. Jesu, meine Zuversicht.

೧. ಇಂದು ಕ್ರಿಸ್ತ ಯೇಸುವು—ಸೇರಿ ಪರಲೋಕ

ದಲ್ಲಿ, — ಸರ್ವರಾಜನಾದನು. — ತಂದೆಯ ಬಲಕಡೆಯಲ್ಲಿ ಕೂತು ಕೊಂಡ ರಾಜಗೆ — ಅಡ್ಡ ಬೀಳು, ಪ್ರಜೆಯೇ!

೨. ಯೆಲ್ಲಾ ಅಧಿಕಾರವ — ಯೇಸು ಇಹಪರದಲ್ಲಿ ಹೊಂದಿ, ಸ್ವಂತ ಜನರ — ಆಳುತ್ತಾನೆ ಪ್ರೀತಿಯಲ್ಲಿ. — ಶತ್ರು ಶಕ್ತನಾದರೂ, — ಕೇಡು ಮಾಡಲಾರನು.

೩. ಕೊಡು ನಿನ್ನ ಪ್ರಜೆಗೆ — ನಿನ್ನ ರಾಜ್ಯಸ್ವಾಸ್ಥ್ಯವನ್ನು; — ನಿನ್ನ ಸಭೆಗ್ಯೇಸುವೇ, — ಕೊಡು ನಿತ್ಯ ಸ್ಥಾನವನ್ನು! ನೀನು ಜೈಸಿದಂತೆಯೇ, — ಜಯ ಕೊಡು ನಮಗೆ!

೪. ನಿನ್ನ ದಿನ ಬಂದರೆ, — ಪೂರ್ಣ ಧೈರ್ಯವಾಗಿದ್ದೇವೆ. — ನಿನ್ನ ಸನ್ನಿಧಾನಕ್ಕೆ — ಸಿದ್ಧ ಮಾಡಿ ಕೊಳ್ಳುತ್ತೇವೆ. ನಿನ್ನ ಮುಖಕಾಂತಿಯೇ — ನಮ್ಮ ಜೀವವಾಗಿದೆ.

೮೪.

Mel. Morgenglanz der Ewigkeit.

೧. ನಿತ್ಯಲೋಕಕಾಂತಿಯೇ! — ಮೂಡು ಪೂರ್ಣ ತೇಜದಿಂದ. — ಸುಪ್ರಕಾಶವೆಮಗೆ — ನಿನ್ನ ಕಿರಣಗಳಿಂದ — ಕೊಟ್ಟು, ಕತ್ತಲೆಯನ್ನು — ಓಡಿಸು!

೨. ಬೀಜ ಮೊಳೆಯುತ್ತದೆ — ಮಳೆ ಬಿದ್ದ ಭೂಮಿಯಲ್ಲಿ; — ನಿನ್ನ ಮಂಜು ಬಿದ್ದರೆ — ನನ್ನ ಹೀನ ಆತ್ಮದಲ್ಲಿ, — ಹೊಸ ಜೀವತ್ರಾಣವು — ಬಹುದು.

೩. ಹೃದಯಂಗಳೊಳಗೆ—ನಿನ್ನ ಬೆಳಕನ್ನು ಹೊಯ್ದು,—ವಾಕ್ಯಖಡ್ಗದಿಂದಲೇ—ಹಳೇ ದುಃಸ್ವಭಾವ ಕೊಯ್ದು,—ಜೀವದಲ್ಲಿ ನಮ್ಮನ್ನು—ಸೇರಿಸು!

೪. ದಿವ್ಯ ಪ್ರೀತಿಸೂರ್ಯನೇ!—ನಿನ್ನ ಕಿರಣಂಗಳನ್ನು—ಹಗೆತುಂಬ ಲೋಕಕ್ಕೆ—ಹೊಯ್ದು, ಪ್ರೀತಿರಾಜ್ಯವನ್ನು—ಯೆಲ್ಲಾ ಭೂಮಿ ಸುತ್ತಲು—ಸ್ಥಾಪಿಸು.

೫. ನಿತ್ಯ ನೀತಿಸೂರ್ಯನೇ!—ನೀನು ಅಂತ್ಯದಿನದಲ್ಲಿ—ಭೂಸಮಾಧಿಯಿಂದಲೇ—ನಮ್ಮನ್ನೇಳ ಮಾಡುವಲ್ಲಿ,—ನಿತ್ಯ ಮುಕ್ತಿ ನಮಗೆ.—ಆಗಿದೆ.

೮೫.

Mel. Ach mein Herr Jesu, dein Nahesein.

೧. ಓ ಯೇಸು, ನಿನ್ನ ಸಮೀಪವು—ಸುಶಾಂತಿ ಮನಕ್ಕೆ ಸಿಕ್ಕೋದು;—ರಮ್ಯವಾದ ನಿನ್ನ ಕಟಾಕ್ಷದೃಷ್ಟಿ—ಸಂತೋಷಪೂರಿತ ಪ್ರಿಯ ವೃಷ್ಟಿ—ದೇಹಾತ್ಮಕ್ಕೆ.

೨. ನಿನ್ನೊಳಿನಗೆಯ ಮೋರೆಯು—ಈಗೆಮ್ಮ ಕಣ್ಣಿಗೆ ಕಾಣದು.—ಆತ್ಮದಲ್ಲಿ ನಿನ್ನ ಅನಂತ ಪ್ರೀತಿ—ನಮ್ಮನ್ನು ಹಾರಸುವಂಥ ರೀತಿ—ಪ್ರತ್ಯಕ್ಷವು.

೩. ನಿನ್ನಲ್ಲಿ ಹಗಲೂ ಇರುಳೂ—ಸಂಯುಕ್ತ ಜ

ನರು ಮುಕ್ತರು.—ಓ. ದಯಾಳು, ಕರುಣಾ ತುಂಬಿದಂ
ಥ,—ಸಮಸ್ತ ಪಾಪವ ಮನ್ನಿಪ್ಪಂಥ,—ಆತ್ಮಾಪ್ತನೇ!

೪. ನಿನ್ನಿಂದ ದುಃಖದ ಪಾರವು;—ನಿನ್ಹೊರತು ಸು
ಖವು ಕಾಣದು.—ನಿನ್ನ ಪ್ರೀತಿಧ್ವಾನ ಸಂಪೂರ್ಣವಾ
ಗಿ—ನಮ್ಮಲ್ಲಿ ವಾಸಿಸುತ್ತಿರಲಾಗಿ,—ತೃಪ್ತ್ಯಾದೆವು.

೫. ಅನಂತ ಸುಖ ನಿನ್ನಿಂದಲೇ—ಉಂಟಾಗಿದೆ ಬ
ಡ ಪಾಪಿಗೆ.—ನಿನ್ನ ಪ್ರೀತಿಯಿಂದ ಸಮಸ್ತ ದಿನ—ಸಂ
ತೋಷಪೂರಿತನಾಗಿ, ನಿನ್ನ —ಕೊಂಡಾಡುವೆ.

೮೬.

Mel. Gott der Vater wohn uns bei.

೧. ತಂದೆಯಾದ ದೇವರೇ,—ನಮ್ಮಲ್ಲಿ ವಾಸ ಮಾ
ಡು!—ಪಾಪ ಮನ್ನಿಸೆಮ್ಮಗೆ!—ಆತ್ಮಂಗಳಂ ಕಾಪಾಡು!
ಮುಕ್ತಿ ಕೊಡು, ತಂದೆಯೇ!—ಪಿಶಾಚನನ್ನು ಜೈಸಿ,—
ಸದಾ ವಿಶ್ವಾಸವಾಗಿ,—ನಿಂನಲ್ಲಿ ನೆಲೆಯಾಗಿ,—ಯೆಲ್ಲಾ
ಸಭೆಯೊಂದಿಗೆ—ದಿವ್ಯಾಯುಧಂಗಳಿಂದ—ಪೋರಾಟ
ತೀರಿಸ್ಯೋಣ—ಕಿರೀಟ ಪಡೆಯೋಣ.—ಹಲ್ಲೆಲೂಯಾ!
ನಿಂನಲ್ಲೇ—ರಕ್ಷಣ್ಯ ಸ್ಥಿರವಾಗಿದೆ.

೨. ಪ್ರಿಯ ಯೇಸು ಕ್ರಿಸ್ತನೇ,—ನಮ್ಮಲ್ಲಿ ವಾಸ

ಮಾಡು!—ಪಾಪ ಮನ್ನಿಸೆಮ್ಮಗೆ!—ಆತ್ಮಂಗಳಂ ಕಾಪಾಡು!—ಮುಕ್ತಿ ಕಾಡು, ಕರ್ತನೇ!—ಪಿಶಾಚನನ್ನು ಜೈಸಿ,—ಸದಾ ವಿಶ್ವಾಸವಾಗಿ,—ನಿಂನಲ್ಲಿ ನೆಲೆಯಾಗಿ, ಯೆಲ್ಲಾ ಸಭೆಯೊಂದಿಗೆ—ದಿವ್ಯಾಯುಧಂಗಳಿಂದ—ಪೋರಾಟ ತೀರಿಸ್ಯೋಣ—ಕಿರೀಟ ಪಡೆಯ್ಯೋಣ.—ಹಾಲ್ಲೆಲೂಯಾ! ನಿಂನಲ್ಲೇ—ರಕ್ಷಣ್ಯ ಸ್ಥಿರವಾಗಿದೆ.

೩. ಪರಿಶುದ್ಧ ಆತ್ಮನೇ,—ನಮ್ಮಲ್ಲಿ ವಾಸ ಮಾಡು!—ಪಾಪ ಮನ್ನಿಸೆಮ್ಮಗೆ!—ಆತ್ಮಂಗಳಂ ಕಾಪಾಡು!—ಮುಕ್ತಿ ಕಾಡು, ಆತ್ಮನೇ!—ಪಿಶಾಚನನ್ನು ಜೈಸಿ,—ಸದಾ ವಿಶ್ವಾಸವಾಗಿ,—ನಿಂನಲ್ಲಿ ನೆಲೆಯಾಗಿ,—ಯೆಲ್ಲಾ ಸಭೆಯೊಂದಿಗೆ—ದಿವ್ಯಾಯುಧಂಗಳಿಂದ—ಪೋರಾಟ ತೀರಿಸ್ಯೋಣ—ಕಿರೀಟ ಪಡೆಯ್ಯೋಣ.—ಹಾಲ್ಲೆಲೂಯಾ! ನಿಂನಲ್ಲೇ—ರಕ್ಷಣ್ಯ ಸ್ಥಿರವಾಗಿದೆ.

Zweiter und dritter Vers nach einem alten Gesangbuch.

೨. ಕರ್ತ ಯೇಸು ಕ್ರಿಸ್ತನೇ,—ನೀನೇ ಸರಾಗ ಹಾದಿ!—ತಂದೇ ಸತ್ಯ ವಾಕ್ಯವೇ,—ನೀನೆಮ್ಮ ಮರೆಯಾದಿ. ನೀನು ಸತ್ತು ನಮಗೆ—ಆ ಜೀವರಾಜ್ಯ ಕಾಂಡಿ;—ನಿಂನಲ್ಲಿ ಜೀವಕಾಂತಿ;—ನಿಂನಲ್ಲಿ ಸತ್ಯ ಶಾಂತಿ;—ನೀನಾಲೋಕದನ್ನವೇ;—ನಿಂನಲ್ಲಿ ನೀತಿ, ಜ್ಞಾನ;—ನೀನೆಮ್ಮ

ಯಜಮಾನ;—ನಿನ್ನಿಂದ ಸಮಾಧಾನ.—ಓ ಮರಿ
ಯಪುತ್ರನೇ,—ಅನಂತ ಸ್ತೋತ್ರ ನಿನಗೆ!

೩. ತಂದೆ ಮಗಂಗಳಿಗೆ—ಸಮಾನ ದಿವ್ಯ ಮಾನ
ಹೊಂದಿದ ಸದಾತ್ಮವೇ,—ತಾರ್ಕೈ ವಿಶ್ವಾಸದಾನ!—ಚಿಂ
ತಾಕ್ರಾಂತ ಆತ್ಮಕ್ಕೆ—ನೀ ಕೊಡು ಕ್ಷೇಮವನ್ನು!—"ಓ ಅ
ಪ್ಪಾ, ತಂದೆ" ಅನ್ನ—ಪ್ರೇರೇಪಿಸು ನಮ್ಮನ್ನು!—ಕ್ರಿಸ್ತನ
ಪ್ರಸಂಗಕ್ಕೆ—ಸದಾ ಸಹಾಯ ಮಾಡು;—ಶತ್ರುಗಳಿಂ
ಕಾಪಾಡು;—ಪಿಶಾಚಿಗೆದುರಾಡು;—ಹಲ್ಲೆಲೂಯ! ಆ
ತ್ಮವೇ,—ನೀ ವಾಸಿಸು ನಮ್ಮೊಳಗೆ!

೮೨.

Mel. Nun ruhen alle Wälder.

೧. ಈ ಹಗಲೀಗ ಸಂತು,—ಅಗಾಧ ನಿದ್ದೆ ಬಂ
ತು—ಜೀವಾತ್ಮವೆಲ್ಲಕ್ಕೆ:—ಹೀಗಾಗಿ ನೀನೇ ಹಾಡಿ,—
ಕರ್ತಂಗೆ ಸ್ತೋತ್ರ ಮಾಡಿ,—ಯೆಚ್ಚತ್ತಿರೆನ್ನ ಮನವೇ!

೨. ಸೂರ್ಯ, ಯೇನಾಗಿ ಹೋದಿ?—ಅಜಯ
ವಾಗಿ ಹೋದಿ.—ಕಾರ್ಗತ್ತಲಾಯಿತು:—ಆದಾಗ್ಯೂ
ಮನದಲ್ಲಿ—ಪ್ರಕಾಶವನ್ನು ಚೆಲ್ಲಿ—ಬೇರೊಬ್ಬ ಸೂರ್ಯ
ನೆದ್ದನು.

೩ ವಿಶಾಲಾಕಾಶದಲ್ಲಿ — ಭಂಗಾರಕಾಂತಿಯಲ್ಲಿ — ತಾರೆಗಳೆದ್ದವೆ: — ನಾನೂ ಪ್ರಕಾಶಿಸ್ಯೇನು, — ನಾನ್ಹಾಗೆಯೇ ನಿಂತ್ಯೇನು — ಈ ಕೀಳಲೋಕ ಬಿಡಲೇ.

೪. ಶರೀರ, ಕಷ್ಟ ಬಿಟ್ಟು, — ವಸ್ತ್ರಾದಿ ತೆಗದಿಟ್ಟು, — ವಿಶ್ರಾಂತಿಯಾಗಿದೆ: — ಸೌಂದರ್ಯ ವಸ್ತ್ರವನ್ನೂ, — ಶೃಂಗಾರಪೂರ್ತಿಯನ್ನೂ — ಕೊಟ್ಟಾನು ಕ್ರಿಸ್ತನೆಮಗೆ.

೫. ಕಷ್ಟ ಸಮಾಪ್ತವಾಯ್ತು, — ಯೆಂತಾ ಸಂತೋಷವಾಯಿತು — ಕೈ ಕಾಲುಗಳಿಗೆ: — ಕಡೇಲಿ ಯೆಂಥಾ ಸುಖ, — ಈ ಪಾಪ, ಕಷ್ಟ, ದುಃಖ, — ಸಮಾಪ್ತ ಕಾಲ ಬರಲೇ!

೬. ಸಾಕೆಂದು ಬಿದ್ದಿದ್ದೇನೆ; — ವಿಶ್ರಾಂತಿ ಕಾದುತ್ತೇನೆ — ಆಯಾಸದಂಗಕ್ಕೆ: — ಆಯಾಸ ಮುಗಿದೀತು; — ಶರೀರಕ್ಕೆ ಸಿಕ್ಕೀತು — ಭೂಗರ್ಭದಲ್ಲಿ ಹಾಸಿಗೆ.

೭. ನಾ ಕಣ್ಣು ಮುಚ್ಚಲಾಗಿ, — ದೇಹಾತ್ಮ ಪ್ರೀತಿಯಾಗಿ — ಕಾಯೋವನ್ಯಾವನು? — ಓ ಕರ್ತ, ದಯ ಮಾಡಿ, — ದೇಹಾತ್ಮವಂ ಕಾಪಾಡಿ, — ಕೇಡೆಲ್ಲಾ ಪರಿಹರಿಸು!

೮. ಉಭಯ ರೆಕ್ಕೆಯನ್ನು — ಬಿದಿಚ್ಚಿ, ಮರಿಯನ್ನು, ಓ ಯೇಸು, ಹಾದಗು! — ವಿರೋಧಿ ಮೋಸವನ್ನು ಹೀನೈಸ, ದೂತರನ್ನು — ಸಹಾಯಕ್ಕಾಗಿ ಕಳುಹು!

೯೮.

Mel. Mein Heiland nimmt die Sünder an.

೧. ಮೇಲಿರುವ ಸ್ವದೇಶಕ್ಕೆ—ದಿನಾ ಸಮೀಪವಾಗುತ್ತೇನೆ.—ಈ ಜೀವ ಬಾಲಶಿಕ್ಷೆಯೇ;—ಇಲ್ಲಿ ದೇಶಾಂತ್ರಿಯಾಗಿದ್ದೇನೆ.—ಈ ಜೀವವು ಪ್ರಯಾಣವೇ; ಸ್ವಪಟ್ಣ ಪರಲೋಕದ್ದೇ.—ನಾನಲ್ಲಿ ಯೇಸು ಕ್ರಿಸ್ತನಿಂದ ಸ್ವತಂತ್ರ ಹೊಂದುವದರಿಂದ,—ನಾನಾತನ ಸಮೀಪಕ್ಕೆ ಬಂದಾಗ ಹರ್ಷವಾಗಿಪ್ಪೆ.

೨. ನಾನಲ್ಲಿ ಸೇರಿದಾಗಲು,—ಅನಂತ ಕಾಲ ಸ್ತುತಿಸೇನು.—ಮರ್ಮಂಗಳನ್ನು ತಿಳಿದು,—ಮಹಾ ಆಶ್ಚರ್ಯವಂ ಪಟ್ಟೇನು.—ಆಗಲ್ಲಿ ಪೂರ್ಣವಹುದು—ಕ್ರೂಜೇ ಪವಿತ್ರ ಫಲವು.—ವಿಶ್ವಾಸಿಸಿದ್ದನ್ನು ಕಂಡೇನು.—ಅಪೇಕ್ಷಿಸಿದ್ದು ಭೋಗಿಸೇನು.—ಕ್ರೂಜೇಲಿ ಸತ್ತ ಕರ್ತಗೆ ಅನಂತ ಸ್ತೋತ್ರ ಹಾಡುವೆ.

೩. ನಾನಲ್ಲಿ ಕಂಡು ಕೊಳ್ಳುವೆ—ಇಲ್ಲಗಲಿದ ಪ್ರಿಯರನ್ನು—ಈ ಕಣ್ಣಿಂದ ದೃಷ್ಟಿಪೆ—ಮಹತ್ವವುಳ್ಳ ಕರ್ತನನ್ನು—ಸಮಸ್ತ ದೂತರಿಂದಲೂ,—ವಿಮುಕ್ತ ಸಭೆಯಿಂದಲೂ,—ಅನಂತ ದೈವಸ್ತೋತ್ರರಾಗ—ಸಿಂಹಾಸನಕ್ಕೆ ಯೇಳುವಾಗ,—ವಿಮುಕ್ತ ಜನರೊಂದಿಗೆ—ಮಹಾಸಂತೋಷ ಪಡುವೆ.

೯೯.

Mel. Was Gott thut, das ist wohlgethan.

೧. ಯೆಂದೂ ಸುಚಿತ್ತವಾಗಿದೆ — ಪರಾತ್ಪರನ ಚಿತ್ತ. ಕಡ್ಯೇಲಿ ಮುಕ್ತಿ ಪೊಂದುವೆ — ಕ್ರಿಸ್ತೇಸುವ ನಿಮಿತ್ತ. ನಂಗಾತನ್ಯೇ — ಸಂರಕ್ಷಣೆ — ಕಟಾಕ್ಷದಿಂ ಮಾಡ್ವಾನು; — ನನ್ನಾಶೀರ್ವಾದಿಪ್ವಾನು.

೨. ಯೆಂದೂ ಸುದಾನವಾಗಿದೆ — ಪರಾತ್ಪರನ ದಾನ. — ಈ ಪಾಪವೆಂಬ ರ್‍ಯಾಗಕ್ಕೆ — ಅಸಪ್ಪು ರುಚ್ಯೇ ಪಾನ — ಬ್ಯೇಕಾಗಲಿ! — ಸಂತ್ಯೋಷಿಸಿ, — ಅದನ್ನು ಕುಡಿದ್ಯೇನು; — ವೈದ್ಯಂಗೆ ವಂದಿಸ್ಯೇನು.

೩. ಯೆಂದೂ ಸುಶಿಕ್ಷೆಯಾಗಿದೆ — ಪರಾತ್ಪರನ ಶಿಕ್ಷೆ. ನಮ್ಮಾತ್ಮಗಳ ಗುಣಕ್ಕೆ — ಉಂಟಾದರೆ ಪರೀಕ್ಷೆ, — ಓ ತಂದೆಯ್ಯೇ, — ನೀ ದಂಡಣೆ — ಕಾಟ್ಟಾಗ್ಳು, ಸೈರಿಸ್ಯೇನು; — ಕೃತಜ್ಞನಾಗಿದ್ದ್ಯೇನು.

೪. ಸುಮಾರ್ಗದಲ್ಲಿ ಭಕ್ತನು — ಸಂಚಾರ ಮಾಡುತ್ತಾನೆ. — ಆದ್ಯಲಿ ಕತ್ತಲಿದ್ದರೂ, — ಕಡ್ಯೇಲಿ ನ್ಯಾಡುತ್ತಾನೆ — ಪ್ರಕಾಶವ. — ಓ ಹೃದಯಾ, — ಸಂದ್ಯೇಹಾವೆಲ್ಲಾ ಬಿಡು! — ಸದಾ ವಿಶ್ವಾಸವಿಡು!

೧೦೦.

Mel. Herzlich lieb hab ich dich, o Herr.

೧. ಓ ಪ್ರಿಯವಾದ ಕರ್ತನೇ!—ನನ್ನಿಂದ ದೂರ
ವಾಗದೆ,—ಬಾ, ಬಾ ಸಹಾಯಕ್ಕಾಗಿ!—ನಾನಿಹಪರದ
ಲ್ಲಿಯೂ—ಯೇನೊಂದೂ ಚಿಂತೆ ಮಾಡೆನು,—ನೀ ದ
ಯ ಮಾಡಲಾಗಿ.—ಹೃದಯ ಛಿನ್ನವಾದರೂ—ನಿಂ
ನಲ್ಲಿ ಸುಖವಾಹೆನು.—ನೀ ನಿನ್ನ ಶುದ್ಧ ರಕ್ತದಿ—ರಕ್ಷ
ಣ್ಯ ಉಂಟು ಮಾಡಿದ್ದೀ.—ಓ ಯೇಸುವೇ!—ಓ ದೇ
ವರಾದ ಕ್ರಿಸ್ತನೇ!—ರಕ್ಷಣ್ಯ ಕಾಡು ನನಗೆ.

೨. ಈ ಕ್ಷೀಣ ಜೀವದೊಳಗೆ—ನಾನೈದಿದ್ದೆಲ್ಲಾ ನಿ
ನ್ನದೇ;—ದೇಹಾತ್ಮ ನಿನ್ನ ದಾನ.—ಯಾವಾಗ್ಲೂ ನಿನ್ನ
ಕೈಯೊಳು—ಇದ್ದೇನೆ; ಆಜ್ಞೆಯಂ ಕಾಡು,—ಓ ನನ್ನ
ಯಜಮಾನ!—ದುರ್ಬೋಧನೆಯ ಮೋಸವ,—ಸೈತಾ
ನನ ಕುಯುಕ್ತಿಯ,—ಹೋನೈಸಿ, ಕ್ರೂಜೋ ಬಾಧನೆ
ನೀನುಪದೇಶಿಸೆನಗೆ.—ನಾಸಾಯಲೇ,—ಆಧಾರವನ್ನು,
ಕ್ರಿಸ್ತನೇ,—ನೀ ಕಾಡು ನನ್ನಾತ್ಮಕ್ಕೆ.

೩. ಈ ಜೀವ ತೀರಿದಾಗಲು,—ನಿರ್ಣಯದಿನ ವ
ರೆಗೂ,—ಈ ದೇಹ ನಿದ್ದೆಗೈಯ್ಲು—ಆಜ್ಞಾಪಿಸು! ಸು
ಸ್ಥಳಕ್ಕೆ—ನೀ ಕಳುಹುವ ದೂತರೇ—ನನ್ನಾತ್ಮವನ್ನು
ವೈಯ್ಲು—ಆಜ್ಞಾಪಿಸು! ಓ ಕರ್ತನೇ!—ಕಣ್ಣಾರೆ ನಿನ್ನ

ಮಹಿಮೆ —ನಾನಲ್ಲಿ ದೃಷ್ಟಿಸುವೆನು.—ಆ ದೇಹಾ ಬೇಗ ಯೆಬ್ಬಿಸು!—ನಾನೆದ್ದರೆ,—ಓ ಪ್ರಿಯ ಕರ್ತಾ, ನಿನಗೆ—ಅನಂತ ಸ್ತೋತ್ರ ಮಾಡುವೆ.

೧೦೧.

Mel. Wenn ich Ihn nur habe.

೧. ನಾನು ಯೇಸುವನ್ನು—ಹಿಡಿದಿರಲೈ,—ನನ್ನ ಹೃದವಾತನನ್ನು—ಯೆಂದೂ ಮರ್ಯದಿದ್ದರೆ,—ಹೋಗ್ಯಾದೆಲ್ಲಾ ದುಖ್ಖ;—ತಪ್ಪದೆಂದೂ ಭಕ್ತಿ, ಪ್ರೀತಿ, ಸುಖ.

೨. ನನ್ನ ಕರ್ತ ಮಾತ್ರ—ನನಗಿದ್ದರೆ,—ಇಹಭೋಗವೆಂಬ ಯಾತ್ರ—ನನಗಿನ್ನು ಯಾತಕ್ಕೆ?—ಇಕ್ಕಟ್ಟಾದ ದ್ವಾರ—ಶೇರಿದವ ತ್ಯಾಗ ಮಾಡಲಾರ.

೩. ಆತನಿರುವಲ್ಲಿ—ನನ್ನ ಸ್ಥಾನವು;—ಆತ ವರವಂ ಕೊಟ್ಟಲ್ಲಿ—ಪೂರ್ಣ ತೃಪ್ತಿ ತಪ್ಪದು.—ಓ ಮಹಾಸಂತೋಷ!—ಆತನಲ್ಲಿ ನಿತ್ಯ ಆತ್ಮಪೋಷ.

೧೦೨.

Mel. Allein Gott in der Höh sei Ehr.

೧. ದೈ ಪ್ರೇಷ್ಟೋ ಪ್ರೀತಿ ಮಾಡಿದ—ಭೂಲೋಕಕ್ಕೆಣೆ ಇಲ್ಲ.—ಕಂಡಾತ ದ್ರೋಹಜಾತಿಯ,—ಉಪೇಕ್ಷೆ

ಮಾಡಲಿಲ್ಲ.—ಈ ಪ್ರೀತಿಯ ಮಿತಿ ಅರಿತು—ದಯಾಬ್ಧಿ ನೆಲ ಕಾಣಲು—ಸಾಮರ್ಥ್ಯ ಯಾರಿಗುಂಟು?

೨. ಅಸಹ್ಯ ಪಾಪಮಲದಿ—ದೈವೀ ಲೋಕ ಬಿತ್ತು;—ಆದಾಗ್ಯೂ ತಂದೆ ಪಾಲ್ಮೈಲಿ—ಕಟಾಕ್ಷಪೂರ್ಣ ಇತ್ತು—ವಿಮೋಚನೆಯ ಮಾಡುವ—ಮಗನ್ನ ಕಳುಹಿಸಿದ—ಕೆಟ್ಟೋದ ಮಕ್ಕಳಿಂಗೆ.

೧೦೩.

Mel. In dulci jubilo.

೧. ಮಹಾಸಂತೋಷವೇ!—ಕೊಂಡಾಡಿರೆಲ್ಲರೇ!—ನಮ್ಮ ಹೃದಾನಂದ—ಈ ಹೊತ್ತು ಹುಟ್ಟ್ಯದೆ;—ಸುಜ್ಞಾನಸೂರ್ಯ ಬಂದ—ಸಮಸ್ತ ಲೋಕಕ್ಕೆ.—ಪ್ರಿಯ ಯೇಸುವೇ,—ನಿತ್ಯ ವಂದನೆ!

೨. ಓ ಶ್ರೇಷ್ಠ ಶಿಶುವೇ!—ಓ ಪ್ರಿಯ ಕರ್ತನೇ! ಸತ್ಯ ಕ್ಷೇಮವನ್ನು—ಕಾದ್ಯೆಯ ನನಗೆ!—ಪ್ರೇರೇಪಿಸು ನನ್ನನ್ನು—ವಿಧೇಯ ಮನಕ್ಕೆ!—ಘನರಾಜನೇ,—ನಿತ್ಯ ವಂದನೆ!

೩. ಆಶ್ಚರ್ಯ ಪ್ರೀತಿಯೇ!—ವಿಚಿತ್ರ ದಯವೇ!—ಪಾಪಕರ್ಮದಿಂದ—ಕೆಟ್ಟೋದ ನಮಗೆ—ಉಂಟ್ಯಾತಾ

ಶಿಶುವಿಂದ — ಮಹಾಸಂತೋಷವೇ; — ಶೀಘ್ರವಾಗಿ
ಯೇ — ಶೇರ್ವೋಣದಕ್ಕೆ.

೪. ಯೆಲ್ಲಿ ಸಂತೋಷವು? — ಅದಿಲ್ಲಿ ಶಿಕ್ಕದು. — ಪ
ರಿಶುದ್ಧ ಸಭೆ, — ಹಾಸ್ವಾದ ರಾಗವು, — ಯೆರೂಸಲೇ
ಮ ಪ್ರಭೆ — ಇವೆಲ್ಲ ಗತಿಯು; — ಶೀಘ್ರವಾಗಿಯೇ
ಶೇರ್ವೋಣಲ್ಲಿಗೆ!

೧೦೪.

Mel. Weil ich Jesu Schäflein bin.

೧. ಯೇಸುವಿನ ಕುರಿಯು — ನಾನು; ಚಿಂತೆ ಪಡೆ
ನು. — ನನಗೆ ಮಹಾಸಂತೋಷ; — ಪ್ರೀತಿಯಿಂದ ವಾ
ಳೋ ಪೋಷ — ಕಾಟ್ಟು ಕಾಯ್ವ ಯೇಸುವು — ನನ್ನ ನಾ
ಮ ಬಲ್ಲನು.

೨. ಶಾಂತ ಕೋಲು ಹಿಡಿದು — ನನ್ನ ನಡಿಸುವ
ನು; — ಸುಕ್ಷೇಮದಲ್ಲಿದ್ದೇನೆ; — ಶ್ರೇಷ್ಠ ಮೇವು ಮೆ
ಲ್ಲುತ್ತೇನೆ; — ದಾಹವಾಗುತ್ತಿರಲು, — ಬುಗ್ಗೆ ತೋರಿಸುವ
ನು.

೩. ಸುಖಿಯಾದ ಕುರಿಗೆ — ಪ್ರಾಣ್ಸಂತೋಷವಿರದೇ?
ಈ ಸುಕಾಲದಂತ್ಯದಲ್ಲಿ — ಅತಿ ಸ್ವಂತ ಹೆಗಲಲ್ಲಿ — ಮ
ನೆಗೆನ್ನ ಒಯ್ಯಲು, — ಸುಖಪೂರ್ತಿ ಅಹುದು.

೧೦೫.

Mel. Es ist das Heil uns kommen her.

೧. ರಕ್ಷಣ್ಯ ಬಂದದೆಮಗೆ—ಬರೈ ಕಟಾಕ್ಷದಿಂದ. ಉಂಟಾಗದೆಂದೂ ಪ್ರಾಣಕ್ಕೆ—ಸಹಾಯ ಕ್ರಿಯೆಯಿಂದ.—ವಿಶ್ವಾಸ ಕಣ್ಬುದ್ಯೆಸುವ;—ಕಾಂಡ್ಡ್ಯಾದನೀತ ಶಾಪವ;—ಮಧ್ಯಸ್ಥನೀತನಾದ.

೨. ದಿವ್ಯಾಜ್ಞೆ ಸಾಧಿಸುವರೆ—ಸಮರ್ಥರಾರಿದ್ದಿಲ್ಲ; ಹೀಗಾಗಿ ಬಂದ ಕಷ್ಟಕ್ಕೆ—ಪ್ರಮಾಣವಿರಲಿಲ್ಲ.—ಮಾಂಸಾತ್ಮಗಳ್ಗನ್ಯೇನ್ಯವು;—ದಿವ್ಯಾಜ್ಞೆಗಾತ್ಮ ಮೆಚ್ಚದು.—ನಾವೆಲ್ಲಾ ಕೆಟ್ಟೆವ್ಯೈಯ!

೩. ದೇವಾಜ್ಞೆಯಂ ಕೈಕೊಳ್ಳಲು—ಸಾಮರ್ಥ್ಯ ಸ್ವೇಚ್ಛೆಯಲ್ಲಿ—ಉಂಟೆಂಬ ಮೋಸ ಹಬ್ಬಿತು—ಮರ್ತ್ಯದ ನರರಲ್ಲಿ.—ನಮ್ಮೊಳಗಣ ದುರ್ಗತಿ—ಕಣ್ಗಾರೆ ತ್ಯಾವರ್ ಕನ್ನಡಿ—ಯೆಂದಾಜ್ಞೆ ದೇವರಿತ್ತ.

೪. ದುರ್ಭಾವ ಸ್ವಂತ ಶಕ್ತಿಯಿಂ—ಬಿಡ್ಯಾದಸಾಧ್ಯವಾಯಿತು.—ದುಷ್ಕರ್ಮ ವ್ಯರ್ಥ ಯತ್ನದಿಂ—ಭೂಲೋಕದೊಳ್ ಹೆಚ್ಚಾಯಿತು.—ಅಸತ್ಯ ಪುಣ್ಯ; ಶಪಿತ ನರಂಗೆ ಪಾಪಕಲ್ಮಷ—ಸಹಜಾತವಾದ ದೋಷ.

೫. ಆದಾಗ್ಯೂ ನೇಮ ಪೂರೈಸ—ಯಾರಿಲ್ಲದಿರಲಾಗಿ,—ಮನುಷ್ಯರೆಲ್ಲಾ ಕೆಡದ—ಹಾಗಂತ ನರನಾಗಿ

ಕ್ರಿಸ್ತೇಸು ಹುಟ್ಟಿ, ನಮ್ಮಲ್ಲಿ—ಬಂದೆಲ್ಲವನ್ನು ಪೂ
ರೈಸಿ,—ದೇವಾಗ್ರ ಶಾಂತಿ ಗೈದ.

೬. ಓ ಪ್ರಿಯ ಕರ್ತ ಯೇಸುವೇ,—ನೀನೆಲ್ಲಾ ಪಾ
ಲ ಶಿಕ್ಷೆ!—ನೀ ಸತ್ತು ಹೋದ್ದರಿಂದಲೇ—ನಾ ಸಾವಿನಿಂ
ದ ಯೆದ್ದೆ;—ನಾನಿನ್ನು ಮೇಲೆ ನಿನಗೆ—ಸದ್ಭಕ್ತಿಯಿಂ
ನಡೆವೆ;—ನೀ ಮುಕ್ತಿಯನ್ನು ಕೊಡು!

೧೦೬.

Mel. Wirf Sorgen und Schmerz.

೧. ನಂಬೇಸುವನು!—ಆತಂಗರುಹು—ಚಿಂತಾ
ವ್ಯಸನಾದಿಗಳನ್ನು!

೨. ದಿಕ್ಕರಿಯದೆ—ನೀ ವೇದಿಸಿರೆ,—ಶೇರು ನಿನ್ನ
ರಕ್ಷಕನನ್ನು.

೩. ನಿನ್ನೊರೆಯನ್ನು—ಕಾರುಣ್ಯದಾಳು—ಯೆತ್ಥಾಕುವ
ನುದ್ಬಲದಿಂದ.

೪. ದಯಾಪರನು—ನಿಂಗೀಯುವನು—ಸುಶಾಂತಿ
ಯ ವಚನದಿಂದ.

೫. ಕ್ರಿಸ್ತೇಸುವಿನ—ಛತ್ರಾಶ್ರಯವ—ಶೇರು;
ಭಯವಿಲ್ಲದ ತಾಳು!

೬. ಈ ಕಷ್ಟಗಳು — ಬಿಟ್ಟ್ಹೋಗುವವು; — ಆಬೇಲಿ ನಿರಂತರ ಸುಖ.

೭. ಯೆಲಾ, ನಿನಗೂ — ನಿನ್ನೊಡೆಯನು — ಕಿರೀಟವ ತಲೆಗಿಟ್ಟಾನು.

೧೦೭.

Mel. Ich bete an die Macht der Liebe.

೧. ಯೇಸುವಿನಲ್ಲಿ ಕಾಣ ಬಂದ — ಅಪಾರ ಪ್ರೀತಿ ಅರಿತು, — ಅರಿಷ್ಟಗ್ರಾಸ ಜೀವ ತಂದ — ಕಟಾಕ್ಷಕ್ಕೆರಗುವೆವು. — ಇನ್ನು ನಮ್ಮನ್ನು ಮರೆಯೋಣ, — ಪ್ರೇಮಾಬ್ಧಿಯಲ್ಲಿ ಮುಳುಗೋಣ!

೨. ನಿನ್ನಲ್ಲಿಯೇ ರಕ್ಷಣ್ಯತ್ರಾಣ; — ನಿನ್ನಾಶೀರ್ವಾದ ಸದ್ಗತಿ — ನೀನೆನ್ನ ಹೃದಯದ ಪ್ರಾಣ; — ನೀನೆನ್ನ ಮೋಕ್ಷವಾಗಿದ್ದೀ. — ಓ ಪ್ರೀತಿ, ಅಪ್ಪಿ ಕೋ ನನ್ನನ್ನು, ಆರೈಸಿ ಕೊಂಡು ಶಿಶುವನ್ನು.

೩. ನೀ ಮಾತ್ರ ಬೇಕು; ನೀನಗಲ್ಪ; — ನಾ ನಿನಗಾಗಿ ಬಾಳುವೆ; — ಪ್ರಪಂಚ ಪೂರ್ಣವಾಗ್ಯಸಲ್ಪ; — ನನ್ನಾಶಾಬಂಧ ನಿಂನಲ್ಲೇ; — ನಿಂನಲ್ಲಿ ಶಾಂತಿ, ಹೃತ್ಸಂತೋಷ; — ನಿಂನಲ್ಲಿ ಶ್ರೇಷ್ಠ ಆತ್ಮಪೋಷ.

೪. ಓ ಯೇಸು, ನಿನ್ನ ನಾಮವನ್ನು — ಕೊಂಡಾಡು

ಶ್ರೇವೆ ಯೆಂದಿಗೂ!—ಓ ಪ್ರೀತಿಮೂಲ, ಪ್ರೀತಿಯ ನ್ನು—ನಮ್ಮೊಳಗೆ ನೀ ಹುಟ್ಟಿಸು!—ನೀ ತೋರಿಸಿದ ದಾರಿಯಲ್ಲಿ—ಶೇರ್ವೆವು ಜೀವರಾಜ್ಯದಲ್ಲಿ.

———o()o———

೧೦೮.

Mel. Jesus, refuge of my soul.

೧. ಯೇಸು, ನಿನ್ನ ಪಾದವೇ—ನನ್ನ ಆಶ್ರಸ್ಥಾನವು; ಈ ಲೋಕಾಬ್ಧಿಘೋಷಕ್ಕೆ—ಅತಿಭಯ ಪಟ್ಟೆನು;—ನಿನ್ನ ಕೈ, ಓ ಯೇಸುವೇ,—ಚಾಚಿ, ಯೆನ್ನ ಸಲಹು!—ಅಂ ತ್ಯದಲ್ಲಿ ರೇವಿಗೆ—ನನ್ನ ದೋಣಿ ಶೇರಿಸು!

೨. ನೀನೇ ಪಾಕು, ಕರ್ತನೇ!—ನಿಂನಲ್ಲೆಲ್ಲಾ ಸಿಕ್ಕಿತು. ಕ್ಷೇಮ ಕಾಡು ರೋಗಿಗೆ!—ಕುರುಡನ ನಡಿಸು!—ಪಾಪ ದಿಂದ ತುಂಬಿದೆ;—ನೀನೇ ಪರಿಶುದ್ಧನು;—ಮಲ ಪಾ ತ್ರಿತೆನಗೆ;—ನೀನೇ ಕೃಪಾಪೂರ್ತಿಯು.

೩. ನನ್ನ ಪಾಪವೆಲ್ಲವ—ಕೃಪೆಯಿಂದ ಮನ್ನಿಸೋ; ಮನಸ್ಸಿನ ಶುದ್ಧಿಯ,—ಕರ್ತ, ದಯಪಾಲಿಸೋ!—ನಿನ್ನ ಜೀವಜಲವು—ಹರಿಯಲೆನ್ನೊಳಗೆ!—ನಿತ್ಯವಾದ ಸ್ತು ತಿಯು,—ಯೆನ್ನ ಕರ್ತ, ನಿನಗೆ!

———o:o———

೧೦೯.

Mel. Nun bitten wir den heil'gen Geist.

೧. ಓ ಪರಿಶುದ್ಧ ಆತ್ಮವೇ,—ಸದ್ವಿಶ್ವಾಸ ಕೊಡು ನಮಗೆ!—ಅಂತ್ಯಕಾಲದಲ್ಲಿ,—ಈ ಕಷ್ಟವನ್ನು—ಬಿಟ್ಟೋಗುವಾಗ, ಕಾಪಾಡೆಮ್ಮನ್ನು—ಕಾರುಣ್ಯದಿಂದ!

೨. ಪ್ರಕಾಶಿಸೋ, ಪ್ರಿಯ ಬೆಳಕೇ!—ಕ್ರಿಸ್ತನನ್ನು ತಿಳಿಸೆಮಗೆ!—ಆತ ಲೋಕರಕ್ಷಕನಾಗಿ ಬಂದ;—ಸತ್ಯ ಸ್ವದೇಶಕ್ಕೆಮ್ಮನ್ನು ತಂದ—ಕಾರುಣ್ಯದಿಂದ.

೩. ಓ ಪ್ರೀತಿರೂಪವೇ, ಪೊತ್ತಿಸು—ಪ್ರೀತಿಜ್ವಾಲೆಯನ್ನು ನಮ್ಮೊಳು!—ಸ್ಥಾಪಿಸು ನಮ್ಮಲ್ಲಿ—ಅನ್ಯೋನ್ಯವನ್ನೂ—ನಿತ್ಯ ಸುಕ್ಷೇಮದಪೇಕ್ಷೆಯನ್ನೂ—ಕಾರುಣ್ಯದಿಂದ!

೪. ಸುಶಾಂತಿಗೆ ನೀನೇ ಮೂಲವು;—ಶ್ರಮೆ ಮೃತ್ಯುಗಳಿಗಂಜೆವು.—ನಿನ್ನ ಮರೆಯಲ್ಲಿ—ಉದ್ಧಾರ ಮಾಡು!—ಕಡೇ ಗಂಡಾಂತರದೊಳ್ ಕಾಪಾಡು—ಕಾರುಣ್ಯದಿಂದ.

೧೧೦.

Mel. Wir glauben all' an Einen Gott.

೧. ನಾವೊಬ್ಬ ದೇವರಲ್ಲಿಯೇ—ಯೇಕವಾಗಿ ನಂಬುತ್ತೇವೆ;—ತ್ರಿಯೇಕನೆಂಬ ಕರ್ತಂಗೆ—ನಾವೆಲ್ಲೀಗ ನ

ಮ್ಮ ಸೇವೆ!—ತಂದೆ ಯೆಲ್ಲಾ ಉಂಟು ಮಾಡಿ,—ಸರ್ವವ್ಯಾಪಿ, ಸರ್ವತ್ರಾಣಿ,—ಪರಿಶುದ್ಧ, ಸರ್ವಜ್ಞಾನಿ,.... ಆಗಿ, ಸೃಷ್ಟಿಯಂ ಕಾಪಾಡಿ,—ಈ ಲೋಕದ ರಕ್ಷಣ್ಯವ—ಆದೀಲಿ ನಿಶ್ಚಯಿಸಿದ. ಆಮೆನ್.

೨. ನಾವೇಸು ಕ್ರಿಸ್ತನಲ್ಲಿಯೂ—ನಂಬುತ್ತೇವೆ ಯೇಕವಾಗಿ.—ಸ್ವಕೀಯ ತಂದೆಗೀತನು—ಆದಿಯಿಂ ಸಮಾನನಾಗಿ,—ಕನ್ಯಾಸ್ತ್ರೀ ಮರೀಯಳಿಂದ—ಪುಟ್ಟಿ ಸದ್ಮನುಷ್ಯನಾಗಿ,—ಕೆಟ್ಟು ಪೋದ ನಮಗಾಗಿ—ಸತ್ತು, ಗೋರಿಯೊಳಗಿಂದ—ಯೆದ್ದೇರಿ, ಘನದಾಡನೆ—ಬಂದಾನು ನ್ಯಾಯದಿನಕ್ಕೆ. ಆಮೆನ್.

೩. ಪವಿತ್ರ ಆತ್ಮನಲ್ಲಿಯೂ—ನಂಬಿ, ಐಕ್ಯವಾಗಿದ್ದೇವೆ.—ಸಮಾನ ಘನಗುಣವು—ಈತನಲ್ಲುಂಟೆನ್ನುತ್ತೇವೆ.—ವಾಳ್ಕೇ ಶಾಂತಿ, ಶ್ರೇಷ್ಟ ದಾನ,—ಭಕ್ತಗೀತ ಕಾಡಲಾಪ;—ಮನ್ನಿಸಿ ಅದೆಮ್ಮ ಪಾಪ;—ಉಂಟೀ ದೇಹಕ್ಕೆ ಉತ್ಥಾನ;—ಕಡೇಲಿ ಭಕ್ತಗಣಕ್ಕೆ—ಅನಂತ ಜೀವ ಸಿದ್ಧವೇ—ಆಮೆನ್.

೧೧೧.

Mel. Wir sind ein Eigenthum des Lamms.

೧. ಓ ಪ್ರಿಯ ಕರ್ತ, ನಿನಗೆ—ಸ್ವಕೀಯ ಜನವಾಗಿ

ದ್ಧೇವೆ.—ನಿನ್ನರಿತವ ನಿನ್ನ ಸೇವೆ—ಸಂತೋಷದಿಂದ ಮಾಡನೇ!

೨. ಓ ರಾಜಾ, ನನ್ನ ಪ್ರಾದಕ್ಕೆ—ನಿನ್ನಂತೆ ಯಜಮಾನನೆಲ್ಲಿ?—ನೀ ಶ್ರಮ ತಾಳಿ, ರಕ್ತ ಚೆಲ್ಲಿ,—ರಕ್ಷಣ್ಯ ಮಾಡಿದ್ದೆನಗೆ.

೩. ವಿಸ್ತಾರ ಮಾರ್ಗವಾರಿಸಿ,—ಅನೇಕರ್ ತಪ್ಪಿ ಪೋಗು ದರೇನು?—ನಾ ಸಣ್ಣ ದಾರಿ ಹಿಡಿದ್ದೇನು;—ಆ ಜೀವ ನನಗೆ ಗತಿ.

೪. ಶಕ್ತೀ ನನ್ನನ್ನು, ಕರ್ತನೇ!—ನಾ ಬಲಹೀನ; ನೀನೇ ಶಕ್ತ.—ನಿನ್ನಾಸರದಿ ಬಡ ಭಕ್ತ—ಶ್ರೇಯಾರ್ನು ನಿತ್ಯ ಸೌಖ್ಯಕ್ಕೆ.

೧೧೨.

Mel. My Jesus, be thou near me.

೧. ಈ ಜೀವಕತ್ತಲಲ್ಲಿ—ನಮ್ಮನ್ನು,—ಕರ್ತಾ, ಪ್ರಕಾಶ ಚೆಲ್ಲಿ—ನಡಿಸು!—ಯೇನಿಪಾದಲ್ಲಿ?—ಕ್ಷೇಮವನಲ್ಲಿ—ನೀ ಕಾದ ಬಲ್ಲಿ;—ಅದೇ ಬೇಕು.

೨. ಈ ಲೋಕಕಡಲಲ್ಲಿ—ನಮ್ಮನ್ನು—ವಿಶ್ವಾಸದೋಣಿಯಲ್ಲಿ—ದಾಟಿಸು!—ಇಲ್ಲಿ ಪ್ರಯಾಸ;—ಅಲ್ಲಿಯ ವಾಸ—ನಿತ್ಯ ವಿಲಾಸ;—ಅದೇ ಬೇಕು.

೧೧೩.

Mel. Ruhet wohl, ihr Todtenbeine.

೧. ದೇಹವು ಯೇಕಾಂತದಲ್ಲಿ—ಶಾಂತ ನಿದ್ದೆ ಗೈಯಲಿ!—ಚಿಂತೆ ಇಲ್ಲ; ಕಡೆಯಲ್ಲಿ—ಕರ್ತನದನ್ನೆಬ್ಬಿಸಿ,—ಗ್ಲೋರಿಯಿಂದ ಕರೆದಾನು,—ತಾನಿದ್ದಲ್ಲಿ ಸೇರಿಸ್ವಾನು.

೨. ಕ್ರಿಸ್ತನವಯವಂಗಳನ್ನು—ಮೃತ್ಯು ಹಿಡುಕಾಳ್ಳದು;—ಕರ್ತ ತನ್ನ ಶ್ವಾಸವನ್ನು—ಊದಿ ಮೇಲೆ ಬಿಡಲು,—ಕಾಳತದ್ದು ಚಿಗುರೀತು,—ಸತ್ತ ದೇಹ ಜೀವಿಸೀತು.

೩. ಯೇಸು ತಾನೇ ಸಾವಿಂದೆದ್ದು,—ಸಾವಿನಧಿಕಾರವ—ಹೊಂದಿದವನನ್ನು ಗೆದ್ದು,—ತನ್ನ ಭಕ್ತಜನರ—ನಿತ್ಯ ಕ್ಷೇಮಪೂರ್ತಿಯಲ್ಲಿ—ಸೇರಿಸ್ವಾನಾಕಾಶದಲ್ಲಿ.

೧೧೪.

Mel. Ei wie so selig schläfest du.

೧. ಓ ವಾಳ್ಳೇ ನಿದ್ದೆ ಗೈಯುತ್ತೀ—ಪ್ರಯಾಸ ಕಳೆದು;—ಶಾಂತ್ವಾಗಿ ಮಲಿಕಾಂಡಿದ್ದೀ—ಯೇಸುವ ಕೈಯೊಳು!

೨. ಸಂಕಷ್ಟ ನಿನಗ್ಯಾಸ್ಕರ—ತಾಳಿ ಕಾಂಡಾತನು—ಸಮಾಪ್ತವೆಂಬ ಜ್ಯಾಗುಳ—ನಿಂಗ್ಗಾಡಿಸಿದನು.

೩. ನೀನೀಗ ಭೂಮಿಯೊಳಗೆ—ಕಾಳಾಗಿ ಬೀಳುತ್ತೀ; ಅತಿಸೌಂದರ್ಯವಾಗಿಯೇ—ಆ ಮೇಲೆ ಯೇಳುವಿ.

೪. ನಿನ್ನತಿಪ್ರಿಯ ಮುಖವ—ಮಂಣಾಡಗಿಸಲಿ; ನಿಂನಾತ್ಮಕ್ಕೀಗಲುತ್ತಮ—ತೃಪ್ತ್ಯಾಯಿತು ಪರದಿ.

೫. ನಾವಿನ್ನೂ ಕೀಳಲೋಕದಿ—ದೇಶಾಂತರಿಗಳೇ; ಕರ್ತಾ, ನಮ್ಮನ್ನು ದಾಟಿಸಿ,—ವೈ ನಿನ್ನ ಕಡೆಗೆ.

೧೧೫.

Mel. Erheb', o Seele, deinen Sinn.

೧. ಈ ಭೂಮಿಗ್ಯಾತಕ್ಕಂಟುತ್ತೀ,—ಓ ಪ್ರಾಣ! ಮೇಲಕ್ಕೇರು!—ನೀ ಪರಲೋಕದ್ದಾಗಿದ್ದೀ;—ಸ್ವಸ್ಥಳದಲ್ಲಿ ಶೇರು!

೨. ಈ ಭ್ರಾಂತಿ ಯಾಕೆ? ನಿನಗೆ—ಈ ಲೋಕ ಕಾಡೋದೇನು?—ಆ ಲೋಕದಾಶೆ ಇದ್ದರೆ,—ಈ ಲೋಕತ್ಯಾಗವೇನು?

೩. ದೇವಜ್ಞನಾದ ಕ್ರೈಸ್ತಗೆ—ಭೂಸಂಗ ಹಿತವಲ್ಲ;—ಸದ್ಭಕ್ತ ದೇವರಲ್ಲಿಯೇ—ಸಂತೃಪ್ತನಾಗ ಬಲ್ಲ.

೪. ಕೇಡೆನ್ನ ಮೇಲೆ ಬಿದ್ದರೂ,—ನಿರಾಶೆ ಆಗೆನ್ನೈಯ;—ನಿಂನಕ್ಷಿಕಾಂತಿ ಯೆಂದಿಗೂ—ಉತ್ಸಾಹವೆನಗೈಯ.

೫. ಈ ಲೋಕ ಬೀಡು ಮಾತ್ರವೇ; —ನಂಗಿಲ್ಲಿ ಸ್ಥಾನವಿಲ್ಲ; —ಸ್ವಪಟ್ಣ ಪರಲೋಕದ್ದೇ; —ಅಲ್ಲ್ಯಾರ್ತಿ ಕುಂದ್ಯಾದಿಲ್ಲ.

೬. ಅಲ್ಲಿ ಸ್ವದೇಶ; ಅಲ್ಲಿಯೇ—ನಿರಂತ್ರ ಜೀವಜಲ; —ಹೋರಾಡುವವನಲ್ಲಿಯೇ—ಕಿರೀಟ ಹೊಂದಬಲ್ಲ.

೭. ಅಲ್ಲ್ಯೇಸು ಕ್ರಿಸ್ತನು ಪ್ರಭು····ಸಾಮ್ರಾಜ್ಯ ಸ್ಥಾಪಿಸ್ವಾನು; —ನಿನ್ನನ್ನು ನಿಜ ಮಹಿಮಾ····ಸಾರೂಪ್ಯ ಹೊಂದಿಸ್ವಾನು.

೮. ಈ ಲೋಕದಲ್ಲಿ, ಕರ್ತನೇ, —ಕಟಾಕ್ಷದಿಂ ಕಾಪಾಡು; ಅಲ್ಲಿ ನಿನ್ನೈಕ್ಯದೊಳಗೆ—ನನ್ನನ್ನು ಸೇರ ಮಾಡು!

೧೧೬.

Mel. Nun lob', mein Seel', den Herren.

೧. ನನ್ನಾತ್ಮ, ಕರ್ತನನ್ನು—ಆಸಕ್ತಿಯಿಂದ ಸ್ತುತಿಸೋ! —ಕಾರುಣ್ಯಪೂರ್ತಿಯನ್ನು—ನೀನೆಂದೂ ಮರ್ಯದೇ ಇರೋ! —ನಿನ್ನೀಶ ನಿನ್ನ ಪಾಪ—ತಾನ್ಹೊತ್ತು ದೇಹದೊಳ್, —ಸಮಸ್ತ ನಿನ್ನ ಶಾಪ—ತಾನ್ತಾಳ್ದ ಕ್ರೂಜೆಯೊಳ್. —ಓ ಭಕ್ತಾ, ನಿಂದೆಯನ್ನು—ತಾಳೋ! ನಿನ್ನರಸು—ಸ್ವರಾಜ್ಯದಿ ನಿನ್ನನ್ನು—ಸನ್ಮಾನಿಸುವನು.

೨. ಪವಿತ್ರ ನ್ಯಾಯವನ್ನು—ಯೆಹೋವ ತಿಳಿಸಿದನು;—ಅನಂತ ದಯವನ್ನು—ಕೃಪಾಳು ತೋರಿಸಿದನು.—ಶಿಟ್ಟನ್ನು ಬೇಗ ಬಿಟ್ಟು,—ವಿನಾಶ ಮಾಡದೆ—ಯಾವಾಗ್ಯೂ ಕೃಪೆ ಇಟ್ಟು—ದರಿದ್ರ ಜನಕ್ಕೆ,—ಭಕ್ತರ್ಗಾಲಿಯುತ್ತಾನೆ;—ಪೂರ್ವಕ್ಕೆ ಪಶ್ಚಿಮ—ಯೆಂಬಂತೆ ಮಾಡುತ್ತಾನೆ—ನಮ್ಮಪರಾಧವ.

೩. ತಂದೆ ಸ್ವಪುತ್ರರಿಂಗೆ—ಯೆಂಬಂತೆ ಕರ್ತ ದೇವರು—ಸ್ವಕೀಯ ಭಕ್ತರಿಂಗೆ—ಕಟಾಕ್ಷ ಮಾಡುತ್ತಿಹನು.—ಆತ ನಮ್ಮನ್ನು ಬಲ್ಲ;—ಮಣ್ಣೇ ನಮ್ಮೊಡಲು;—ಹುಟ್ಟೋ ಸಂತಾನವಲ್ಲ,—ಹೂವಂತೆ ಇಹೆವು.—ಗಾಳಿ ಹಾದ್ಯಾಗಲಾಗಿ—ಅದಿಲ್ಲದ್ಯಾಗ್ಯಾದು;—ಬರ್ಯಾದು ಶೀಘ್ರವಾಗಿ—ಮನುಷ್ಯನಂತ್ಯವು.

೪. ದಿವ್ಯ ಕಟಾಕ್ಷ ವಾಂದ್ಯೇ—ಯಾವಾಗ್ಯೂ ಸ್ಥಿರವಾಗಿದೆ;—ದೃಢಾಶ್ರಯವಿದಾಂದ್ಯೇ—ಸದ್ಭಕ್ತ ದೇವಸಭೆಗೆ.—ಯೆಹೋವನಾಳುತ್ತಾನೆ—ಭೂಪರಲೋಕದಿ;—ನಮ್ಮಪ್ಪನಾಗಿದ್ಧಾನೆ;—ಸಾರಿ, ಕೊಂಡಾಡಿರಿ—ಈ ದೊಡ್ಡ ನಾಮವನ್ನು,—ಬಲಿಷ್ಟ ದೂತರ್ಯೇ!—ನೀನೂ ಯೆಹೋವನನ್ನು—ಕೊಂಡಾಡೆನ್ನಾತ್ಮವ್ಯೇ!

೧೧೭.

Mel. Herr Jesu, Gnadensonne.

೧. ಓ ನೀತಿಸೂರ್ಯನಾದ—ಸಜ್ಜೀವಬೆಳಕೇ!—ಕಟಾಕ್ಷಪೂರ್ತಿಯಾದ—ಓ ಕರ್ತಾ ಯೇಸುವೇ!—ಕಾದು ಸಜ್ಜೀವವನ್ನೂ—ಸುಜ್ಞಾನಬೆಳಕನ್ನೂ—ಕೆಟ್ಟೋದ ಪಾಪಿಗೆ!

೨. ನಂನೆಲ್ಲಾ ಪಾಪವನ್ನು—ನೀ ಮನ್ನಿಸೆನಗೆ;—ಬಿಟ್ಟೆಲ್ಲಾ ಶಾಪವನು—ಬಾ, ಬಾ ಸಹಾಯಕ್ಕೆ!—ನೀ ಕೊಟ್ಟು ಸಮಾಧಾನ—ನನ್ನಾತ್ಮದನ್ನಪಾನ;—ಆಲೈಸಾ, ಕರ್ತನೇ!

೩. ನನ್ನಾತ್ಮದೊಳಗಿಂದ—ಪೊಳ್ಳು ದುರ್ಗುಣವ—ಬಿಸಾಟು, ಇಂದಿನಿಂದ—ನಾ ನಿನ್ನ ಚಾಕ್ರಿಯ—ಸಂತೋಷವಾಗಿ ಮಾಡ,—ನಿನ್ನನ್ನೆಂದೂ ಕಾಂಡಾಡ,—ಪ್ರೇರೇಪಿಸಾತ್ಮವ!

೪. ಆತ್ಮ ಪ್ರಾ, ಜ್ಞಾನವನ್ನು—ನಂನಲ್ಲಿ ಪೊಟ್ಟಿಸು! ಸದ್ವಾಕ್ಯದಿಂದ ನನ್ನ—ವಿವೇಕ ವ್ಯಾಪಿಸು!—ವಿಶ್ವಾಸದೈಕ್ಯದಲ್ಲಿ,—ಸಹಾಯ್ದ್ರಪ್ರೀತಿಯಲ್ಲಿ,—ನನ್ನನ್ನು ಬೆಳಿಸು!

೫. ನಾ ನಿನ್ನ ಶಿಷ್ಯನಾಗಿ—ದುರಾಶೆ ತ್ಯಜಿಸಿ,—ಪಾಪಕ್ಕೆ ಮೃತನಾಗಿ—ನಿಂನಲ್ಲಿ ಬಾಳಲಿ!—ನಿನ್ನನ್ನು ಹಿಂ

ದಟ್ಟೇನು—ಕ್ರೂರಜೆಯ ಸ್ವೈರಿಸ್ಯೇನು—ನೀ ಕೊಟ್ಟ ಬಲದಿ.

೬. ನೀನಿಲ್ಲದೆ ನಾ ಭ್ರಷ್ಟ;—ನನ್ನನ್ನು ದೃಷ್ಟಿಸು,—ಓ ಕರ್ತ; ಆತ್ಮನಷ್ಟ—ನಾ ಪಡ ಬಾರದು!—ನಿನ್ನ ಸುಚಿತ್ತವನ್ನು—ಪೂರೈಸ, ಶಕ್ತಿಯನ್ನು—ಕೊಟ್ಟೆನ್ನ ಸಲಹು!

೧೧೮.

Mel. Gott will's machen.

೧. ಯೇಸುವಿನ—ದಯ ನಿನ್ನ—ಒಂದಾಶ್ರಯವಾಗಿದೆ.—ಯೆಲ್ಲಾ ತಾನು—ನಡಿಸ್ವಾನು—ಉತ್ತಮ ಪ್ರಕಾರವೇ.

೨. ನಿನ್ನನ್ನಾಳ್ದ,—ನಿನ್ನ ಕಾಯ್ದ—ಕರ್ತ ನಿದ್ದೆ ಮಾಡ್ವಾನೇ?—ಭಯ ಬಿಟ್ಟು,—ನಂಬಿಗಿಟ್ಟು,—ಹೃದವೆತ್ತು ಮೇಲಕ್ಕೆ!

೩. ತಡದಲ್ಲಿ,—ತ್ವರೆಯಲ್ಲಿ,—ಆತ ತಂದೆಯೇ ಸರಿ;—ನಿನ್ನ ಕಷ್ಟ—ನಿನ್ನ ನಷ್ಟ—ನ್ಯಾಯೋದಾತನೆದ್ಯೋಲಿ.

೪. ಆತನತಿ....ಶ್ರೇಷ್ಠ ಗತಿ—ನಿಂಗೆ ನೇಮಿಸಿದನು.—ಶಾಂತನಾಗಿ—ಇರಲಾಗಿ—ನಿನ್ನ ಚಿಂತೆ ಹೋಗ್ಯಾದು.

೫. ನಿನ್ನ ಸುಖ—ನಿನ್ನ ದುಖ್ಖ—ಕಳುಹುವನಾತನು.—ಚಿಂತೆ ಯೇನು?—ಭಯವ್ಯೇನು?—ಆತಗೆಲ್ಲಾ ವೊಪ್ಪಿಸು!

೬. ಹೋರು ನಿನ್ನ—ಯೇಸುವಿನ—ಹೌರವಾದ ನಾಗವ!—ನಿನಗಲ್ಲಿ,—ಪೀಠದಲ್ಲಿ,—ಈವನು ಕಿರೀಟವ.

೧೧೯.

Mel. Gelobt sei Gott im höchsten Thron.

೧. ನಮ್ಮ್ಯೇಲು ಪ್ರಾಯಶ್ಚಿತ್ತವ—ಮಾಡಿಪ್ಪ ದೇವಪುತ್ರನ—ಕೊಂಡಾಡಿ ಕಂದ್ಯೇ ಸಹಿತ!—ಹಲ್ಲೆಲೂಯಾ!

೨. ತೃತೀಯ ದಿನ ಬೆಳಿಗ್ಗೆ—ಗೋರಿ ಮುಚ್ಚಿರುವಲ್ಲಿಯೇ—ಉತ್ಥಾನವಾದ ಜೀವಕ್ಕೆ.—ಹಲ್ಲೆಲೂಯಾ!

೩. ಸಾವನ್ನು ಜೈಸಿ ಯೆದ್ದನು;—ಸಂಕಷ್ಟವೆಲ್ಲಾ ಗೆದ್ದನು.—ನಮ್ಮಪರಾಧ ತೆತ್ತನು.—ಹಲ್ಲೆಲೂಯಾ!

೧೨೦.

Mel. Wer nur den lieben Gott lässt walten.

೧. ನಂಬಿಕಿಪ್ರಿಯ ದೇವರಲ್ಲಿ;—ಆತಂಗೆ ಯೆಲ್ಲಾ ವೊಪ್ಪಿಸು!—ನಿನ್ನನ್ನು ಯೆಲ್ಲಾ ಕಷ್ಟದಲ್ಲಿ—ಆಶ್ಚರ್ಯ

ವಾಗಿ ಕಾಯ್ಟನು.—ಕರ್ತನ ನೆಲದಲ್ಲಿಯೋ—ಕಟ್ಟಿಪ್ಪು ಮನೆ ಬಿದ್ದೀತೋ?

೨. ಅಘೋರ ಚಿಂತೆಯಿಂದ ಯೇನು?—ನಮ್ಮಾಪತ್ತನ್ನು ಧ್ಯಾನಿಸೆ—ನಾವನುದಿನ ಅತ್ತರೇನು?—ಈ ದುಖ್ಖವೆಲ್ಲಾ ಯಾತಕ್ಕೆ?—ಈ ದುಖ್ಖವುಳ್ಳ ಮನಸ್ಸು—ಸಂಕಷ್ಟ ಪೊಟ್ಟಿಸುವದು.

೩. ನಿನ್ನಾತ್ಮವೆಂದೂ ದೇವರನ್ನು—ನೋಡಿ ನಿಧಾನವಾಗಲಿ!—ನೀನಾತನ ಸುಚಿತ್ತವನ್ನು—ನೋಡಿ ಕೃತಾರ್ಥನಾಗುವಿ;—ಸ್ವೀಕರಿಸಿದ ದೇವರು—ಅವಸ್ಥೆ ಯೆಲ್ಲಾ ಬಲ್ಲನು.

೪. ಕರ್ತಂಗೆ ನಮ್ಮ ಗುಣಕ್ಕಾಗಿ—ವಾಳ್ಳೇ ಮುಪೂರ್ತ ಗಾತ್ತದೆ;—ಆತನ್ನ ಮಾತ್ರ ಸತ್ಯವಾಗಿ—ನಾವೆಂದೂ ಪಾತ್ತಿ ಕೊಂಡರೆ,—ಕೃಪಾಳುವಾತ ಫಕ್ಕನೆ—ಬಂದಾನು ನಮ್ಮ ನ್ಯಾಯಕ್ಕೆ.

೫. ಸಂಕಷ್ಟಗಳ ಬೆಂಕಿಯಲ್ಲಿ—ದೇವ್ರೆನ್ನ ಬಿಟ್ಟನೆನ್ನದೆ,—ಸೌಭಾಗ್ಯ ಪೊಂದಿದವನಲ್ಲಿ—ಕಟಾಕ್ಷವಿಟ್ಟನೆನ್ನದೆ,—ನೋಡಂತ್ಯವನ್ನು; ಕಡೆಗೆ—ತೋರೀತು ಪೊಟ್ಟು ಕಡಿಮೆ.

೬. ಶ್ರೀಮಂತನಿಗೆ ಬಡತನ—ಸರ್ವೇತ ಕಾಡಲಾರವೇ?—ದರಿದ್ರನಿಗೆ ದೊಡ್ಡ ಧನ—ಕೊಡೋಣ ಸಣ್ಣದಾ

ಠಗೆ.—ವಾಬ್ಬನ್ನ ಯೆತ್ತಿ, ಕೆಳಗೆ—ಮತ್ತಾಬ್ಬನನ್ನು ದಾ ಬ್ಬನ್ಯೇ?

೭. ಯೆಂದೂ ಬಿನ್ನೈಸುತ್ತಾ ಪೂರ್‍ಯೋರಾದಿ—ಸದ್ಭಕ್ತನಾಗಿ ನಡದು—ದಯಾಪರನ್ನ ಸ್ತ್ಯೋತ್ರ ಮಾಡಿ—ಆತನ್ನ ನಂಬಿ ಕಾಂಡಿರು;—ವಿಶ್ವಾಸಿಯನ್ನು ದ್ಯೇವರು—ಯೆಂದೆಂದೂ ಬಿಡಲಾರನು.

೧೨೧.

Mel. Meinen Jesum ich erwähle.

೧. ನನ್ನ ಯ್ಯೇಸುವಾಯುತ್ತ್ಯೇನೆ;—ಆತನತಿಪ್ರಿಯನ್ಯೇ.—ನಾನು ಪಾಪಿಷ್ಟವಾಗಿದ್ಧ್ಯೇನೆ;—ಆತ ಜೀವಜ್ಯೋತಿಯ್ಯೇ.—ನನ್ನ ಆತ್ಮದಾಪ್ತನ್ಯೇ,—ಯ್ಯೇಸುವ್ಯೇ,—ವಾಸಮಾಡೆನ್ನಾಳಗೆ;—ವ್ಯೆ ನನ್ನನ್ನು ಮ್ಯೇಲಕ್ಕೆ!

೨. ನನ್ನ ಯ್ಯೇಸುವಾಯುತ್ತ್ಯೇನೆ;—ಕ್ರಿಸ್ತಮೂರ್ತಿಯಿಂದಲ್ಯೇ—ಪರಿಪೂರ ಪೂಂದಿದ್ಧ್ಯೇನೆ.—ಕ್ಷಯವಿಲ್ಲ ನನಗೆ.—ನನ್ನ ಆತ್ಮದಾಪ್ತನ್ಯೇ,—ಯ್ಯೇಸುವ್ಯೇ,—ವಾಸಮಾಡೆನ್ನಾಳಗೆ;—ವ್ಯೆ ನನ್ನನ್ನು ಮ್ಯೇಲಕ್ಕೆ!

೩. ನನ್ನ ಯ್ಯೇಸುವಾಯುತ್ತ್ಯೇನೆ;—ಆತ ಪರಿಶುದ್ಧನ್ಯೇ.—ನನ್ನ ಆತ್ಮವೆತ್ತಿದ್ಧ್ಯೇನೆ—ರಕ್ಷಕನ ಬಳಿಗೆ.—ನನ್ನ

ಆತ್ಮದಾಪ್ತನೇ,—ಯೇಸುವೇ,—ವಾಸ ಮಾಡೆನ್ನೊಳಗೆ; ಒಯ್ ನನ್ನನ್ನು ಮೇಲಕ್ಕೆ!

೪ ನನ್ನ ಯೇಸುವಾಯುತ್ತೇನೆ;—ಆತ್ಮ ವಾಪ್ತಿ ಪಾಶಗೆ—ಕ್ಷೇಮವಾಗಿ ಸಾಯುತ್ತೇನೆ;—ಆತನೆನ್ನ ಬಿಟ್ಟಾನೇ?—ನನ್ನ ಆತ್ಮದಾಪ್ತನೇ,—ಯೇಸುವೇ,—ವಾಸ ಮಾಡೆನ್ನೊಳಗೆ;—ಒಯ್ ನನ್ನನ್ನು ಮೇಲಕ್ಕೆ!

೫. ನನ್ನ ಯೇಸುವಾಯುತ್ತೇನೆ;—ಆತನಲ್ಲಿ ನಂಬಿಕೆ—ಇಟ್ಟು, ಗ್ಯಾರಿ ಪೋಯುತ್ತೇನೆ—ಆಚೆಯ ವಿಶ್ರಾಂತಿಗೆ.—ನನ್ನ ಆತ್ಮದಾಪ್ತನೇ,—ಯೇಸುವೇ,—ವಾಸ ಮಾಡೆನ್ನೊಳಗೆ;—ಒಯ್ ನನ್ನನ್ನು ಮೇಲಕ್ಕೆ!

೧೨೨.

Mel. Ach Gott und Herr.

೧. ಓ ದೇವರೇ,—ಕರುಣಾವೇ—ನಾ ನಡಿಸಿದ ಪಾಪ;—ಸೃಷ್ಟ್ಯೊಳಗೆ—ಯಾರೆನಗೆ—ಸಹಾಯ ಮಾಡಲಾಪ?

೨. ಯಾರಿಂದಲೂ—ಅದಾಗದು;—ನೀನೊಬ್ಬ ನನ್ನ ತಂದೆ.—ಯೇಸುವೊಳು—ನೀ ಮನ್ನಿಸು!—ನಿನ್ನಾಸರಕ್ಕೆ ಬಂದೆ.

೩. ಓ ಕರ್ತನೇ—ನೀ ದಂಡನೇ—ಕೊಟ್ಟಾಗ್ಯೂ, ಸೈರಿ

ಸ್ಯೇನು;—ಅದಿಪಾದಿ—ನಾ ಪೊಂದಲಿ!—ನಾ ಶುಷ್ಟ ನಾಗಿದ್ದೇನು.

೪. ನೀನಲ್ಲಿಯ್ಯೇ—ವಿಮೋಚನ್ಯೇ,—ಓ ಕರ್ತಾ, ದಯ ಮಾಡು!—ನಿಂನ್ಯೆಕ್ಯದ—ಸಂತೃಪ್ತಿಯ—ಕಾಟ್ಟಾತ್ಮವ ಕಾಪಾಡು!

೫. ಓ ರಕ್ಷಕಾ—ನನ್ನಾಸರ—ಐದು ಘಾಯಂಗಳಲ್ಲಿ. ಅಲ್ಲಿಪುದು—ಸುಕ್ಷ್ಯೇಮವು—ಸಮಸ್ತ ಕಷ್ಟದಲ್ಲಿ.

೧೨೩.

Mel. Ein Lämmlein geht und trägt die Schuld.

೧. ಈ ಲೋಕದಪರಾಧವ—ಕಾಂಡ್ಯಾವ ಕುರಿಮರಿ—ತಾಳುತ್ತದೆ ಪಾಪಿಷ್ಟರ—ಪಾಪಂಗಳಿಗೆ ಸರಿ.—ಅದ್ದಾಗಿ, ಸುಖವಗಲಿ,—ಶಾಂತ್ವಾಗಿ ಜೀವ ವಾಪ್ಪಿಸಿ,—ಬಲ್ವಾಗಿ ಕಾಯ್ವುಲ್ಪಟ್ಟು,—ತಕ್ಕಾಳುತ್ತದೆ ಸಂಕಟ—ಪೆಟ್ಟಾಸ್ಪು ಘಾಯ ಮರಣ,—ಸಮಸ್ತಕಾಡಂಬಟ್ಟು.

೨. ಆ ಕುರಿಮರಿ ನಮಗೆ—ಅಕ್ರಿಷ್ಟ ಯೇಸು ತಾನ್ಯೇ;—ಇತನ್ನ ಪಾಪನಾಶಕ್ಕೆ—ದೇವ್ರಾದು ಕಾಂಡಿದಾನೆ.—„ನೀ ಪೋಗಿ, ಪಾವ ತಾಳೆಲಾ!—ವಿಮೋಚಿಸು ಪಾಪಿಷ್ಟರ!—ಇದಕ್ಕೆ ನೀನ್ಯೇ ಶಕ್ತ;—ಕ್ಯಾಪಾಗ್ಗಿ, ಪಾಪ

ದಂಡನೆ,—ದೊಡ್ಡದು; ಪ್ರಾಯಶ್ಚಿತ್ತಕ್ಕೆ—ಉಪಾಯ ನಿನ್ನ ರಕ್ತ."

೩. „ಸಂತೋಷವಾಗಿ, ತಂದೆಯೇ,—ನಾನೆಲ್ಲಾ ಸ್ತೈರಿಸೇನು.—ನಾ ಹ್ಯಾಗೆ ನಿನ್ನ ಮಾತಿಗೆ—ವಿರೋಧ ನಡದೇನು?" — ಆಶ್ಚರ್ಯವಾದ ಪ್ರೀತಿಯೇ! — ಸ್ವಕೀಯ ಪುತ್ರ ದೇವರ್ಗೆ—ನಿನ್ನಿಂದ ದೂರವಾದ. — ಓ ಬಲವುಳ್ಳ ಪ್ರೀತಿಯೇ — ಪ್ರಶಸ್ತ ಜೀವರಾಜನೇ — ನಿನ್ನಿಂದ ಘಾತವಾದ.

೪. ಓ ಪ್ರೀತಿಯೇ! ನಾನೆಂದಿಗೂ—ನಿನ್ನನ್ನು ನೆನದೇನು;—ನೀನೆನ್ನ ಹಿಡಿದಿರಲು—ನಿನ್ನನ್ನಪ್ಪಿ ಕೊಂಡೇನು. —ನೀನೆನ್ನ ಜೀವಕಾಂತಿಯೇ; — ನಿನ್ನಾಳು ನಾನು; ನಿನಗೆ—ನನ್ನನ್ನು ಒಪ್ಪಿಸೇನು.—ಆ ಲೋಕವ ಪ್ರವೇಶಿಸಿ,—ನೀ ಕೊಟ್ಟ ಮಡಿವಸ್ತ್ರದಿ — ನಿಂನ್ಹತ್ತರ ನಿಂತೇನು.

೧೨೪.

Mel. Die wir uns allhier beisammen finden.

೧. ನಿನ್ನ ಮುಂದೆ ಹಾಡಂಬಡುತ್ತೇವೆ. — ಕ್ರೂಜೆ ತಾಳ್ದ ಕರ್ತನೇ! — ನಿಂನಲ್ಲೈಕ್ಯವಾಗಿ, ನಿತ್ಯಸೇವೆ — ಮಾಡುವಗೆ ನಿನಗೆ — ನಮ್ಮ ಬಡ ಸ್ತೋತ್ರಗಳಿಗಾಗಿ

ನೀನು, ಮೆಚ್ಚಿಕೆಯ ಗುರುತಾಗಿ,—ನಮಗಾಮೆನ್ ಯೆ ನಲು—ಸಮಾಧಾನ ಪಾಲಿಸು!

೧೨೫.

Mel. Mit tausend Gaben.

೧. ಮಹಾಉದಾರಿ, — ಸರ್ವೋಪಕಾರಿ! — ಕೊಟ್ಟು ಹಾಂದನ್ನು—ಲಾಲಿಸೆನ್ನನ್ನು—ನನಗೂ ತಂದೆ ಆದಾ ತನೇ—ಆತ್ಮವ ಕಾಡು ಬಡವಗೆ!

೨. ಈ ಹಾತ್ಸು ನನ್ನ—ಹೃದಯವನ್ನ—ಕ್ರಿಸ್ತ ನಿಗಾಗಿ—ಯೆಳೆಯಲಾಗಿ—ಪ್ರೀತಿ ಯೆಂನಾಳು ಹುಟ್ಟಿ ಸೇ—ಆತ್ಮವ ಕಾಡು ಬಡವಗೆ!

೩. ಆತ ಸಜ್ಜೀವ;—ಸುಸಾರವೀವ — ಕುಡಿಗಳಲ್ಲಿ; ಈ ಬಳ್ಳಿಯಲ್ಲಿ—ಸೇರಿಸೆನ್ನನ್ನು, ತಂದೆಯೇ!—ಆತ್ಮ ವ ಕಾಡು ಬಡವಗೆ!

೪. ನೀ ನೆಟ್ಟ ಭಕ್ತಿ—ನೀ ಕೊಟ್ಟ ಶಕ್ತಿ—ಫಲವೆಂನ ಲ್ಲಿ—ಫಲಿಸುವಲ್ಲಿ, — ನಿನಗೆ ಮಾತ್ರ ಮಹಿಮೆ:— ಆತ್ಮವ ಕಾಡು ಬಡವಗೆ!

೧೨೬.

S. M. Ps. 67. To bless thy chosen race.

೧. ಸ್ವಕೀಯ ಪ್ರಜೆಯ—ಓ ಕರ್ತಾ, ಸಲಹು;—
ಸ್ವಮುಖದ ಪ್ರಕಾಶವ—ಭಕ್ತರ್ಗೆ ಮೂಡಿಸು!

೨. ನಿನ್ನದ್ಭುತಗಳು—ಯೆಲ್ಲೂ ಗೊತ್ತಾಗಲಿ;—
ಲೋಕಾಂತ್ಯ ಮುಕ್ತಿ ಹೊಂದಲು—ನಿಂಗೇಳಲಿ ಸ್ತುತಿ!

೩. ನಾನಾ ಜನಂಗಳು—ಸನ್ಮಾನ ಮಾಡಲಿ;—ಭೂ
ಲೋಕವೆಲ್ಲಾ ನಿನ್ನನ್ನು,—ಕರ್ತಾ, ಕೊಂಡಾಡಲಿ!

೧೨೭.

C. M. O thou from whom all goodness flows.

೧. ಓ ಕೃಪಾಮೂಲ, ಕರ್ತನೇ,—ನೀನೆನ್ನಾಶ್ರಯ
ವು—ಸಮಸ್ತ ಕಷ್ಟದೊಳಗೆ—ನನ್ನನ್ನು ನೆನಸು!

೨. ಅಘೋರ ಪಾಪಭಾರವ—ನಾ ತಾಳದಿರಲು,—
ನೀ ಮನ್ನಿಸಿ, ಸುಶಾಂತಿಯ—ಕೊಟ್ಟೆನ್ನ ನೆನಸು!

೩. ನಾ ತಪ್ಪಿ ಹೋಗಲಾರದ—ಸಂಕಷ್ಟ ಹುಟ್ಟಲು,
ದಿನಕ್ಕೆ ತಕ್ಕ ಶಕ್ತಿಯ—ಕೊಟ್ಟೆನ್ನ ನೆನಸು!

೪. ಈ ಬಲಹೀನ ದೇಹವ—ರೋಗಾದಿ ತಿನ್ನ
ಲು,—ಸಹಾಯ, ಶಾಂತಿ, ತಾಳ್ಮೆಯ,—ಕೊಟ್ಟೆನ್ನ ನೆನಸು!

೫. ನಾ ನಿನಗಾಗಿ ನಿಂದೆಯ—ತಾಳಿಪ್ಪವನಾದರೂ,—
ಅದೇನು? ನಿನ್ನ ದಾಸನ—ನೀ ಮಾತ್ರ ನೆನಸು!

